

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 20 ಶನಿವಾರ 2024

ಸಂಪುಟ: 44 | ಸಂಚಿಕೆ: 273 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಮೊದಲ ಬಾರಿಗೆ ಅಯೋಧ್ಯೆಯ ಬಾಲರಾಮನ ದರ್ಶನ

ಭಕ್ತಿ ಭಾವ ಮೂಡಿಸುವ ಮಂದಸ್ಮಿತ ಮುಖಭಾವ

ಅಯೋಧ್ಯೆ, ಜ.19– ಅಯೋಧ್ಯೆ ರಾಮಮಂದಿರದ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿರುವ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ರೂಪಿಸಿರುವ ಬಾಲರಾಮನ ವಿಗ್ರಹವು ಹತ್ತು–ಹಲವು ವಿಶೇಷತೆಗಳಿಂದ ಕೂಡಿದೆ. 51 ಇಂಚು ಎತ್ತರ ವಿರುವ ಮಂದಸ್ಮಿತ ಮುಖಭಾವ ಹೊಂದಿರುವ ಬಾಲರಾಮನ ಮೂರ್ತಿಯು ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ಬಿಲ್ಲು ಹಿಡಿದಿರುವ ಭಂಗಿಯಲ್ಲಿದೆ. ಬಾಲರಾಮನ ಹಣೆಯ ಮೇಲೆ ತಿಲಕವಿದೆ. ಮೂರ್ತಿಯ ಮೇಲ್ಭಾಗ ಸೂರ್ಯ ವಂಶದ ಶ್ರೀರಾಮ ಚಂದ್ರನನ್ನು ಬಿಂಬಿಸುವಂತಹ ಸೂರ್ಯದೇವರ ಕೆತ್ತನೆ ಮಾಡ ಲಾಗಿದೆ. ಬಾಲರಾಮನ ಮೂರ್ತಿಯು ಚಂದ್ರನ ನಾಚಿಸುವಷ್ಟು ಕಾಂತಿಯ ಅದ್ಭುತ ಕಳೆಯಲ್ಲಿದೆ. ಬಾಲರಾಮನ ಕಿರೀಟದ ಮೇಲೆ ನರಸಿಂಹ ದೇವರ ಕೆತ್ತನೆ ಇದೆ. ದಶಾವತಾರ ಬಿಂಬಿಸುವ ಮತ್ಸ್ಯ, ಕೂರ್ಮ, ವರಾಹ, ವಾಮನ, ಕೃಷ್ಣ, ಕಲ್ಕಿ, ಬುದ್ಧ, ಪರಶುರಾಮ, ಬ್ರಹ್ಮ, ಓಂ, ಆದಿಶೇಷ, ಚಕ್ರ ಹಾಗೂ ಈಶ್ವರ ಕೆತ್ತನೆಯು ಮೂರ್ತಿಯ ಪ್ರಭಾವಳಿ ಬಲಭಾಗದಲ್ಲಿದೆ. ಇನ್ನು ವಿಗ್ರಹದ ಎಡಭಾಗದ ಪ್ರಭಾವಳಿಯಲ್ಲಿ ● 7ನೇ ಪುಟಕ್ಕೆ



ರಾಮ ಮಂದಿರದಡಿ ಭಕ್ತಿಯ ಭವಿಷ್ಯ ಭಂಡಾರ!

ಅಯೋಧ್ಯೆ: 500 ವರ್ಷಗಳಿಗೂ ಅಧಿಕ ಕಾಲದ ಹೋರಾಟದ ಬಳಿಕ ಇದೀಗ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗುತ್ತಿದ್ದು, ಭವಿಷ್ಯದಲ್ಲಿ ಇನ್ನೆಂದೂ ಇಂತಹ ವಿವಾದವಾಗದಂತೆ ಮಂದಿರ ನಿರ್ಮಾಣದ ಉಸ್ತುವಾರಿ ವಹಿಸಿರುವ "ರಾಮ ಜನ್ಮ ಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್" ಇದಕ್ಕೊಂದು ಮಾಸ್ಟರ್ ಪ್ಲಾನ್ ರೂಪಿಸಿದೆ.

ಅಯೋಧ್ಯೆಯ ರಾಮಮಂದಿರದ ಭವ್ಯ ಕಟ್ಟಡದ ಕೆಳಗೆ, 2000 ಅಡಿಗಳಷ್ಟು ಆಳದಲ್ಲಿ ಒಂದು 'ಟೈಮ್ ಕ್ಯಾಪ್ಸೂಲ್' ಅನ್ನು ಇರಿಸಲಾಗುತ್ತಿದ್ದು, ಇದು ರಾಮ ಜನ್ಮ ಭೂಮಿಯ ಭವ್ಯ ಇತಿಹಾಸವನ್ನು ಒಳಗೊಂಡಿರುವ ಮಾಹಿತಿ ಕೋಶ ವಾಗಿರಲಿದೆ ಎಂದು ಹೇಳಲಾಗಿದೆ. ಟೈಮ್ ಕ್ಯಾಪ್ಸುಲ್ ರಾಮ ಜನ್ಮಭೂಮಿಯ ವಿವರವಾದ ಇತಿಹಾಸವನ್ನು ಹೊಂದಿ ರುತ್ತದೆ ಎನ್ನಲಾಗಿದೆ. ಟ್ರಸ್ಟ್‌ನ ಸದಸ್ಯರ ಪ್ರಕಾರ, ಈ ಪ್ರದೇಶದ ಬಗ್ಗೆ ಭವಿಷ್ಯದಲ್ಲಿ ತಲೆದೋರಬಹುದಾದ ಯಾವುದೇ ವಿವಾದವನ್ನು ತಪ್ಪಿಸುವ ಸಲುವಾಗಿ ಸಮಗ್ರ ಮಾಹಿತಿ ತುಂಬಿದ ಈ ಕ್ಯಾಪ್ಸೂಲ್ ಅನ್ನು ಸೈಟ್‌ನ ಕೆಳಗೆ ಇರಿಸಲಾಗುತ್ತದೆ. ರಾಮ ಮಂದಿರದ ಇತಿಹಾಸದ ವಿವಿಧ ಅಂಶಗಳನ್ನು ಇದು ಹೊಂದಿರುತ್ತದೆ. ● 7ನೇ ಪುಟಕ್ಕೆ

ಮಾರ್ಚ್ ಮೊದಲ ವಾರ ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟ

● ಏಳರಿಂದ ಒಂಭತ್ತು ಹಂತದಲ್ಲಿ 543 ಕ್ಷೇತ್ರಗಳಿಗೆ ಚುನಾವಣೆ ● ಫೆಬ್ರವರಿ ಅಂತ್ಯಕ್ಕೆ ಬಜೆಟ್‌ಗೆ ಅನುಮತಿ ಪಡೆಯಲು ರಾಜ್ಯಗಳಿಗೆ ಮಾಹಿತಿ ● ಜನವರಿ ಅಂತ್ಯದವರೆಗೆ ಅಧಿಕಾರಿ ವರ್ಗಾವರ್ಗಿಗೆ ಸರ್ಕಾರಕ್ಕೆ ಅವಕಾಶ; ನಂತರ ಚುನಾವಣಾ ಆಯೋಗದ್ದೇ ನಿರ್ಧಾರ



ಬೆಂಗಳೂರು, ಜ.19– ಬರುವ **ಮಾರ್ಚ್ ಮೊದಲ ವಾರ ಲೋಕಸಭಾ ಚುನಾವಣೆ ದಿನಾಂಕಗಳು ಪ್ರಕಟವಾಗಲಿವೆ.**

ಕೇಂದ್ರ ಚುನಾವಣಾ ಆಯೋಗ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಏಳರಿಂದ ಒಂಭತ್ತು ಹಂತಗಳಲ್ಲಿ ಲೋಕಸಭೆಯ 543 ಸ್ಥಾನಗಳಿಗೆ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ನಿನ್ನೆ ನಡೆದ ಸಂಪುಟ ಸಭೆಯಲ್ಲಿ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಮಾಹಿತಿ ನೀಡಿ, ಫೆಬ್ರವರಿ 23ರ ಒಳಗೆ 2024–25ರ ಮುಂಗಡಪತ್ರಕ್ಕೆ ಅನುಮತಿ ಪಡೆದುಕೊಳ್ಳಬೇಕು ಎಂದಿದ್ದಾರೆ.

ಚುನಾವಣಾ ಆಯೋಗವು ಎಲ್ಲಾ ರಾಜ್ಯಗಳಿಗೆ ಮಾಹಿತಿ ನೀಡಿ, ಫೆಬ್ರವರಿ ಮೂರನೇ ವಾರದ ವೇಳೆಗೆ ಮುಂಗಡಪತ್ರ ಮಂಡಿಸಿ ಅನುಮೋದನೆ ಪಡೆದುಕೊಳ್ಳುವಂತೆ ಮತ್ತು ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ಗಡುವು ನೀಡಿದೆ. ಆಯೋಗದ ಸಲಹೆಯಂತೆ ನಿನ್ನೆ ನಡೆದ ಸಂಪುಟ ಸಭೆಯಲ್ಲಿ ಫೆಬ್ರವರಿ 12 ರಂದು ವಿಧಾನ ಮಂಡಲದ ಅಧಿವೇಶನ ಕರೆದು 16ಕ್ಕೆ ಬಜೆಟ್ ಮಂಡನೆ ಮಾಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿತು.

ಸರ್ಕಾರಕ್ಕೆ ಬಂದಿರುವ ಉನ್ನತ ಮೂಲಗಳ ಮಾಹಿತಿ ಪ್ರಕಾರ ಕರ್ನಾಟಕದ 28 ಲೋಕಸಭಾ ಸ್ಥಾನಗಳಿಗೆ ಈ ಬಾರಿಯೂ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಏಪ್ರಿಲ್ ಅಂತ್ಯದ ವೇಳೆಗೆ ನಮ್ಮಲ್ಲಿ ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ, ಆದರೆ ಮತ ಎಣಿಕೆ ಮೇ ಮೂರನೇ ವಾರದಲ್ಲಿ ನಡೆಯುತ್ತದೆ ಎಂಬ ಮಾಹಿತಿ ಲಭ್ಯವಾಗಿದೆ.

ಚುನಾವಣಾ ಆಯೋಗದ ಸಲಹೆಯಂತೆ ಜನವರಿ ಮೂರನೇ ವಾರದ ನಂತರ ಸರ್ಕಾರ ಯಾವುದೇ ವರ್ಗಾವರ್ಗಿಗಳನ್ನು ಮಾಡುವಂತಿಲ್ಲ. ಆ ನಂತರ ಆಯೋಗ ತನಗೆ ಬೇಕಾದಂತೆ ಅಧಿಕಾರಿಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿಯೋಜಿಸಿಕೊಳ್ಳಬಹುದು, ಇದರಲ್ಲಿ ಸರ್ಕಾರಕ್ಕೆ ಯಾವುದೇ ಅಧಿಕಾರ ಇರುವುದಿಲ್ಲ. ಮಾರ್ಚ್ ಮೊದಲ ವಾರದಲ್ಲಿ ವೇಳಾಪಟ್ಟಿ ಪ್ರಕಟಗೊಂಡ ನಂತರ ಫಲಿತಾಂಶ ಹಾಗೂ ● 7ನೇ ಪುಟಕ್ಕೆ

ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಮಹಿಳೆಗೆ 87.17 ಲಕ್ಷ ರೂ. ವಂಚನೆ

ಪಾರ್ಟ್‌ಟೈಂ ಜಾಬ್ ಕೊಡಿಸುವುದಾಗಿ ಮತ್ತಿಬ್ಬರು ಮಹಿಳೆಯರಿಗೆ 32.43 ಲಕ್ಷ ರೂ. ಪಂಗನಾಮ

ಮೈಸೂರು, ಜ. 19(ಆರ್‌ಕೆ)– ಪಾರ್ಟ್‌ಟೈಂ ಜಾಬ್, ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಹಣ ದುಪ್ಪಟ್ಟು ಮಾಡುವ ನೆಪದಲ್ಲಿ ಲಕ್ಷಾಂತರ ರೂ. ಹಣ ವಂಚನೆ ಮಾಡುತ್ತಿರುವ ಪ್ರಕರಣಗಳು ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ನಡೆಯುತ್ತಿವೆ.

ಮೈಸೂರಿನ ಬೋಗಾದಿಯ ಅಶ್ವಿನಿ ಎಂಬ ಎಲ್‌ಐಸಿ ಏಜೆಂಟ್‌ರೊಬ್ಬರು ಆನ್‌ಲೈನ್ ಟ್ರೇಡಿಂಗ್ ವ್ಯವಹಾರದಲ್ಲಿ ಬರೋಬ್ಬರಿ 87,17,000 ರೂ. ಹಣ ಕಳೆದುಕೊಂಡಿದ್ದು, ನಿನ್ನೆ (ಜ. 18) ಅವರು ಮೈಸೂರು ನಗರದ ಸೈಬರ್, ಮಾದಕ ದ್ರವ್ಯ ಮತ್ತು ಆರ್ಥಿಕ ಅಪರಾಧ (ಸೆನ್) ಠಾಣೆಗೆ ದೂರು ನೀಡಿದ್ದಾರೆ. ಎಲ್‌ಐಸಿ ಏಜೆನ್ಸಿಯಿಂದ ಬ್ಯಾಂಕ್‌ನ ತಮ್ಮ ಖಾತೆಗೆ ಜಮಾ ಆಗಿದ್ದ 30 ಲಕ್ಷ ರೂ. ಕಮಿಷನ್ ಹಣ ಹಾಗೂ ಮಂಜೂರಾಗಿದ್ದ 25 ಲಕ್ಷ ರೂ. ಸಾಲದ ಹಣ ಮತ್ತು 2023ರ ಅಕ್ಟೋಬರ್‌ನಿಂದ 2024ರ ಜನವರಿ 5ರವರೆಗೆ ● 7ನೇ ಪುಟಕ್ಕೆ

ಲಾರಿ ಮುಷ್ಕರ ಹಿಂದಕ್ಕೆ




ಮೈಸೂರು, ಜ. 19(ಆರ್‌ಕೆ)– ಮೈಸೂರು ಜಿಲ್ಲಾ ಲಾರಿ ಮಾಲೀಕರು ಮತ್ತು ಚಾಲಕರ ಒಕ್ಕೂಟ, ಅನಿರ್ದಿಷ್ಟಾವಧಿ ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂಪಡೆದಿದೆ. ಕೇಂದ್ರ ಸರ್ಕಾರವು ನೂತನ ಕಾಯ್ದೆಯನ್ನು ಮೂರು ತಿಂಗಳೊಳಗೆ ವಾಪಸ್ಸು ಪಡೆಯುವ ಭರವಸೆ ನೀಡಿದ್ದು, ಈ ಸಂಬಂಧ ಆಲ್ ಇಂಡಿಯಾ ಮೋಟಾರ್ ಟ್ರಾನ್ಸ್‌ಪೋರ್ಟ್‌ನ ಜಿ.ಆರ್.ಷಣ್ಮುಗಪ್ಪ ಅವರು, ಮೈಸೂರು ಜಿಲ್ಲಾ ಲಾರಿ ಮಾಲೀಕರು ಮತ್ತು ಚಾಲಕರ ಒಕ್ಕೂಟದ ಬಿ.ಕೋದಂಡರಾಮು ಹಾಗೂ ಅಬ್ದುಲ್ ಖಾದರ್ ಶಾಹಿದ್ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು. ಈ ಹಿನ್ನೆಲೆಯಲ್ಲಿ ಶುಕ್ರವಾರ ರಾತ್ರಿ ಒಕ್ಕೂಟದ ತುರ್ತು ಸಭೆ ನಡೆಸಿ, ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂಪಡೆಯಲು ನಿರ್ಧರಿಸಲಾಯಿತು. ಒಂದು ವೇಳೆ ● 7ನೇ ಪುಟಕ್ಕೆ





ನಂ.ಗೂಡು ಕಪಿಲಾ ನದಿಯಲ್ಲಿ ಮುಳುಗಿ ಮೂವರು ಅಯ್ಯಪ್ಪಸ್ವಾಮಿ ಭಕ್ತರು ಸಾವು


ಅಪ್ಪು


ರಾಕೇಶ್


ಗವಿರಂಗ

ಮೈಸೂರು, ಜ. 19(ಆರ್‌ಕೆ,ಆರ್‌ಎಸ್)– ನಂಜನಗೂಡು ಬಳಿ ಕಪಿಲಾ ನದಿಯಲ್ಲಿ ಸ್ನಾನಕ್ಕಿಳಿದ ಅಯ್ಯಪ್ಪ ಸ್ವಾಮಿ ಮಾಲಾಧಾರಿ ವಿದ್ಯಾರ್ಥಿಗಳಿಬ್ಬರು ಸೇರಿ ಮೂವರು ನೀರು ಪಾಲಾಗಿರುವ ಘಟನೆ ಶುಕ್ರವಾರ ಬೆಳಗ್ಗೆ ಸಂಭವಿಸಿದೆ.

ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕು, ನರಗನಹಳ್ಳಿ ಗ್ರಾಮದ ಗುಡ್ಡರಂಗಯ್ಯ ಅವರ ಮಗ ಗವಿರಂಗ(26), ಕಲ್ಲುಗುಟ್ಟರಹಳ್ಳಿ ಗ್ರಾಮದ ಶ್ರೀನಿವಾಸ ಅವರ ಮಗ ರಾಕೇಶ್(19) ಹಾಗೂ ರಾಮಕೃಷ್ಣರ ಮಗ ಅಪ್ಪು(16) ಸಾವನ್ನಪ್ಪಿದವರು. ಅಪ್ಪು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯಾಗಿದ್ದು, ರಾಕೇಶ್ ಪ್ರಥಮ ಬಿಎ ಓದುತ್ತಿದ್ದರು. ಸಂಬಂಧಿಕರೇ ಆದ 8 ಮಂದಿ ತುಮಕೂರಿನಿಂದ ಒಂದೇ ವಾಹನದಲ್ಲಿ ಅಯ್ಯಪ್ಪಸ್ವಾಮಿ ದರ್ಶನ ಮುಗಿಸಿ ಹಿಂದಿರುಗುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ರಾಮಕೃಷ್ಣ, ನಿಖಿತಗೌಡ, ಮಾದೇಶ, ಭುವನಗೌಡ ಹಾಗೂ ಚಿಕ್ಕರಂಗ ಅವರು ಅಪಾಯದಿಂದ ಪಾರಾಗಿದ್ದಾರೆ. ಜ.17ರಂದು ತುಮಕೂರಿನಿಂದ ತೀರ್ಥಕ್ಷೇತ್ರ ಶಬರಿಮಲೆಗೆ ತೆರಳಿದ್ದ ಅವರು, ಅಯ್ಯಪ್ಪಸ್ವಾಮಿ ದರ್ಶನ ಮಾಡಿ ವಾಪಸ್ಸಾಗುತ್ತಿದ್ದಾಗ ನಂಜನಗೂಡಿನ ಹೆಜ್ಜಿಗೆ ಸೇತುವೆ ಬಳಿ ಇಂದು ಬೆಳಗ್ಗೆ 10.30 ಗಂಟೆ ವೇಳೆಗೆ ಸ್ನಾನ ಮಾಡಲೆಂದು ಕಪಿಲಾ ನದಿಗಿಳಿದಿದ್ದರು.

ಸ್ನಾನ ಮಾಡಿ ಕೆಲವರು ದಡ ಸೇರಿದರೆ, ಗವಿರಂಗ, ರಾಕೇಶ್ ಮತ್ತು ಅಪ್ಪು ಮಾತ್ರ ಇನ್ನೂ ಈಜುತ್ತಿದ್ದರು. ಈಜುತ್ತಾ ಮುಂದೆ ಹೋದಾಗ ಸುಳಿ ಇದ್ದ ಕಾರಣ, ನೀರಿನಲ್ಲಿ ಮುಳುಗಿದರು. ಅದನ್ನು ಗಮನಿಸುತ್ತಿದ್ದ ರಾಮಕೃಷ್ಣ, ಮಾದೇಶ ಅವರನ್ನು ರಕ್ಷಿಸಲು ಮುಂದಾದರಾದರೂ ಪ್ರಯೋಜನವಾಗಲಿಲ್ಲ. ● 7ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 20 ಜನವರಿ 2024

ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆ; ಜ.22ರಂದು ರಾಜ್ಯದಲ್ಲಿ ರಜೆ ಘೋಷಣೆಗೆ ಬಿಜೆಪಿ ಆಗ್ರಹ

ಬೆಂಗಳೂರು, ಜ.19– ಅಯೋಧ್ಯೆಯ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಪೂಜಾ ವಿಧಿಗಳನ್ನು ಸಾರ್ವಜನಿಕರು ವೀಕ್ಷಿಸಲು ಅವಕಾಶವಾಗುವಂತೆ ರಾಜ್ಯ ಸರ್ಕಾರ ಜನವರಿ 22 ರಂದು ರಜೆ ಘೋಷಣೆ ಮಾಡುವಂತೆ ಬಿಜೆಪಿ ಆಗ್ರಹಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸರ್ಕಾರ ಈಗಾಗಲೇ ಅರ್ಧ ದಿನ ರಜೆ ಘೋಷಣೆ ಮಾಡಿದೆ, ರಾಷ್ಟ್ರದ ಹಲವು ರಾಜ್ಯ ಸರ್ಕಾರಗಳೂ ಅಂದು ಪೂರ್ಣದಿನ ರಜೆ ಘೋಷಿಸಿವೆ ಎಂದರು.

ಶ್ರೀರಾಮಲಲ್ಲಾ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ವೀಕ್ಷಿಸಲು ಅನುಕೂಲ ಮಾಡಿಕೊಡುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದ್ದಾರೆ.

ಜ.22ಕ್ಕೆ ಶ್ರೀರಾಮ ತಾರಕ ಹೋಮ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಡಾ.ಶುಶ್ರುತ್‌ಗೌಡ ಮಾತನಾಡಿದರು.

ಮೈಸೂರು,ಜ.19(ಜಿಎ)–ಅಯೋಧ್ಯೆಯಲ್ಲಿ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಮೈಸೂರಿನ ವಿ.ಆರ್. ಟ್ರಸ್ಟ್, ಜಿಲ್ಲಾ ಅರ್ಚಕರ ಮತ್ತು ಪುರೋಹಿತರ ಸಂಘದ ವತಿಯಿಂದ ಜ.22ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 12.30 ರವರೆಗೆ ನಗರದ ಕುಂಚಿಟಿಗರ ಸಂಘದ ಆಲಮ್ಮ ಛತ್ರದಲ್ಲಿ ಶ್ರೀರಾಮ ತಾರಕ ಹೋಮ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ಅಧ್ಯಕ್ಷ ಡಾ. ಶುಶ್ರುತಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದೇ ಅದೇ ಸ್ಥಳದಲ್ಲಿ ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರದಲ್ಲಿನ ವಿಗ್ರಹ ಪ್ರತಿಷ್ಠಾಪನೆ ದೃಶ್ಯವನ್ನು ಬೃಹತ್ ಎಲ್‌ಇಡಿ ಟಿವಿ ಮೂಲಕ ನೇರ ಪ್ರಸಾರ ಮಾಡಲಾಗುವುದು. ಜೊತೆಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 25 ಸಾಧಕರನ್ನು ಅಭಿನಂದಿಸಲಾಗುತ್ತಿದೆ. ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿದ್ದು, ಶಿಬಿರದಲ್ಲಿ ರಕ್ತದೊತ್ತಡ, ಮಧುಮೇಹ ಮೊದಲಾದ ಸಮಸ್ಯೆಗಳಿಗೆ ತಜ್ಞ ವೈದ್ಯರಿಂದ ಉಚಿತ ತಪಾಸಣೆ ಮತ್ತು ಸಲಹೆ ದೊರೆಯಲಿದೆ. ಅಲ್ಲದೆ, ಶಿಬಿರದಲ್ಲಿ ಪಾಲ್ಗೊಂಡವರ ಆರೋಗ್ಯದ ಮೇಲೆ ವರ್ಷಪೂರ್ತಿ ನಿಗಾ ಇರಿಸಿ ಸಲಹೆ ಸೂಚನೆ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ವಿಷ್ಣುಪ್ರಿಯ, ಮಾದೇಗೌಡ, ಬಸವರಾಜು ಉಪಸ್ಥಿತರಿದ್ದರು.

ಜ.21, 22 ರಾಜ್ಯಮಟ್ಟದ ಎತ್ತಿನಗಾಡಿ ಓಟ ಸ್ಪರ್ಧೆ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹಿರಿಯ ಸಾಹಿತಿ ಬನ್ನೂರ್ ಕೆ.ರಾಜು ಅವರು ಎತ್ತಿನಗಾಡಿ ಓಟದ ಸ್ಪರ್ಧೆಯ ಪೋಸ್ಟರ್ ಬಿಡುಗಡೆಗೊಳಿಸಿದರು

ಮೈಸೂರು,ಜ.19(ಜಿಎ)–ನಗರದ ಕುಂಬಾರಕೊಪ್ಪಲಿನ ಕೆಂಪೇಗೌಡ ಯುವಕರ ಬಳಗದ ವತಿಯಿಂದ ಜ.21, 22 ರಂದು ಬೆಳಗ್ಗೆ 10 ರಿಂದ ರಾತ್ರಿ 10.30 ರವರೆಗೆ ನಗರದ ಮರಟಿ ಕ್ಯಾತನಹಳ್ಳಿ ಬಳಿ ರಾಜ್ಯ ಮಟ್ಟದ ಎತ್ತಿನಗಾಡಿ ಓಟದ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ. ರಾಜು ತಿಳಿಸಿದರು.

ನಗರದ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಬಳಗ ಈ ಸ್ಪರ್ಧೆ ಆಯೋಜಿಸಿದ್ದು, ಪ್ರಥಮ ಮತ್ತು ದ್ವಿತೀಯ ಬಹುಮಾನವಾಗಿ ಬೈಕ್, ತೃತೀಯ ಬಹುಮಾನವಾಗಿ 30 ಸಾವಿರ ನಾಲ್ಕನೇ ಬಹುಮಾನವಾಗಿ 20 ಸಾವಿರ ರೂ. ನೀಡಲಾಗುವುದು. ರಾಜ್ಯದ ವಿವಿಧೆಡೆಯಿಂದ ಆಗಮಿಸಿ ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಶುಶ್ರುತ್‌ಗೌಡ, ಶ್ರೇಯಸ್, ಹರ್ಷಿತ್ ಉಪಸ್ಥಿತರಿದರು.

ನಾಳೆ ವಿಷ್ಣುವರ್ಧನ್ ಪುಣ್ಯಸ್ಮರಣೆ ಅಂಗವಾಗಿ ಗೀತ ನಮನ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸೌಭಾಗ್ಯ ಅಸೋಸಿಯೇಟ್ಸ್ ವತಿಯಿಂದ 'ಎಲ್ಲೆಲ್ಲೂ ಸಂಗೀತವೇ' ಗೀತ ನಮನ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ಜ.19(ಜಿಎ)–ಡಾ. ವಿಷ್ಣುವರ್ಧನ್ ಅವರ 14 ನೇ ಪುಣ್ಯಸ್ಮರಣೆ ಅಂಗವಾಗಿ ಜ.21 ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ನಗರದ ಹೊರ ವಲಯದಲ್ಲಿನ ಉದ್ಬೂರು ಬಳಿಯ ವಿಷ್ಣು ಸ್ಮಾರಕ ಭವನದಲ್ಲಿ ಸೌಭಾಗ್ಯ ಅಸೋಸಿಯೇಟ್ಸ್ ವತಿಯಿಂದ ಗೀತ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸೌಭಾಗ್ಯ ತಿಳಿಸಿ, 'ಎಲ್ಲೆಲ್ಲೂ ಸಂಗೀತವೇ' ಎಂಬ ಶೀರ್ಷಿಕೆಯ ಕಾರ್ಯಕ್ರಮ ಇದಾಗಿದ್ದು, ರಾಜ್ಯದ ವಿವಿಧೆಡೆಯಿಂದ ಹವ್ಯಾಸಿ ಗಾಯಕ, ಗಾಯಕಿಯರು ಪಾಲ್ಗೊಂಡು ವಿಷ್ಣುವರ್ಧನ್ ಅಭಿನಯದ ಚಿತ್ರ ಗೀತೆಗಳನ್ನು ಹಾಡಲಿದ್ದಾರೆ ಎಂದು ತಿಳಿಸಿದರು. ಪಾಲಿಕೆ ಮಾಜಿ ಸದಸ್ಯ ಎಂ.ಡಿ. ಪಾರ್ಥ ಸಾರಥಿ, ವರದರಾಜ್, ಬಸವ ರಾಜೇಂದ್ರ ಸ್ವಾಮಿ ಉಪಸ್ಥಿತರಿದ್ದರು.

ಜ.26ಕ್ಕೆ 'ಉಪಾಧ್ಯಕ್ಷ' ಚಿತ್ರ ಬಿಡುಗಡೆ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಚಿತ್ರದ ನಿರ್ದೇಶಕ ಅನಿಲ್ ಕುಮಾರ್ ಮಾತನಾಡಿದರು.

ಮೈಸೂರು,ಜ.19(ಜಿಎ)–ಹಾಸ್ಯ ನಟನಾಗಿ ಸುಮಾರು 200 ಕ್ಕೂ ಹೆಚ್ಚು ಚಲನ ಚಿತ್ರಗಳಲ್ಲಿ ನಟಿಸಿರುವ ತಾವು ಮೊದಲ ಬಾರಿಗೆ ನಾಯಕ ನಟನಾಗಿ ಪಾತ್ರ ನಿರ್ವಹಿಸಿರುವ ಕುಟಂಬ ಸಮೇತ ನೋಡಬಹುದಾದ 'ಉಪಾಧ್ಯಕ್ಷ' ಚಲನ ಚಿತ್ರ ಇದೇ ಜ.26ರಂದು ರಾಜ್ಯದಾದ್ಯಂತ ತೆರೆ ಕಾಣಲಿದ್ದು, ಪ್ರೇಕ್ಷಕರು ಬೆಂಬಲಿಸಬೇಕೆಂದು ಖ್ಯಾತ ನಟ ಚಿಕ್ಕಣ್ಣ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂಲತಃ ಮೈಸೂರಿನವರೇ ಆದ ನಾನು ಚಲನಚಿತ್ರ ರಂಗ ಪ್ರವೇಶಕ್ಕೂ ಮುನ್ನ ಗಾರೆ ಕೆಲಸ ಮಾಡುತ್ತಿದ್ದೆ. ಬಳಿಕ ಪ್ರೇಕ್ಷಕರ ಆಶೀರ್ವಾದಿಂದ ಚಿತ್ರರಂಗದಲ್ಲಿ ಖ್ಯಾತಿ ಗಳಿಸಿದ್ದು, ಈಗ ತಾವು ಪ್ರಥಮ ಬಾರಿಗೆ ನಾಯಕ ನಟರಾಗಿ ನಟಿಸುವ ಅವಕಾಶ ಉಪಾಧ್ಯಕ್ಷ ಚಿತ್ರದ ಮೂಲಕ ದೊರೆತಿದೆ. ಚಿತ್ರದಲ್ಲಿ ದ್ವಂದ್ವಾರ್ಥದ ಸಂಭಾಷಣೆ, ಮುಜುಗರ ಉಂಟು ಮಾಡುವ ದೃಶ್ಯಗಳಿಲ್ಲ. ಇದು ತಮ್ಮ ಈ ಹಿಂದಿನ 'ಅಧ್ಯಕ್ಷ' ಚಲನ ಚಿತ್ರದ ಮುಂದುವರಿದ ಭಾಗವಾಗಿದೆ. ಆ ಚಲನಚಿತ್ರದಲ್ಲಿದ್ದ ಬಹುತೇಕ ನಟರು ಇದರಲ್ಲಿಯೂ ನಟಿಸಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಟಿ ಮಲ್ಲೈಕಾ, ನಿರ್ದೇಶಕ ಅನಿಲ್ ಕುಮಾರ್, ನಟರಾದ ಬಾಲಸುಬ್ರಹ್ಮಣ್ಯಂ, ಧರ್ಮಣ್ಣ ಉಪಸ್ಥಿತರಿದ್ದರು.

ದೆಹಲಿ ಗಣರಾಜ್ಯೋತ್ಸವ ಪರೇಡ್‌ಗೆ ಮೈಸೂರಿನ 12 ಕೆಡೆಟ್‌ಗಳು ಭಾಗಿ

● ಮೈಸೂರಿನ 22 ಮಂದಿ ಎನ್‌ಸಿಸಿ ಕೆಡೆಟ್‌ಗಳು ದೆಹಲಿಯಲ್ಲಿ ಬೀಡು ● ಇಬ್ಬರಿಂದ ಸಾಂಸ್ಕೃತಿಕ ಕಾರ್ಯಕ್ರಮ, 8 ಮಂದಿ ಪಿಎಂ ರ್‍ಯಾಲಿಯಲ್ಲಿ ಭಾಗಿ



ದೆಹಲಿಯಲ್ಲಿ ಗಣರಾಜ್ಯೋತ್ಸವದಂದು ನಡೆಯುವ ಪರೇಡ್‌ನಲ್ಲಿ ಪಾಲ್ಗೊಳ್ಳಲು ಮೈಸೂರಿನಿಂದ ತೆರಳಿರುವ ಎನ್‌ಸಿಸಿ ಕೆಡೆಟ್‌ಗಳ ತಂಡ.

ಮೈಸೂರು,ಜ.19(ಎಂಟಿವೈ)– ನವದೆಹಲಿಯಲ್ಲಿ ಜ.26ರಂದು ನಡೆಯುವ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಪಾಲ್ಗೊಳ್ಳಲು ಮೈಸೂರಿನಿಂದ 22 ಎನ್‌ಸಿಸಿ ಕೆಡೆಟ್‌ಗಳು ತೆರಳಿದ್ದು, ಅವರಲ್ಲಿ 12 ಮಂದಿ ಕರ್ತವ್ಯ ಪಥದಲ್ಲಿ ಪಥಸಂಚಲನಕ್ಕೆ ಹಾಗೂ ಇಬ್ಬರು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ.

ಎನ್‌ಸಿಸಿ ಕೆಡೆಟ್‌ಗಳಿಗೆ ದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಳ್ಳುವುದು ಪ್ರತಿಷ್ಠೆಯಾಗಿದ್ದು, ಪ್ರತಿ ವರ್ಷವೂ ಕರ್ನಾಟಕ–ಗೋವಾ ಡೈರೆಕ್ಟರೇಟ್ ವತಿಯಿಂದ ಎನ್‌ಸಿಸಿ ಭೂದಳ, ನೌಕಾದಳ ಹಾಗೂ ವಾಯುದಳದ ಉತ್ತಮ ಕೆಡೆಟ್‌ಗಳು ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅತ್ಯುತ್ತಮ ಕೆಡೆಟ್‌ಗಳ ತಂಡ ಕರ್ನಾಟಕ–ಗೋವಾ ಡೈರೆಕ್ಟರೇಟ್ ನೇತೃತ್ವದಲ್ಲಿ ಪ್ರಯಾಣ ಬೆಳಸಲಿದೆ. ಈ ಬಾರಿ ರಾಜ್ಯದಿಂದ ಸೀನಿಯರ್ ವಿಂಗ್(ಬಾಲಕಿಯರು)ನಲ್ಲಿ 40, ಜ್ಯೂನಿಯರ್ ವಿಂಗ್(ಬಾಲಕಿಯರು) 7, ಸೀನಿಯರ್ ಡಿವಿಜನ್(ಬಾಲಕರು)ನಲ್ಲಿ 63, ಜ್ಯೂನಿಯರ್ ವಿಂಗ್(ಬಾಲಕರು)ನಲ್ಲಿ 9 ಮಂದಿ ಸೇರಿದಂತೆ ರಾಜ್ಯದಿಂದ 119 ಎನ್‌ಸಿಸಿ ಕೆಡೆಟ್‌ಗಳು ದೆಹಲಿಗೆ ತೆರಳಿದ್ದಾರೆ.

119 ಮಂದಿ ಎನ್‌ಸಿಸಿ ಕೆಡೆಟ್‌ಗಳಲ್ಲಿ ಮೈಸೂರಿನ 22 ಎನ್‌ಸಿಸಿ ಕೆಡೆಟ್‌ಗಳು ಸೇರಿದ್ದಾರೆ. ಅವರಲ್ಲಿ 16 ಮಂದಿ ಆರ್ಮಿ, 3 ಮಂದಿ ನೇವಿ ಹಾಗೂ 3 ಮಂದಿ ಏರ್‌ವಿಂಗ್ ಕೆಡೆಟ್‌ಗಳಾಗಿದ್ದಾರೆ. ಕಳೆದ ಒಂದು ವಾರದಿಂದ ದೆಹಲಿಯಲ್ಲಿ ನಡೆಯುತ್ತಿರುವ ತರಬೇತಿಯಲ್ಲಿ ಪಾಲ್ಗೊಂಡಿದ್ದ ಮೈಸೂರಿನ 22 ಎನ್‌ಸಿಸಿ ಕೆಡೆಟ್‌ಗಳಲ್ಲಿ ಅಂತಿಮವಾಗಿ 12 ಕೆಡೆಟ್‌ಗಳು ಕರ್ತವ್ಯ ಪಥದಲ್ಲಿ ಜ.26ರಂದು ನಡೆಯುವ ಮುಖ್ಯ ಪರೇಡ್‌ನಲ್ಲಿ ಪಥಸಂಚಲನ ಮಾಡಲು ಆಯ್ಕೆಯಾಗಿದ್ದರೆ, ಇಬ್ಬರು ಗಣರಾಜ್ಯೋತ್ಸವದ ಅಂಗವಾಗಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದ್ದಾರೆ. ಉಳಿದ 8 ಮಂದಿ ಕೆಡೆಟ್‌ಗಳು ಗಣರಾಜ್ಯೋತ್ಸವದ ಮರು ದಿನ ನಡೆಯುವ ಪಿಎಂ ರ್‍ಯಾಲಿಯಲ್ಲಿ ಅತಿಥಿಗಳನ್ನು ಕರೆತರುವ ಕಾರ್ಯಕ್ಕೆ ನಿಯೋಜಿಸಲಾಗಿದೆ.

ಮೈಸೂರಿನ ವಿವಿಧ ಕಾಲೇಜುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಗಣರಾಜ್ಯೋತ್ಸವದ ಪರೇಡ್‌ಗೆ ಆಯ್ಕೆಯಾದ ಎನ್‌ಸಿಸಿಯ 3 ವಿಭಾಗದ ಕೆಡೆಟ್‌ಗಳನ್ನು ಎನ್‌ಸಿಸಿ ಹಿರಿಯ ಅಧಿಕಾರಿಗಳು ದೆಹಲಿಗೆ ಕರೆದೊಯ್ದಿದ್ದಾರೆ. ಪ್ರತಿಷ್ಠಿತ ಕಾರ್ಯಕ್ರಮವಾಗಿರುವ ಹಿನ್ನೆಲೆಯಲ್ಲಿ ಕರ್ತವ್ಯ ಪಥ ಸಂಚಲನ ಶಿಸ್ತುಬದ್ಧವಾಗಿ ನಡೆಯುವುದರಿಂದ ಕಳೆದ ಒಂದು ವಾರದಿಂದ ಎನ್‌ಸಿಸಿ ಕೆಡೆಟ್‌ಗಳಿಗೆ ಕಠಿಣ ತರಬೇತಿ ನೀಡಲಾಗುತ್ತಿದೆ. ಈ ತರಬೇತಿಯಲ್ಲಿ ಮೈಸೂರಿನ ಎನ್‌ಸಿಸಿ ಕೆಡೆಟ್‌ಗಳು ಉತ್ತಮ ಪ್ರದರ್ಶನ ನೀಡಿದ್ದು, ಎಲ್ಲರ ಗಮನ ಸೆಳೆದಿದ್ದಾರೆ.

ರಾಜ್ಯಗಳ ತೆರಿಗೆ ಪಾಲಿನ ಹಣ ಶೇ.42ರಿಂದ 32ಕ್ಕೆ ಇಳಿಸಲು ಪ್ರಧಾನಿ ಮೋದಿ ಹುನ್ನಾರ ಆರೋಪ

ನೀತಿ ಆಯೋಗದ ಸಿಇಓ ಬಿವಿಆರ್ ಸುಬ್ರಹ್ಮಣ್ಯಂ ಅವರಿಂದ ಬಹಿರಂಗ: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಜ.19– ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರಾಜ್ಯಗಳ ತೆರಿಗೆ ಪಾಲಿನ ಹಣವನ್ನು ಪ್ರಸ್ತಾವಿತ ಶೇಕಡ 42 ರಿಂದ ಶೇ.32ಕ್ಕೆ ಇಳಿಸಲು ನಡೆಸಿದ ಪ್ರಯತ್ನ ಬಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಮುಖ್ಯಮಂತ್ರಿ, ರಾಜ್ಯಗಳ ಪರಿಸ್ಥಿತಿ ಏನೇ ಆದರೂ, ಕೇಂದ್ರ ಸರ್ಕಾರದ ಪಾಲಿಗೆ ಹೆಚ್ಚಿನ ತೆರಿಗೆ ಹಣ ಉಳಿಸಿಕೊಳ್ಳಬೇಕು ಎನ್ನುವ ಕುತಂತ್ರ ಫಲಿಸದೆ ಅನಿವಾರ್ಯವಾಗಿ ತಮ್ಮ ಅವಧಿಯ ಪ್ರಥಮ ಬಜೆಟ್ ಮಂಡನೆಗೆ 48 ಗಂಟೆಗಳ ಮುನ್ನ ಆಯವ್ಯಯವನ್ನು ತಿದ್ದಿ ಬರೆಯುವ ಕೆಲಸಕ್ಕೆ ಕೈಹಾಕಿದ್ದರು ಎನ್ನುವುದು ಜಗಜ್ಜಾಹೀರಾಗಿದೆ ಎಂದು ಟೀಕಿಸಿದ್ದಾರೆ. ರಾಜ್ಯಗಳಿಗೆ ಹಂಚಿಕೆಯಾದ ಹಣವನ್ನು ಗಮನಾರ್ಹವಾಗಿ ಕಡಿತಗೊಳಿಸುವ ಏಕೈಕ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಸರ್ಕಾರ, ಭಾರತೀಯ ಹಣಕಾಸು ಆಯೋಗದೊಂದಿಗೆ ರಹಸ್ಯ ಮಾತುಕತೆಗಳಲ್ಲಿ 2014ರಿಂದ ತೊಡಗಿಸಿಕೊಂಡಿತ್ತು ಎನ್ನುವುದು ಕಳವಳಕಾರಿ ಬೆಳವಣಿಗೆಯಾಗಿದೆ.

ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇರಿಸಿರುವ ಭಾರತದ ರಾಜ್ಯಗಳ ಆರ್ಥಿಕ ಸ್ವಾಯತ್ತತೆಯನ್ನೇ ಬುಡಮೇಲು ಮಾಡುವಂತಹ ಕೇಂದ್ರ ಸರ್ಕಾರದ ಗೋಪ್ಯ ಅಜೆಂಡಾವನ್ನು ನೀತಿ ಆಯೋಗದ ಸಿಇಓ ಬಿ.ವಿ.ಆರ್. ಸುಬ್ರಮಣ್ಯಂ ಬಹಿರಂಗಪಡಿಸಿದ್ದಾರೆ. ಬಜೆಟ್ ಸಿದ್ಧತೆಯಲ್ಲಿ ಖುದ್ದು ಪಾಲ್ಗೊಂಡಿದ್ದ ಅವರು, ಬಹಿರಂಗಪಡಿಸಿರುವ ಕಟು ಸತ್ಯಗಳು ದೇಶದ ಅಸಂಖ್ಯಾತ ಬಡಜನರ ದೈನಂದಿನ ಬದುಕು, ಭವಿಷ್ಯವನ್ನು ಮೋದಿ ಎಂತಹ ಕರಿನೆರಳಿಗೆ ದೂಡಿದ್ದರು ಮತ್ತು ತಮ್ಮ ಕುತ್ಸಿತ ಕಾರ್ಯಸಾಧನೆಗಾಗಿ ಅರ್ಥ ಸಚಿವರು ಹಾಗೂ ಅರ್ಥ ಸಚಿವಾಲಯವನ್ನೇ ಹೊರಗಿಟ್ಟು ಆತುರಾತುರವಾಗಿ ರೂಪಿಸಿದ ಬಜೆಟ್‌ನಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಎಳ್ಳುನೀರು ಬಿಟ್ಟಿದ್ದರು ಎನ್ನುವುದು ಸಾಬೀತಾಗಿದೆ. ಉದಾಹರಣೆಗೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣದಂತಹ ಆದ್ಯತಾ ವಲಯಕ್ಕೆ ನಿಗದಿಪಡಿಸಲಾಗಿದ್ದ 36,000 ಕೋಟಿ ರೂ. ಅನುದಾನವನ್ನು ಸರಾಸರಿ ಅರ್ಧಕ್ಕೆ ಇಳಿಸುವ ಮೂಲಕ ಮಹಿಳೆಯರು ಮತ್ತು ಮಕ್ಕಳು ಎರಡನೇ ದರ್ಜೆ ನಾಗರಿಕರೇ ಎನ್ನುವಂತಹ ಅನುಮಾನ ಹುಟ್ಟಿಸುವ ಧೋರಣೆಯನ್ನು ಕೇಂದ್ರ ಅನುಸರಿಸಿದೆ.



ಅಲ್ಲದೆ, ಹಿಂದಿನ ವಿತ್ತೀಯ ಅವಧಿಯಲ್ಲಿ ಶಾಲಾ ಶಿಕ್ಷಣಕ್ಕೆ ನೀಡಲಾಗಿದ್ದ ಅನುದಾನದಲ್ಲಿ ಶೇಕಡ 18.4 ರಷ್ಟು ಇಳಿಕೆ ಮಾಡುವ ಮೂಲಕ ಮಕ್ಕಳ ಭವಿಷ್ಯವನ್ನು ಚಿವುಟಿ ಹಾಕಲಾಗಿದೆ. ಕೇಂದ್ರ ಸರ್ಕಾರವು ಆಯವ್ಯಯೇತರ ಸಾಲದ ಮೇಲೆ ಅವಲಂಬನೆ ಹೊಂದಿತ್ತು ಎಂಬುದು ಕೇಂದ್ರದ ಆರ್ಥಿಕ ಸ್ಥಿತಿಗತಿಯ ಬಗ್ಗೆ ಗಂಭೀರ ಕಳವಳ ಉಂಟುಮಾಡುತ್ತದೆ.

ಸಾಲದ ಸತ್ಯವನ್ನು ದಾಖಲೆಗಳಿಂದ ಹೊರಗಿಡುವ ತಂತ್ರಗಳಿಂದ ಸರ್ಕಾರದ ಮೇಲಿನ ಋಣಭಾರ ಕಮ್ಮಿಯಾಗುವುದಿಲ್ಲ, ಅಂತಿಮವಾಗಿ ಸಾಲದ ಶೂಲ ನಾಗರಿಕರ ಹೆಗಲ ಮೇಲೆ ಬೀಳುವುದು ಸತ್ಯ.

ಇಂತಹ ಅಪ್ರಾಮಾಣಿಕ ಆರ್ಥಿಕ ಕಸರತ್ತುಗಳು ಸರ್ಕಾರದ ಪಾರದರ್ಶಕತೆ ಮತ್ತು ಜವಾಬ್ದಾರಿಯುತ ಆಡಳಿತದ ಬಗ್ಗೆ ಗಾಢ ಸಂಶಯ ಉಂಟು ಮಾಡುತ್ತದೆ. ಅಪ್ರಾಮಾಣಿಕ ನಡೆಗಳ ಪರಿಣಾಮ ಏನಾಗುತ್ತದೆ ಎಂಬುದನ್ನು, 2022ರ ಮಹಾಲೇಖಪಾಲರ ವರದಿ ವಿವರಿಸುತ್ತದೆ. ಕೇಂದ್ರದ ಅರ್ಥ ವ್ಯವಸ್ಥೆಗೆ ಕನ್ನಡಿ ಹಿಡಿದಿರುವ ಈ ವರದಿಯಲ್ಲಿನ ಒಂದು ಪ್ರಮುಖ ಅಂಶವೆಂದರೆ, ಸರ್ಕಾರದ ಅಡಿಯಲ್ಲಿ ಬರುವ ವಿವಿಧ ಸಂಸ್ಥೆಗಳು 1.69 ಲಕ್ಷ ಕೋಟಿ ರೂ.ನಷ್ಟು ಸಾಲವನ್ನು ಮರೆಮಾಚಿರುವುದನ್ನು ಬಹಿರಂಗಪಡಿಸಿರುವುದಾಗಿದೆ.

ರಾಜ್ಯ ಸರ್ಕಾರಗಳ ಜೊತೆ ಹಂಚಿಕೊಳ್ಳದ ಸೆಸ್ ಮತ್ತು ಸರ್ಚಾರ್ಜ್‌ಗಳನ್ನು ನಿರಂತರವಾಗಿ ಏರಿಸುತ್ತಲೇ ಬಂದಿರುವ ಕೇಂದ್ರ ಸರ್ಕಾರ ರಾಜ್ಯಗಳಿಗೆ ದಕ್ಕಬೇಕಿರುವ ನ್ಯಾಯಯುತ ಹಕ್ಕುಗಳಿಂದ ವಂಚಿತವಾಗಿಸುವ ಹುನ್ನಾರ ನಡೆಸಿದೆ. ಆಯವ್ಯಯ ಮತ್ತು ಆಡಳಿತ ಕುರಿತ ಸಂಶೋಧನಾ ಸಂಸ್ಥೆ 'ಆಯವ್ಯಯ ಮತ್ತು ಆಡಳಿತ ಹೊಣೆಗಾರಿಕಾ ಕೇಂದ್ರ'ದ ಮಾಲಿನಿ ಚಕ್ರವರ್ತಿ ಅವರು, ಕೇಂದ್ರದ ಈ ನಡೆ ರಾಜ್ಯಗಳ ಪಾಲನ್ನು ಕಸಿದು ತನ್ನ ಪಾಲನ್ನು ಹೆಚ್ಚಿಸಿಕೊಳ್ಳುವ ತಂತ್ರವಿರುವುದು ಭಾಸವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರದ ಈ ದಮನಕಾರಿ ನೀತಿಯಿಂದಾಗಿ ಒಟ್ಟು ತೆರಿಗೆಯಲ್ಲಿ ಸೆಸ್ ಮತ್ತು ಸರ್ಚಾರ್ಜ್‌ಗಳ ಪಾಲು 2011–12ರಲ್ಲಿ ಶೇಕಡ 10.4 ಇದ್ದದ್ದು 2021–22ರ ವೇಳೆಗೆ ಶೇ.18.4ಗೆ ಏರಿಕೆಯಾಗಿದೆ.

ಇಂತಹ ಸಾರ್ವತ್ರಿಕ ಸಂಗತಿಗಳನ್ನು ಸಂವಿಧಾನ ಬದ್ಧವಾಗಿ ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇರಿಸಿರುವ ಎಲ್ಲರೂ ಸಾರ್ವಜನಿಕವಾಗಿ ಅತ್ಯಂತ ತುರ್ತಾಗಿ ಚರ್ಚಿಸಬೇಕಿದೆ. ಇದು ಹೀಗೇ ಮುಂದುವರಿದರೆ ಕರ್ನಾಟಕದಂತಹ ಪ್ರಗತಿಪರ ರಾಜ್ಯಗಳು ಕೇಂದ್ರದ ಕುಟಿಲ ಆರ್ಥಿಕ ಕ್ರಮಗಳ ಹೊರೆಯನ್ನು ಹೊರುತ್ತಲೇ ಇರಬೇಕಾಗುತ್ತದೆ. ಅಲ್ಲದೆ, ಪ್ರಾಮಾಣಿಕವಾಗಿ ತೆರಿಗೆ ಕಟ್ಟುವ ಜನರಿಗೆ ಮೋಸ ಮಾಡಿದಂತಾಗುತ್ತದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಭಾರತ ಒಕ್ಕೂಟದ ಎಲ್ಲ ರಾಜ್ಯಗಳೊಂದಿಗೆ ಕೇಂದ್ರ ಸರ್ಕಾರ ತನ್ನ ಸಂಪನ್ಮೂಲವನ್ನು ನ್ಯಾಯುತವಾಗಿ, ಸಮತೆಯ ತತ್ವದಡಿಯಲ್ಲಿ ಹಂಚಿಕೊಳ್ಳಲು ಇನ್ನೂ ಕಾಲಮಿಂಚಿಲ್ಲ. ತೆರಿಗೆಯ ಪಾಲು, ಸಂಪನ್ಮೂಲ ಹಂಚಿಕೆಯ ವಿಚಾರವಾಗಿ ಕರ್ನಾಟಕ ಸೇರಿದಂತೆ ದಕ್ಷಿಣದ ಎಲ್ಲ ರಾಜ್ಯಗಳು ಎತ್ತುತ್ತಿರುವ ನ್ಯಾಯಯುತ ದನಿಯನ್ನು ಹತ್ತಿಕ್ಕುವ ಯತ್ನವನ್ನು ಕೇಂದ್ರ ಇನ್ನಾದರೂ ಕೈಬಿಟ್ಟು, ತನ್ನ ವಿತ್ತೀಯ ನಡತೆಯನ್ನು ಸರಿಪಡಿಸಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯದ ಯುವಜನರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಂಬಂಧ ಸಚಿವರು; ಅಧಿಕಾರಿಗಳ ತಂಡ ರಚನೆ

ಬೆಂಗಳೂರು, ಜ.19–ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸುವ ಹಾಗೂ ನಿರುದ್ಯೋಗ ಸಮಸ್ಯೆ ಬಗೆಹರಿಸಿ ಯುವಜನರಿಗೆ ಉದ್ಯೋಗ ಕಲ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಮತ್ತು ಅಧಿಕಾರಿಗಳ ತಂಡ ರಚಿಸಿದ್ದಾರೆ.

ಯಾವ ಇಲಾಖೆಯಲ್ಲಿ ಉದ್ಯೋಗ ಸೃಷ್ಟಿ ಮಾಡಬಹುದು ಹಾಗೂ ತಮ್ಮ ಪ್ರಭಾವದಿಂದ ಖಾಸಗಿ ಮತ್ತು ಕೇಂದ್ರದ ಉದ್ಯಮಗಳಲ್ಲಿ ರಾಜ್ಯದ ಯುವಜನತೆಗೆ ಉದ್ಯೋಗ ಕಲ್ಪಿಸುವ ಸಾಧ್ಯತೆಗಳನ್ನು ಈ ತಂಡ ಕಂಡುಕೊಳ್ಳಲಿದೆ.

ವೈದ್ಯಕೀಯ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಸಮಿತಿ ಅಧ್ಯಕ್ಷರಾಗಿದ್ದು, ಸಚಿವರಾದ ಎಂ.ಬಿ. ಪಾಟೀಲ್, ಎಚ್.ಕೆ.ಪಾಟೀಲ್, ಡಾ.ಎಂ.ಸಿ. ಸುಧಾಕರ್, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಡಿ.ನಾಗೇಂದ್ರ ಹಾಗೂ ಈ ಸಚಿವರ ಇಲಾಖೆಗೆ ಸೇರಿದ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ತಂಡದ ಸದಸ್ಯರಾಗಿರುತ್ತಾರೆ. ತಂಡವು ರಾಜ್ಯ, ಪ್ರಾದೇಶಿಕ ಹಾಗೂ ಜಿಲ್ಲಾ ಮಟ್ಟದಲ್ಲಿ ಬೃಹತ್, ಸಣ್ಣ ಕೈಗಾರಿಕೆ, ಸಾಫ್ಟ್‌ವೇರ್ ಉದ್ಯಮಿಗಳ ಸಹಯೋಗದೊಂದಿಗೆ ಉದ್ಯೋಗ ಮೇಳಗಳನ್ನು ಆಯೋಜನೆ ಮಾಡಲಿದೆ. ಉದ್ಯೋಗ ಮೇಳ ನಡೆಸುವುದರಿಂದ ಐಟಿ–ಬಿಟಿ, ಹೋಟೆಲ್, ಉತ್ಪಾದನಾ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಮೀಣ ಭಾಗದ ಯುವಕ–ಯುವತಿಯರಿಗೆ ಹೆಚ್ಚಿನ ಅವಕಾಶ ಸಿಗಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.1.2024 ಶನಿವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024 ರಿಂದ 23.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಅಯೋಧ್ಯೆಯಲ್ಲಿ ಶ್ರೀರಾಮ ದೇವರ ಪ್ರತಿಷ್ಠಾಪನೆ ಅಂಗವಾಗಿ ಶ್ರೀರಾಮತಾರಕ ಜಪಯಜ್ಞ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಬೆಳಗ್ಗೆ 7 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** 58ನೇ ವರ್ಷದ ತೈಪೂಜಾ ಮಹೋತ್ಸವ, ಸ್ಥಳ: ದೇವಸ್ಥಾನ, ವಿಶ್ವೇಶ್ವರನಗರ, ಬೆಳಗ್ಗೆಯಿಂದ.

■ **ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಳೆಯ ವಿದ್ಯಾರ್ಥಿಗಳ ಸಂಘ, ಎಂಎಎ ಟ್ರಸ್ಟ್:** ಹಳೆಯ ವಿದ್ಯಾರ್ಥಿಗಳ ಸಮಾಗಮ, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಎಂಎಂಸಿ ಸ್ಪೋರ್ಟ್ಸ್ ಮೈದಾನ, ಬೆಳಗ್ಗೆ 10ಕ್ಕೆ.

■ **ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್:** 43ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ವಿಶೇಷ ಆಹ್ವಾನಿತರು: ಎಪಿಐಟಿ ಎಂ.ಡಿ. ಡಾ.ಶಶಿಕುಮಾರ್ ತಿಮ್ಮಯ್ಯ, ಪಿಎಡಿಸಿ ಅಧ್ಯಕ್ಷ ಬಿ.ಲೋಹಿಯಾ, ಸ್ಥಳ: ವಿಂಗ್ ಕಮಾಂಡರ್ ಕೆ.ಕೆ.ಶ್ರೀನಿವಾಸನ್ ಆಡಿಟೋರಿಯಂ, ಪಿಎಡಿಸಿ ಆವರಣ, ಬೋಗಾದಿ, ಮಧ್ಯಾಹ್ನ 2ಕ್ಕೆ

■ **ಕಲಾಸುರುಚಿ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–811, ಕಥೆ ಹೇಳುವವರು: ಶ್ರೀಮತಿ ವಿಜಯಶ್ರೀ ಬಿ, ಕನ್ನಡ ಶಿಕ್ಷಕರು, ಗೋಪಾಲಸ್ವಾಮಿ ಶಿಶುವಿಹಾರ ಶಾಲೆ, ಮೈಸೂರು. ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ :** ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನಾ ಪರ್ವಕಾಲದ ನಿಮಿತ್ತ ಸಮಗ್ರ ರಾಮಾಯಣ ಪ್ರವಚನ ಮಾಲಿಕೆ, ಪಂಡಿತ್ ಶ್ರೀ ಅನುರುದ್ಧಾಚಾರ್ಯ ಅವರಿಂದ ಸುಂದರಕಾಂಡ ಕುರಿತು ಉಪನ್ಯಾಸ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಕೆ.ಆರ್.ನಗರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅತಿಥಿ ಉಪನ್ಯಾಸಕ ಡಾ. ಎನ್.ಎಸ್. ಸೋಮಶೇಖರ ಅವರಿಂದ ಭಾರತ ಸಂವಿಧಾನದ ಧ್ಯೇಯೋದ್ದೇಶಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಸಿದ್ದಲಿಂಗೇಶ್ವರನಗರ (ವಿಜಯನಗರ 3ನೇ ಹಂತ) ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ನಿಲಯಪಾಲಕರಾದ ಪ್ರದೀಪ್, ಸ್ಥಳ: ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ವಿಜಯನಗರ 2ನೇ ಹಂತ, ಸಂಜೆ 7ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಕೇಶವ ಪ್ರಕಾಶ್ ಎಂ.ಎನ್., 6.40 ಪದಸಂಸ್ಕೃತಿ –ಡಾ. ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15ನಂದಿಸದಿರಿ ನಂದಾದೀಪ–ಪ್ರಾಯೋಜಿತ ಕಾರ್ಯಕ್ರಮ, 8.30 ವಿಶಿಷ್ಟ ವ್ಯಕ್ತಿ ವಿಶೇಷಯತ್ನ, 10.00 ಕೆ.ವಿ. ಕೃಷ್ಣ – ವೀಣಾವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ–ರಾಧಿಕಾ ಐ ಭಟ್, 3.30 ಮಕ್ಕಳ ಮಂಟಪ–ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯ ಶ್ರೀ ಶಾರದಾ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ "ಅಮರ ವ್ಯಾಘ್ರ" ರಚನೆ– ರಾಜಾನಂದ, ನಿರ್ಮಾಣ– ವಿ.ಮಾ.ಜಗದೀಶ್, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರ್ ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ – ಬಾನುಲಿ ಸರಣಿ, 8.15 ಯುವವಾಣಿ–ರಾಷ್ಟ್ರೀಯ ಹೆಣ್ಣು ಮಗುವಿನ ದಿನದ ಕುರಿತ ಕಾರ್ಯಕ್ರಮ, 9.30 ಸಂವಿಧಾನ ತಿದ್ದುಪಡಿಯ ವಿಧಿ ವಿಧಾನಗಳು ಕುರಿತು ಮಾತನಾಡುವವರು ಸಂವಿಧಾನ ತಜ್ಞ ಡಾ. ಸುಧಾಕರ ಹೊಸಳ್ಳಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ಗೋಕುಲೋತ್ಸವ್ ಮಹಾರಾಜ್ –ಗಾಯನ

■ **ಹೆಚ್.ವಿ. ರಾಜೀವ್ ಸ್ವಾಭಿಮಾನಿಗಳ ಬಳಗ :** ಅಯೋಧ್ಯೆಯ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ಅಂಗವಾಗಿ ಮನೆ ಮನೆಯಲ್ಲಿ ದೀಪೋತ್ಸವ ಅಂಗವಾಗಿ ಉಚಿತ ದೀಪ ವಿತರಣೆ, ಮುಖ್ಯ ಅತಿಥಿಗಳು : ಶ್ರೀ ಭಾಷ್ಯಂ ಸ್ವಾಮೀಜಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ಮೇಯರ್ ಭೈರಪ್ಪ, ಮಾಜಿ ನಗರ ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಬಳಗದ ಎಸ್. ನಾಗರಾಜು, ಸ್ಥಳ: ರಾಮಲಿಂಗೇಶ್ವರ ದೇವಸ್ಥಾನದ ಮುಂಭಾಗ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್ :** ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ವಿದುಷಿ ಕೋವಿಲಡಿ ಅರ್ಚನಾ ಎಲ್. ರಾವ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಕೇಶವ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಸಾಯಿಶಿವ ಲಕ್ಷ್ಮೀಕೇಶವ–ಮೃದಂಗ, ಸ್ಥಳ: ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಜಾನಪದ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ:** 'ಶೇಷನಾರಾಯಣ ಅವರ ಬಾಲ್ಯದ ಕೆಲವು ನೆನಪುಗಳು' ಕೃತಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ವಿಶ್ರಾಂತ ಕನ್ನಡ ಪ್ರಾಧ್ಯಾಪಕರು ಹಾಗೂ ಪ್ರಸಿದ್ಧ ವಿದ್ವಾಂಸರಾದ ಪ್ರೊ.ಎನ್.ಎಸ್.ತಾರಾನಾಥ್, ಅಧ್ಯಕ್ಷತೆ: ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಮ್ಮ ಹೊಂಗನೂರು, ಉಪಸ್ಥಿತಿ: ಮೈಸೂರು ವಿವಿ ಗ್ರಂಥಾಲಯ ಗ್ರಂಥಪಾಲಕರಾದ ಡಾ.ಪಿ.ಸರಸ್ವತಿ, ಆಕ್ಸ್‌ಫರ್ಡ್ ನಿಘಂಟಿನ ಸಂಪಾದಕ ಬಾ.ವೇ.ಶ್ರೀಧರ, ದಿ.ಶೇಷನಾರಾಯಣ ಅವರ ಪುತ್ರಿ ಕು.ವೀಣಾ ಎಸ್., ಚಿಂತನ ಚಿತ್ತಾರ ಪ್ರಕಾಶಕರಾದ ಚಿಕ್ಕಣ್ಣನವರ್, ಕೃತಿಯ ಸಂಪಾದಕರಾದ ಕು.ಧನಲಕ್ಷ್ಮಿ ಟಿ.ಸಿ., ಸ್ಥಳ: ಲೈಬ್ರರಿ ಕಾನ್ಫರೆನ್ಸ್ ಹಾಲ್, ಮಾನಸ ಮೀಡಿಯಾ, ಮಾನಸ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು, ಐಕ್ಯೂಎಸಿ:** 2023–24 ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮ, ಉದ್ಘಾಟನೆ: ಕರ್ನಾಟಕ ಸರ್ಕಾರದ ಕಾನೂನು ಇಲಾಖೆಯ ವಿಶೇಷ ಕಾರ್ಯದರ್ಶಿ ಹೆಚ್.ಕೆ.ಜಗದೀಶ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಶ್ರೀ ಪಿ.ಎಂ. ಚಿಕ್ಕಬೋರಯ್ಯ ಹಾಲ್, ಕಾಲೇಜಿನ ಆವರಣ, ಬೆಳಗ್ಗೆ 10.30 ಗಂಟೆಗೆ.

■ **ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘ:** ಸಹ ನೌಕರರ ಮಕ್ಕಳ ಶಿಕ್ಷಣ ಪ್ರೋತ್ಸಾಹಿಸುವ ಸಲುವಾಗಿ ಪ್ರತಿಭಾ ಪುರಸ್ಕಾರ ವಿತರಣೆ ಕಾರ್ಯಕ್ರಮ, ಅಧ್ಯಕ್ಷತೆ: ಮೈಸೂರು ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಸ್ಥಳ: ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣ (ಹಳೆಯ ಕೌನ್ಸಿಲ್ ಸಭಾಂಗಣ), ನಗರಪಾಲಿಕೆ ಕಚೇರಿ, ಸಂಜೆ 6 ಗಂಟೆಗೆ.

ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಕಚೇರಿ ಕಟ್ಟಡಕ್ಕೆ ಗುದ್ದಲಿ ಪೂಜೆ



ಮೈಸೂರು, ಜ.19–ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಗಾಂಧಿ–ಕಸ್ತೂರ ಬಾ ಮತ್ತು ಜವಾಹರ ಲಾಲ್ ನೆಹರು ಒಡನಾಡಿಗಳಾದ ಮೈಸೂರು ರಾಜ್ಯದ ಮೊದಲ ಹಣಕಾಸು, ಕೈಗಾರಿಕೆ ಮತ್ತು ರೈಲ್ವೆ ಸಚಿವರಾಗಿದ್ದ ಹೆಚ್.ಸಿ.ದಾಸಪ್ಪ ಸ್ಮರಣಾರ್ಥ ಸ್ಥಾಪಿತವಾದ 'ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ' ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಪೂಜೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಕಾರ್ಯ ದರ್ಶಿ ಪಿ.ವಿಶ್ವನಾಥ್ ಮಾತನಾಡಿ, ಹೆಚ್.ಸಿ. ದಾಸಪ್ಪ ಅವರ ವಿಚಾರಧಾರೆಗಳು ಚಿರಸ್ಥಾಯಿಯಾಗಲು ಪದ್ಮಭೂಷಣ ಪ್ರಶಸ್ತಿ ವಿಜೇತೆ ಶ್ರೀಮತಿ ಯಶೋಧರಾ ದಾಸಪ್ಪ ಮತ್ತು ಇವರ ಮಗ, ಮೂರು ಬಾರಿ ಮೈಸೂರು ಲೋಕಸಭಾ ಸದಸ್ಯರಾಗಿದ್ದ ಎಚ್.ಡಿ. ತುಳಸಿದಾಸ್ ಅವರುಗಳು ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಕ್ರಿ.ಶ.1974ರಲ್ಲಿ ಸ್ಥಾಪಿಸಿದ್ದರು. ಮೈಸೂರಿನ ಪುರಭವನದಲ್ಲಿ ನಡೆದ ಸಂಸ್ಥೆಯ ಉದ್ಘಾಟನಾ ಕಾರ್ಯಕ್ರಮವನ್ನು ಅಂದಿನ ರಾಷ್ಟ್ರಪತಿ ವಿ.ವಿ.ಗಿರಿ ನೆರವೇರಿಸಿದ್ದರು. ಆರ್ಥಿಕ ಕಾರಣಗಳಿಂದ ಸಂಸ್ಥೆಗೆ ಅಂದಿನ ಸಿಐಟಿಬಿ ನೀಡಿದ್ದ ನಿವೇಶನದಲ್ಲಿ ಹೆಚ್.ಸಿ.ದಾಸಪ್ಪ ಸ್ಮಾರಕ ಭವನ ನಿರ್ಮಿಸಲು ಸಾಧ್ಯವಾಗಿರಲಿಲ್ಲ. ಈಗ ದಾನಿಗಳ ಸಹಾಯದಿಂದ ನಿರ್ಮಾಣ ಕಾರ್ಯಕ್ಕೆ ಅಂಕಿತ ಹಾಕುತ್ತಿರುವುದು ಸಂತಸದ ವಿಷಯ ಎಂದರು.

ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಸರೋಜ ತುಳಸಿದಾಸ್ ಅವರು, ತಮ್ಮ ಮಾವನವರಾದ ಹೆಚ್.ಸಿ.ದಾಸಪ್ಪ ಅವರ ವಿಚಾರ ಧಾರೆಗಳನ್ನು ನವಪೀಳಿಗೆಗೆ ತಿಳಿಸುವ ಪ್ರಯತ್ನವಾಗಿ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಸ್ಥಾಪಿತವಾಗಿತ್ತು. ಸಂಸ್ಥೆಯ ಪದಾಧಿಕಾರಿಗಳ ಸರ್ವ ಪ್ರಯತ್ನದಿಂದ 5 ಕೋಟಿ ರೂ. ವೆಚ್ಚದಲ್ಲಿ ಎಚ್.ಸಿ. ದಾಸಪ್ಪ ಮತ್ತು ಪದ್ಮಭೂಷಣ ಶ್ರೀಮತಿ ಯಶೋಧರ ದಾಸಪ್ಪ ಸ್ಮಾರಕ ಭವನ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ 50 ಲಕ್ಷ ರೂ. ಅನುದಾನ ಮಂಜೂರಾಗಿತ್ತು. ಅದನ್ನೂ ಸಹ ಸದ್ವಿನಿಯೋಗಿಸಿಕೊಳ್ಳಲಾಗದೆ, ಅನು ದಾನದ ಹಣ ಹಿಂದಿರುಗಿತ್ತು. ಈಗ ಕರ್ನಾಟಕ ಸರ್ಕಾರದ ವಿಶ್ರಾಂತ ವಿಶೇಷ ಕಾರ್ಯದರ್ಶಿ ಡಾ. ಪಿ.ಬೋರೇಗೌಡರು, ಕಟ್ಟಡ ನಿರ್ಮಾಣಕ್ಕೆ ಮುಂದಾಗಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ಸರ್ಕಾರದ ವಿಶ್ರಾಂತ ವಿಶೇಷ ಕಾರ್ಯದರ್ಶಿ ಡಾ. ಪಿ.ಬೋರೇಗೌಡ ಮಾತನಾಡಿ, ಕರ್ನಾಟಕ ಕಂಡ ಅತ್ಯುನ್ನತ ಮತ್ತು ಸಂಭಾವಿತ ರಾಜಕೀಯ ನಾಯಕರು ಹೆಚ್.ಸಿ.ದಾಸಪ್ಪ ಮತ್ತು ಯಶೋಧರ ದಾಸಪ್ಪ ದಂಪತಿ. ಇವರ ತಂದೆಯರು ಸಹ ನಾಡು ಕಂಡ ಧೀಮಂತ ನಾಯಕರು. ಹೆಚ್.ಸಿ.ದಾಸಪ್ಪ ತಂದೆ ಹೆಚ್.ಚೆನ್ನಯ್ಯ ಕರ್ನಾಟಕದ ಮೊದಲ ಪ್ರಾದೇಶಿಕ ಪಕ್ಷ ಪ್ರಜಾಮಿತ್ರ ಮಂಡಳಿ ಸಂಸ್ಥಾಪಕ ಅಧ್ಯಕ್ಷರು. ಹಾಗೇ ಶ್ರೀಮತಿ ಯಶೋಧರ ಅವರ ತಂದೆ ಕೆ.ಹೆಚ್.ರಾಮಯ್ಯ ರಾಜ್ಯ ಒಕ್ಕಲಿಗ ಸಂಘದ ಸಂಸ್ಥಾಪಕರು. ಇವರಿಬ್ಬರ ಹೋರಾಟದಿಂದಲೇ ಮೈಸೂರು ರಾಜ ಸಂಸ್ಥಾನದಲ್ಲಿ ಮೊದಲ ಬಾರಿ ಹಿಂದುಳಿದ ವರ್ಗಕ್ಕೆ ಮೀಸಲಾತಿ ಜಾರಿಗೆ ಬಂತು. ಮೊದಲ ಮಹಿಳಾ ಸಚಿವೆ ಎನಿಸಿದ ಶ್ರೀಮತಿ ಯಶೋಧರ ದಾಸಪ್ಪ ಗಾಂಧೀಜಿ ಆಶಯದಂತೆ ರಾಜ್ಯದಲ್ಲಿ ಮದ್ಯಪಾನ ನಿಷೇಧಗೊಳಿಸದಿದ್ದಕ್ಕೆ ನಿಜಲಿಂಗಪ್ಪ ಸಂಪುಟಕ್ಕೆ ರಾಜೀನಾಮೆ ಕೊಟ್ಟು ಹೊರ ನಡೆದ ಧೀರೋದಾತ್ತ ಮಹಿಳೆ. ಇಂಥ ಮಹನೀಯರು ಸ್ಥಾಪಿಸಿದ ಸಂಸ್ಥೆಗೆ ತಾವು ಅಳಿಲು ಸೇವೆ ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾ ವರ್ಧಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಗುಂಡಪ್ಪ ಗೌಡ, ಕರ್ನಾಟಕ ಮುಕ್ತ ವಿವಿ ಮಾಜಿ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ನಿವೃತ್ತ ಐಜಿಪಿ ಅರ್ಕೇಶ್, ಮೈಸೂರು ಮಹಾನಗರ ಪಾಲಿಕೆ ನಿವೃತ್ತ ಆಯುಕ್ತ ಡಾ. ಕೆ.ಎನ್.ಚಂದ್ರಶೇಖರ್, ನಿವೃತ್ತ ಬಿಇಓ ಕೆಂಪರಾಜೇಗೌಡ, ವಿದ್ಯುತ್ ಇಲಾಖೆ ನಿವೃತ್ತ ಮುಖ್ಯ ಇಂಜಿನಿಯರ್ ಚಂದ್ರ ಶೇಖರ್, ನೇಗಿಲಯೋಗಿ ಟ್ರಸ್ಟ್‌ನ ಡಿ.ರವಿ ಕುಮಾರ್, ಇಂಜಿನಿಯರ್ ವೆಂಕಟೇಶ್ ಮತ್ತಿತರರು ಭಾಗವಹಿಸಿದ್ದರು.

'ಜಸ್ಟ್ ಪಾಸ್' ಚಿತ್ರದ ಹಾಡು ಬಿಡುಗಡೆ



ಚಿಕ್ಕಬಳ್ಳಾಪುರ ಕ್ಷೇತ್ರದ ಶಾಸಕರು ಹಾಗೂ ಪರಿಶ್ರಮ ಅಕಾಡೆಮಿಯ ಸ್ಥಾಪಕರು ಆದ ಪ್ರದೀಪ್ ಈಶ್ವರ್ ಅವರು, "ಜಸ್ಟ್ ಪಾಸ್" ಚಿತ್ರದ ಹಾಡನ್ನು ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರ ಜೊತೆಗೂಡಿ ಬಿಡುಗಡೆ ಮಾಡಿದರು. ಕವಿರಾಜ್ ಬರೆದಿರುವ, ಹರ್ಷವರ್ಧನ್ ರಾಜ್ ಸಂಗೀತ ನೀಡಿರುವ "ಟೈಮಿಗೇ ಟೈಮೇನೇ ದುಶ್ಮನ್" ಎಂಬ ಯುವಕರಿಗೆ ಪ್ರಿಯವಾಗುವ ಈ ಗೀತೆ ಎಲ್ಲರ ಮನ ಗೆಲ್ಲುತ್ತಿದೆ.

ಪ್ರಪಂಚದಲ್ಲಿ ಹೆಚ್ಚು ಅಂಕ ಬಂದವರಿಗೆ ಸಾಕಷ್ಟು ಕಾಲೇಜುಗಳಿದೆ. ಆದರೆ "ಜಸ್ಟ್ ಪಾಸ್" ಆದವರಿಗಾಗಿಯೇ ನಮ್ಮ ಚಿತ್ರದಲ್ಲಿ ಕಾಲೇಜು ತೆರೆಯಲಾಗಿದೆ. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ ಹಾಡು ಹಾಗೂ ಟೀಸರ್ ಎಲ್ಲರ ಮೆಚ್ಚುಗೆ ಪಡೆದುಕೊಂಡಿದೆ. ಇಂದು ಈ ಹಾಡನ್ನು ನಾನು ಇಷ್ಟಪಡುವ ಬರಹಗಾರರಾದ ವಿಶ್ವೇಶ್ವರ ಭಟ್ ಹಾಗೂ ಶಾಸಕರಾದ ಪ್ರದೀಪ್ ಈಶ್ವರ್ ಬಿಡುಗಡೆ ಮಾಡಿದ್ದು ಬಹಳ ಖುಷಿಯಾಗಿದೆ. ಏಕೆಂದರೆ ಪರಿಶ್ರಮ ಅಕಾಡೆಮಿಯ ಮೂಲಕ ಪ್ರದೀಪ್ ಈಶ್ವರ್ ಅವರು ಸಹ ಸಾಕಷ್ಟು ಜಸ್ಟ್ ಪಾಸ್ ಆದ ವಿದ್ಯಾರ್ಥಿಗಳನ್ನು ಫಸ್ಟ್ ಕ್ಲಾಸ್ ಬರುವ ಹಾಗೆ ಮಾಡುತ್ತಿದ್ದಾರೆ. ಅವರು ನಮ್ಮ ಚಿತ್ರದ ಹಾಡನ್ನು ಬಿಡುಗಡೆ ಮಾಡಿದ್ದು ನಿಜಕ್ಕೂ ಹೆಮ್ಮೆ ಎಂದು ತಿಳಿಸಿದ ನಿರ್ದೇಶಕ ಕೆ.ಎಂ.ರಘು, ಪ್ರದೀಪ್ ಈಶ್ವರ್ ತಮ್ಮ "ಪರಿಶ್ರಮ" ಪುಸ್ತಕದಲ್ಲಿ ಬರೆದುಕೊಂಡಿರುವ ಜೀವನದ ಕುರಿತಾದ ನಾಲ್ಕು ಅರ್ಥಗರ್ಭಿತ ಸಾಲುಗಳನ್ನು ವಾಚಿಸಿದರು.

ಪ್ರದೀಪ್ ಈಶ್ವರ್ ಹಾಗೂ ವಿಶ್ವೇಶ್ವರ ಭಟ್ ಅವರು ನಮ್ಮ ಚಿತ್ರದ ಹಾಡನ್ನು ಬಿಡುಗಡೆ ಮಾಡಿ ಹಾರೈಸಿದ್ದಾರೆ ಅವರಿಗೆ ಹಾಗೂ ನನ್ನ ಚಿತ್ರತಂಡಕ್ಕೆ ಧನ್ಯವಾದ ಎಂದು ನಿರ್ಮಾಪಕ ಕೆ.ವಿ.ಶಶಿಧರ್ ಹೇಳಿದರು.

ನಮ್ಮ ದೇಶದ ಅತೀ ಹೆಚ್ಚು ಶ್ರೀಮಂತರೆಲ್ಲಾ "ಜಸ್ಟ್ ಪಾಸ್" ಹಾಗೂ ಅದಕ್ಕಿಂತ ಸ್ವಲ್ಪ ಹೆಚ್ಚು ಅಂಕ ಪಡೆದಿರುವವರೆ ಎಂದ ಪತ್ರಕರ್ತ ವಿಶ್ವೇಶ್ವರ ಭಟ್ ಅವರು, ಚಿತ್ರದ ಹಾಡುಗಳು ತುಂಬಾ ಚೆನ್ನಾಗಿವೆ. ಚಿತ್ರದ ಹೆಸರು "ಜಸ್ಟ್ ಪಾಸ್" ಅಷ್ಟೇ. ಆದರೆ ಗಳಿಕೆಯಲ್ಲಿ "ಫಸ್ಟ್ ಕ್ಲಾಸ್" ಆಗಲಿ ಎಂದು ಹಾರೈಸಿದರು.

ನಿಜವಾಗಲೂ ನಮ್ಮ ದೇಶದಲ್ಲಿ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದರೆ ಅದು "ಜಸ್ಟ್ ಪಾಸ್" ಆದರಿಂದ ಮಾತ್ರ. ಉದಾಹರಣೆಗೆ ನಾನೇ. ಜೀವನದಲ್ಲಿ ಸಾಕಷ್ಟು ಕಷ್ಟಪಟ್ಟ ನಾನು, ಇಂದು "ಪರಿಶ್ರಮ" ಅಕಾಡೆಮಿ ಸ್ಥಾಪಿಸಿ ಐನೂರಕ್ಕೂ ಹೆಚ್ಚು ಜನರಿಗೆ ಕೆಲಸ ನೀಡಿದ್ದೇನೆ. ವರ್ಷಕ್ಕೆ ಸಾಕಷ್ಟು ವಿದ್ಯಾರ್ಥಿಗಳು ನಮ್ಮ ಸಂಸ್ಥೆಯಿಂದ ವೈದ್ಯರಾಗುತ್ತಿದ್ದಾರೆ. "ಜಸ್ಟ್ ಪಾಸ್" ಆದೆ ಅಂತ ಬೇಜಾರು ಮಾಡಿಕೊಳ್ಳಬೇಡಿ. ನನಗೆ ತಿಳಿದ ಹಾಗೆ ಈ ಚಿತ್ರದ ಕಥೆಯೂ ಇದೇ ರೀತಿ ಇರಬಹುದು. "ಜಸ್ಟ್ ಪಾಸ್" ಚಿತ್ರ ಚೆನ್ನಾಗಿ ಓಡಲಿ ಎಂದು ಶಾಸಕ ಪ್ರದೀಪ್ ಈಶ್ವರ್ ತಮ್ಮದೇ ಮಾತಿನ ಶೈಲಿಯಲ್ಲಿ ಚಿತ್ರತಂಡಕ್ಕೆ ಶುಭ ಕೋರಿದರು. ನಾಯಕ ಶ್ರೀ, ನಾಯಕಿ ಪ್ರಣತಿ, ನಟ ಸುಚೇಂದ್ರ ಪ್ರಸಾದ್, ಸಂಗೀತ ನಿರ್ದೇಶಕ ಹರ್ಷವರ್ಧನ್ ರಾಜ್, ಛಾಯಾಗ್ರಾಹಕ ಸುಜಯ್ ಕುಮಾರ್ ಮುಂತಾದ ಚಿತ್ರತಂಡದ ಸದಸ್ಯರು "ಜಸ್ಟ್ ಪಾಸ್" ಬಗ್ಗೆ ಮಾತನಾಡಿದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಒಂದನೇ ವರ್ಷದ ಪುಣ್ಯಸ್ಮರಣೆ



ಶ್ರೀ ಮಹದೇವೇಗೌಡ
ನಿಧನ: 20.01.2023
ದುಃಖತಪ್ತರು: ಶ್ರೀಮತಿ ಮಂಜುಳ ಮತ್ತು ಮಕ್ಕಳು ಹಾಗೂ ಹೊನ್ನಹಳ್ಳಿ ಗ್ರಾಮಸ್ಥರು, ಚಾಮರಾಜನಗರ.

ಹಸಿರು ನಮ್ಮ ಉಸಿರು

PUBLIC NOTICE

This is to inform the public that my client intends to take over M/s. R.K. Foutain Square Hotels Private Limited, a company incorporated under the Companies Act, 1956, having its registered office at #15, Kasturba Road, Bangalore-560001 ("Owner"). The Owner represents that it holds the immovable property mentioned in the Schedule herebelow. The Owner represents and warrants that it is an ongoing Company and the absolute owner of the Schedule Property and that it has neither conveyed nor has entered into any Agreement of Sale/Development Agreement/Memorandum of Understanding nor any sort of arrangement with any person/s for sale/transfer/development of the Schedule Property and further represents that it has not encumbered, mortgaged, created any charge or lien on the Schedule Property in any manner and apart from them there are no other person/s, firm or company having any sort of right, title or claim over the Schedule Property. Any person/s having objection/s or claim/s, shall with documentary evidence, lodge their objection(s)/claim(s) **within fifteen (15) days** from the date of this notice with the undersigned failing which, my client shall proceed with the above mentioned transaction.

SCHEDULE

All that piece and parcel of the Properties bearing Nos. 3844/2-M-9 and 3844/2A-M-9/A, earlier bearing Nos. 165, 167 and 168 comprising a residential building, situated at B. B. Mills Road, Anegundi Road, Bannimantap Extension, Mandi Mohalla, in Corporation Ward No. 43, Mysore, measuring in total 39,024 square feet and is bounded on the:

East by : B. B. Mills Road
West by : Anegundi Road
North by : Sujatha Hotel Building (old Site No. 166)
South by : B. M. Cross Road

Vinay K. S. Advocate
Jayanth Pattanshetti Associates LLP
102, Ground Floor,
"Rams Infantry Manor",
No. 70, Infantry Road,
Bengaluru-560 001.
Ph: 080 41238516 / 41238367
Bengaluru
Date: 19-01-2024

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಸಿಟಿ–570004, ಚಾಮರಾಜ ಮೊಹಲ್ಲಾ, ಲಕ್ಷ್ಮೀಪುರಂ, ದಿವಾನ್ಸ್ ರಸ್ತೆ, ಮನೆ ನಂ. 556 ರಲ್ಲಿ ವಾಸವಾಗಿರುವ ಶ್ರೀ. ಹೆಚ್.ಎಸ್. ರಂಗಸ್ವಾಮಿ ರವರ ಮಗನಾದ ಶ್ರೀ. ಜಯರಾಮ್ .ಹೆಚ್.ಆರ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಹತ್ತು (10) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ದಿವಾನ್ಸ್ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಮನೆ ನಂ. 556–557 CH–68, ಇದರ ವಿಸ್ತೀರ್ಣ ಪೂರ್ವ ಪಶ್ಚಿಮ 19.812040 ಮೀಟರ್ ಮತ್ತು ದಕ್ಷಿಣೋತ್ತರ 5.486411 ಮೀಟರ್, ಒಟ್ಟು ವಿಸ್ತೀರ್ಣ 108.69651 ಚದರ ಮೀಟರ್‌ಗಳ ನಿವೇಶನ ಮತ್ತು ಸದರಿ ನಿವೇಶನದಲ್ಲಿ ಕಟ್ಟಿರುವ 108.69651 ಚದರ ಮೀಟರ್‌ಗಳ ನೆಲ ಅಂತಸ್ತಿನ ಮದ್ರಾಸ್ ತಾರಸಿ ಮತ್ತು ರೆಡ್ ಆಕ್ಸೈಡ್ ನೆಲಹಾಸಿನಿಂದ ಕೂಡಿರುವ ವಾಸದ ಮನೆ ಮತ್ತು ಈ ಸ್ವತ್ತಿಗೆ

ಚಕ್ಕುಬಂದಿ : ಪೂರ್ವಕ್ಕೆ : ದಿವಾನ್ಸ್ ರಸ್ತೆ, ಪಶ್ಚಿಮಕ್ಕೆ : ಕನ್ಸರ್‌ವೆನ್ಸಿ ಗಲ್ಲಿ, ಉತ್ತರಕ್ಕೆ : ಶ್ರೀ. ರಾಮಣ್ಣನವರ ಮನೆ, ದಕ್ಷಿಣಕ್ಕೆ : ಶ್ರೀ. ನಾರಾಯಣರಾಯರ ಮನೆ.



ಸಹಿ/– ಕೆ.ಎನ್. ಮಹಾದೇವಸ್ವಾಮಿ, ಬಿ.ಎಸ್‌ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ, ರೂಂ ನಂ. 1 & 2, ಒಂದನೇ ಮಹಡಿ, ಅಲ್ಲಮ್ಮ ಪ್ರಭು ಕೃಪ ಕಮರ್ಷಿಯಲ್ ಕಾಂಪ್ಲೆಕ್ಸ್, 5ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು–570004, ಮೊಬೈಲ್ ಸಂಖ್ಯೆ : 94482 22522, ಕಛೇರಿ ಸಂಖ್ಯೆ : 0821–4287998.

ದಿನಾಂಕ: 18–01–2024

ದಿ ಗ್ರಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಮಾನ್ಯರೇ,

ದಿನಾಂಕ 21–01–2024ನೇ ಭಾನುವಾರ ನಡೆಯಲಿರುವ ಚುನಾವಣೆಯಲ್ಲಿ ಈ ಕೆಳಕಂಡ 11 ಅಭ್ಯರ್ಥಿಗಳಿಗೆ ಮತ ನೀಡಿ ಜಯಶೀಲರನ್ನಾಗಿ ಮಾಡಬೇಕಾಗಿ ವಿನಂತಿ.

1		ಆರ್. ಅನಂತರಾಮು
2		ಸಿ.ಕಮಲಮ್ಮ
4		ಎಸ್.ಎನ್. ಜಗದೀಶ್
5		ಪ್ರೋ. ಪಿ.ವಿ. ನರಹರಿ
8		ಟಿ.ಎಸ್.ರವಿಶಂಕರ್
10		ಡಾ|| ಕೆ.ವಿ. ಲಕ್ಷ್ಮೀದೇವಿ
13		ಎನ್ ಶ್ರೀನಿವಾಸ
14		ಕೆ.ಜಿ. ಸತೀಶ್
15		ಡಾ|| ಸುಜಾತ ಶ್ರೀನಿವಾಸ ರಾವ್
16		ಎಲ್.ಸೋಮಣ್ಣ
18		ಎಂ.ಎ.ಹೇಮಲತ

ಸ್ಥಳ : ಹಾರ್ಡ್ವಿಕ್ ಪ್ರೌಢಶಾಲೆ, ಜೆ.ಎಲ್.ಬಿ.ರಸ್ತೆ, ಮೈಸೂರು
ದಿನಾಂಕ : 21–01–2024ನೇ ಭಾನುವಾರ
ಸಮಯ : ಬೆಳಿಗ್ಗೆ 9.00 ರಿಂದ 4.00 ಗಂಟೆಯವರೆಗೆ
ವಿ.ಸೂಚನೆ : ಮತದಾನ ಮಾಡಲು ಕಡ್ಡಾಯವಾಗಿ ಗುರುತಿನಚೀಟಿ ತರಬೇಕಾಗಿ ವಿನಂತಿ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(E-mail:-khsdrp.divmys@gmail.com)

ಸಂಖ್ಯೆ: ಆಕುಕ/ಕಾ.ಅ/ವಿ/ಮೈ/ಆಡಳಿತ/ಬಾಡಿಗೆ ವಾಹನ/ಟೆಂಡರ್–19/2023–24/477 ದಿನಾಂಕ: 16.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರು ಈ ಕೆಳಕಂಡ ಕಛೇರಿಗಳಿಗೆ ವಾರ್ಷಿಕ ಅವಧಿಗೆ ಬಾಡಿಗೆ ವಾಹನ ಸೌಲಭ್ಯ ಪಡೆಯಲು ಅರ್ಹ ಸೇವಾ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ಕೆಲಸದ ವಿವರಣೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1	ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರ ಕಛೇರಿಗೆ ವಾರ್ಷಿಕ ಅವಧಿಗೆ ಬಾಡಿಗೆ ವಾಹನ ಸೌಲಭ್ಯ ಒದಗಿಸುವುದು.	6.50	16250.00
2	ಸಹಾಯಕ ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ಉಪ–ವಿಭಾಗ, ಮೈಸೂರು ಇವರ ಕಛೇರಿಗೆ ವಾರ್ಷಿಕ ಅವಧಿಗೆ ಬಾಡಿಗೆ ವಾಹನ ಸೌಲಭ್ಯ ಒದಗಿಸುವುದು.	5.30	13250.00
3	ಸಹಾಯಕ ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ಉಪ–ವಿಭಾಗ, ಮಂಡ್ಯ ಇವರ ಕಛೇರಿಗೆ ವಾರ್ಷಿಕ ಅವಧಿಗೆ ಬಾಡಿಗೆ ವಾಹನ ಸೌಲಭ್ಯ ಒದಗಿಸುವುದು.	5.30	13250.00
4	ಸಹಾಯಕ ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ಉಪ–ವಿಭಾಗ, ಹಾಸನ ಇವರ ಕಛೇರಿಗೆ ವಾರ್ಷಿಕ ಅವಧಿಗೆ ಬಾಡಿಗೆ ವಾಹನ ಸೌಲಭ್ಯ ಒದಗಿಸುವುದು.	5.30	13250.00
5	ಸಹಾಯಕ ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ಉಪ–ವಿಭಾಗ, ಮಂಗಳೂರು ಇವರ ಕಛೇರಿಗೆ ವಾರ್ಷಿಕ ಅವಧಿಗೆ ಬಾಡಿಗೆ ವಾಹನ ಸೌಲಭ್ಯ ಒದಗಿಸುವುದು.	5.30	13250.00

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 30.01.2024 ಸಂಜೆ 16.00 ಘಂಟೆಯವರೆಗೆ **2)** ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ: 31.01.2024 ಸಂಜೆ 16.30 ಘಂಟೆಗೆ.

ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ (www.kppp.karnataka.gov.in) ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

DIPR/DDMYS/KSMCA/915/2023-24

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ...ನಾನು ಸಂಗೀತ ಅಭ್ಯಾಸ ಮಾಡುವಾಗಲೆಲ್ಲಾ ನೀವ್ ಯಾಕ್ರೀ ಹೊರಗ್ ಹೋಗಿ ನಿಂತ್ಕೋತಿರಾ?

ಪತಿ : ಅಕ್ಕ-ಪಕ್ಕದ ಮನೆಯವರು ನಾನು ನಿನ್ನನ್ನು ಹೊಡಿತಿದ್ದೀನಿ ಅಂತಾ ತಿಳ್ಕೋಬಾರ್ದು ಅಂತ...

ಮೈಸೂರು ಮಿತ್ರ
ಶನಿವಾರ, 20 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸುಳ್ಳು ಮತ್ತು ಐಷಾರಾಮಿ ಬದುಕು ನಿಭಾಯಿಸುವುದು ಕಷ್ಟ, ಸತ್ಯ ಮತ್ತು ಸರಳ ಬದುಕು ಬಲು ಸುಲಭ.–ಡಾ.ಎಪಿಜೆ ಅಬ್ದುಲ್ ಕಲಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ

ನಿಮ್ಮ ಪತ್ರಗಳು

ಯುವಕರಿಗೆ ಧೈರ್ಯ ಬೇಕು; ಭಂಡ ಧೈರ್ಯ ಅಲ್ಲ

ಮಾನ್ಯರೆ,

ಇಂದಿನ ಯುವಕರೇ ದೇಶದ ಮುಂದಿನ ಭವಿಷ್ಯ ಅನ್ನೋ ಮಾತನ್ನು ನಂಬಬೇಕೋ ಬೇಡವೋ ಅನ್ನೋ ಪ್ರಶ್ನೆ ಮೂಡುವಂತಹ ಸಂದರ್ಭ ಇತ್ತೀಚಿನ ದಿನಗಳಲ್ಲಿ ಬರುವಂತಾಗಿದೆ. ಯುವಕರ ಮನಸ್ಸಿನ ಸ್ಥಿತಿ ಹದಗೆಡುತ್ತಿದೆ. ಅವರು ಯೋಚನೆ ಮಾಡುವ ದಿಕ್ಕೇ ಬದಲಾಗಿದೆ. ಏನೇ ಸಣ್ಣ ಪುಟ್ಟ ತೊಂದರೆ ಬಂದರೂ ಸಹ ಪ್ರಾಣ ಕಳೆದುಕೊಳ್ಳುವಂತಹ ದೊಡ್ಡ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಪ್ರಕರಣಗಳು ಬರುತ್ತಿವೆ. ಪೋಷಕರು ಮಕ್ಕಳಿಗೆ ಏನಾದರೂ ಬುದ್ಧಿವಾದ ಹೇಳುವುದಕ್ಕೂ ನೂರು ಬಾರಿ ಯೋಚಿಸಿ ಮಾತನಾಡುವ ಪರಿಸ್ಥಿತಿ ಒದಗಿಬಂದಿದೆ. ಇತ್ತೀಚೆಗೆ 21 ವರ್ಷದ ಬಿ.ಬಿ.ಎ ವಿದ್ಯಾರ್ಥಿನಿಯೊಬ್ಬಳು ತಂದೆ-ತಾಯಿ ಅವಳನ್ನು ಮಾಲ್‌ಗೆ ಕಳುಹಿಸದೇ ಇರುವ ಒಂದು ಸಣ್ಣ ಕಾರಣಕ್ಕಾಗಿ ತನ್ನ ಪ್ರಾಣವನ್ನು ಕಳೆದುಕೊಂಡಿದ್ದಾಳೆ. ಇಂತಹ ಪ್ರಕರಣಗಳನ್ನು ನೋಡಿದಾಗ, ಕೇಳಿದಾಗ ನಮ್ಮ ಯುವಕರ ಸಮೂಹ ಮನಸ್ಥಿತಿ ಎಷ್ಟು ಹದಗೆಟ್ಟಿದೆ ಎಂದು ಒಂದು ಬಾರಿ ಯೋಚಿಸಬೇಕಾಗಿದೆ. ಬಾಳಿ ಬದುಕಬೇಕಾಗಿರುವ ಯುವಕರು ಅಭಿಮಾನದ ಬದಲು ಹುಚ್ಚಭಿಮಾನ ತೋರಿಸಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಧೈರ್ಯದ ಬದಲು ಭಂಡ ಧೈರ್ಯ ತೋರುತ್ತಿದ್ದಾರೆ. ಇಂತಹ ಸಮಯದಲ್ಲಿ ಪೋಷಕರು ತಮ್ಮ ಮಕ್ಕಳನ್ನು ಬಹಳಷ್ಟು ಸೂಕ್ಷ್ಮತೆಯಿಂದ ನೋಡಿಕೊಳ್ಳಬೇಕಾಗಿದೆ. ಬೈಯುವ ಬದಲು, ಗದರುವ ಬದಲು ಮೊದಲು ಮಕ್ಕಳ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಒಂದು ಕ್ಷಣದಲ್ಲಿ ಏನು ಬೇಕಾದರೂ ಆಗಬಹುದು. ಇದನ್ನು ತಡೆಗಟ್ಟಲು ಸರ್ಕಾರ ಕೆಲವೊಂದು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಶಾಲಾ-ಕಾಲೇಜುಗಳಲ್ಲಿ ತಿಂಗಳಿಗೊಮ್ಮೆ ಮಕ್ಕಳಿಗೆ ಮನೋವೈದ್ಯರಿಂದ ತಪಾಸಣೆ ಮಾಡಿಸಬೇಕು. ಆಗಲಾದರೂ ಇಂತಹ ಪ್ರಕರಣಗಳು ಕಡಿಮೆಯಾಗಬಹುದು.

–ಸಂಗೀತ. ಡಿ, ಪಾಂಡವಪುರ.

ಮೊಬೈಲ್ ಬಳಕೆ ಹಾನಿಕಾರಕ

ಮಾನ್ಯರೆ,

ಪುರಾತನ ಕಾಲದಲ್ಲಿ ಸಂಪರ್ಕ ಸಂವಹನಕ್ಕೆ ಪಾರಿವಾಳಗಳನ್ನು ಬಳಸಲಾಗುತ್ತಿತ್ತು ನಂತರದ ದಿನಗಳಲ್ಲಿ ಪತ್ರದ ಮೂಲಕ ಸಂವಹನ ನಡೆಸಲಾಗುತ್ತಿತ್ತು. ಮೊದಲ ಹ್ಯಾಂಡ್ಹೆಲ್ಡ್ ಮೊಬೈಲ್ ಫೋನ್ ಅನ್ನು ಮೊಟೊರೊಲಾ ಕಂಪನಿಯ ಮಾರ್ಟಿನ್ ಕೂಪರ್ ಅವರು ನ್ಯೂಯಾರ್ಕ್ ನಗರದಲ್ಲಿ ಏಪ್ರಿಲ್ 3, 1973 ರಂದು 2 ಕಿಲೋಗ್ರಾಂಗಳು (4.4 ಪೌಂಡುಗಳು)ತೂಕದ ಹ್ಯಾಂಡ್ಸೆಟ್ ಪ್ರದರ್ಶಿಸಿದರು.

ನಂತರ ಮೊಬೈಲ್ ಫೋನ್‌ಗಳು ಅಭಿವೃದ್ಧಿ ಹೊಂದುತ್ತಾ ಪ್ರಸ್ತುತ ದಿನಗಳಲ್ಲಿ ಕಡಿಮೆ ತೂಕದ ಮೊಬೈಲ್ ಫೋನ್‌ಗಳು ಲಭ್ಯವಿದ್ದು, ಅಂಗೈಯಲ್ಲಿ ಪ್ರಪಂಚವನ್ನು ನೋಡುವ ಮಟ್ಟಕ್ಕೆ ಮೊಬೈಲ್ ಉದ್ಯಮ ಬೆಳೆದು ನಿಂತಿದ್ದು, ಲಕ್ಷಾಂತರ ಜನಗಳಿಗೆ ಉದ್ಯೋಗವನ್ನು ಕೂಡ ಕಲ್ಪಿಸಿದ್ದು, ಇಂದು ಮೊಬೈಲ್ ಫೋನ್‌ಗಳು ಮಾನವನ ಅವಿಭಾಜ್ಯ ಅಂಗವಾಗಿದೆ.

ಮೊಬೈಲ್ ಫೋನ್‌ಗಳಿಂದ ಹಲವಾರು ರೀತಿಯ ಅನುಕೂಲಗಳಿದ್ದು, ಇಂದಿನ ಯುವಜನಾಂಗ ಮೊಬೈಲ್ ಫೋನ್‌ಗಳನ್ನು ವಿಪರೀತವಾಗಿ ಬಳಸುವ ಮೂಲಕ ಆರೋಗ್ಯ, ಹವ್ಯಾಸಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮೊಬೈಲ್ ಫೋನ್‌ಗಳ ಬಳಕೆಯಿಂದ ಮಕ್ಕಳ ವಿದ್ಯಾಭ್ಯಾಸದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಜೊತೆಗೆ ತಲೆನೋವು, ದುರ್ಬಲಗೊಂಡ ಏಕಾಗ್ರತೆ, ಸ್ಮರಣೆ ಮತ್ತು ಆಯಾಸದಂತಹ ಹಲವಾರು ರೋಗಲಕ್ಷಣಗಳಿಗೆ ಕಾರಣ ವಾಗಬಹುದು ಎಂದು ಸಂಶೋಧನೆಗಳು ಸೂಚಿಸುತ್ತವೆ.

ಪೋಷಕರು ಸಣ್ಣ ಮಕ್ಕಳಿಗೆ ಮಿತವಾಗಿ ಮೊಬೈಲ್ ಬಳಕೆ ಮಾಡುವಂತೆ ಎಚ್ಚರಿಕೆ ವಹಿಸಬೇಕು ಮತ್ತು ಯುವಜನಾಂಗ ಸ್ವಯಂಪ್ರೇರಿತರಾಗಿ ಹಿತ ಮಿತವಾಗಿ ಮೊಬೈಲ್ ಬಳಕೆಯನ್ನು ನಿಯಂತ್ರಿಸುವ ಮೂಲಕ ಮೊಬೈಲ್ ಅನ್ನು ವ್ಯಕ್ತಿತ್ವ ವಿಕಸನಕ್ಕೆ ಮತ್ತು ಜೀವನದಲ್ಲಿ ಸಾಧನೆಗಾಗಿ ಬಳಸುವಂತಾಗಲಿ ಎಂದು ಆಶಿಸೋಣ.

–ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

ಮೈಸೂರಿಗೆ ಮತ್ತೊಂದು ಹಿರಿಮೆ!!

ಮಾನ್ಯರೆ,




ಮೈಸೂರು ಎಂದಾಗ ತಟ್ಟನೆ ನೆನಪಾಗುವುದು ಅರಮನೆ, ವಿಶ್ವ ವಿಖ್ಯಾತ ಮೈಸೂರು ದಸರಾ ವೈಭವ ಸೇರಿದಂತೆ ಮೈಸೂರು ಪಾಕ್, ಮೈಸೂರು ಮಲ್ಲಿಗೆ, ಮೈಸೂರ್ ಸ್ಯಾಂಡಲ್, ಯೋಗ ನಗರಿ, ಮೈಸೂರು ವೀಳ್ಯದೆಲೆ, ಸಾಂಸ್ಕೃತಿಕ ನಗರಿ ಹೀಗೆ ಇನ್ನೂ ಹತ್ತು ಹಲವು ಹಿರಿಮೆಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡು ಮೈಸೂರು ಜನಜನಿತವಾಗಿದೆ. ಈಗ ಮತ್ತೊಂದು ಹಿರಿಮೆ ಸೇರ್ಪಡೆಯಾಗಿ ಹೊಸ ಇತಿಹಾಸವನ್ನು ಸೃಷ್ಟಿಸಿದೆ. ಬಾಲರಾಮ ಮೂರ್ತಿಯನ್ನು ಕೆತ್ತಲು ಮೂವರು ಶಿಲ್ಪಿಗಳಿಗೆ ನೀಡಲಾಗಿತ್ತು. (ರಾಜಸ್ಥಾನ ಜೈಪುರದ ಸತ್ಯನಾರಾಯಣ ಪಾಂಡೆ ಶಿಲ್ಪಿ, ಕರ್ನಾಟಕದ ಮೈಸೂರಿನ ಅರುಣ್ ಯೋಗಿರಾಜ್ ಮತ್ತು ಮತ್ತೊಬ್ಬ ಶಿಲ್ಪಿ ಕರ್ನಾಟಕದವರೇ ಆದ ಹೊನ್ನಾವರದ ಇಡಗುಂಜಿಯ ಗಣೇಶ ಭಟ್ಟ) ಈ ಮೂರರಲ್ಲಿ ಮೈಸೂರಿನ ಅರುಣ್ ಯೋಗಿರಾಜ್ (41 ವರ್ಷ) ಅವರ ಶಿಲ್ಪವು ಅಯೋಧ್ಯೆಯ ಭವ್ಯ ರಾಮಮಂದಿರದ ಗರ್ಭಗುಡಿಗೆ ಆಯ್ಕೆ ಆಗಿರುವುದು ಮೈಸೂರಿನ ಜನರಲ್ಲಿ ಸಂತೋಷವು ಇಮ್ಮಡಿಯಾಗಿದೆ. ಇವರ ಕೈ ಚಳಕದಿಂದ ಕೆತ್ತಿರುವ ಬಾಲರಾಮನ ವಿಗ್ರಹವು ಪ್ರಾಣಪ್ರತಿಷ್ಠೆಗೆ ಆಯ್ಕೆಯಾಗಿರುವುದು ಮೈಸೂರು ಅಷ್ಟೇ ಅಲ್ಲದೆ ಇಡೀ ಕರ್ನಾಟಕವೇ ಸಂಭ್ರಮಿಸುತ್ತಿದೆ. 'ನಾನು ಕೆತ್ತಿದ ಮೂರ್ತಿಯೇ ಆಯ್ಕೆ ಆಗಿರುವುದು ಪೂರ್ವಜನ್ಮದ ಪುಣ್ಯದ ಫಲ' ಎಂದು ತಮ್ಮ ಮನದಾಳದ ಅನುಭವದ ಮಾತುಗಳನ್ನು ಭಾವಪೂರ್ಣವಾಗಿ ಹಂಚಿಕೊಂಡಿದ್ದಾರೆ. ಬಿಲ್ಲು ಮತ್ತು ಬಾಣವನ್ನು ಹಿಡಿದಿರುವ ಬಾಲರಾಮ ಮೂರ್ತಿ ಕೆತ್ತನೆಯಿಂದ ವಿಶ್ವದ ಗಮನವನ್ನು ಸೆಳೆದಿದ್ದಾರೆ. ಇದು ಅಷ್ಟು ಸುಲಭದ ಕೆಲಸವಲ್ಲ. ತಮ್ಮ ಏಕಾಗ್ರತೆ ಮತ್ತು ಬದ್ಧತೆಯಿಂದ ಮೂಡಿ ಬಂದಿರುವ ಅನರ್ಘ್ಯ ರತ್ನವಾಗಿದೆ. ಇವರ ಕುಟುಂಬದಲ್ಲಂತೂ ಹಬ್ಬದ ವಾತಾವರಣ ಸೃಷ್ಟಿಯಾಗಿ ಸಂಭ್ರಮವು ಮೇಳೈಸಿದೆ.

ರಾಮನ ಬಂಟ ಹನುಮಂತನ ಜನ್ಮಸ್ಥಳ ಕರ್ನಾಟಕದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಹೆಸರಾಂತ ಆನೆಗೊಂದಿಯ ಆಂಜನಾದ್ರಿ ಬೆಟ್ಟವಾಗಿದೆ. ರಾಮನ ಭಂಟ ಹನುಮಂತನು ಹುಟ್ಟಿರುವ ನಮ್ಮ ಕನ್ನಡನಾಡಿನಲ್ಲಿ, ಶ್ರೀರಾಮನಿಗೂ ಕರ್ನಾಟಕಕ್ಕೂ ಅವಿನಾಭಾವ ಸಂಬಂಧವಿದೆ.


"ಶ್ರೀರಾಮ-ಹನುಮನ ಬಾಂಧವ್ಯಕ್ಕೆ ಕರುನಾಡು ಸಾಕ್ಷಿಯಾಗಿದ್ದು, ಈಗ ಅಯೋಧ್ಯೆಯವರೆಗೂ ಕರ್ನಾಟಕ, ಮೈಸೂರಿನ ನಂಟು ವಿಸ್ತರಿಸಿ ವಿಶ್ವ ವಿಖ್ಯಾತಿಯನ್ನು ಪಡೆದಿದೆ, ಅದೇ ರೀತಿ ಶ್ರೀರಾಮನ ವಿಗ್ರಹವೂ ಕರ್ನಾಟಕದ ಶಿಲ್ಪಿಯಿಂದಲೇ, ಕೆತ್ತನೆಯಾಗಿರುವುದು ಭಾವನಾತ್ಮಕ ಭಕ್ತಿಯನ್ನು ಇದೀಗ ರಾಮನೂರಿನ ಗುಡಿಯನ್ನು ಮೈಸೂರಿನ ಬಾಲರಾಮನು ಅಯೋಧ್ಯೆಯಲ್ಲಿ ಬೆಳಗುವನು".

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ರಾಮಚಂದ್ರ ಪ್ರಭುಗಳ ಪುಣ್ಯ ಪರಂಪರೆ...

ಶ್ರೀರಾಮಚಂದ್ರರ ಜನ್ಮಸ್ಥಳ ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಸಂದರ್ಭ ವಿಶೇಷ ಲೇಖನ




ನಂ.ಶ್ರೀಕಂಠ ಕುಮಾರ್
ಮೈಸೂರು
ಮೊ.9481067333

ಮೋಕ್ಷನಗರ ಅಯೋಧ್ಯಾ

ಸನಾತನಿಗಳಿಗೆ ಮೋಕ್ಷದಾಯಕವಾದ ಸಪ್ತ ಕ್ಷೇತ್ರಗಳೆಂದರೆ ಅಯೋಧ್ಯಾ, ಮಥುರಾ, ಮಾಯಾ, ಕಾಶಿ, ಕಾಂಚಿ, ಆವಂತಿಪುರಿ ಮತ್ತು ದ್ವಾರಕಾಪುರಿ. ಇವುಗಳಲ್ಲಿ ಅಯೋಧ್ಯೆಯು ಪ್ರಥಮ ಪುಣ್ಯಕ್ಷೇತ್ರವಾಗಿದೆ. ಸರಯೂ ನದಿ ತೀರದಲ್ಲಿ ಧನ-ಧಾನ್ಯಗಳಿಂದ ಸಮೃದ್ಧವಾದ ಕೋಸಲವೆಂಬ ವಿಶಾಲವಾದ ರಾಜ್ಯದಲ್ಲಿನ ಪ್ರಜೆಗಳು ಉತ್ತರೋತ್ತರ ಅಭಿವೃದ್ಧಿಯನ್ನು ಪಡೆಯುತ್ತಾ ಆನಂದದಿಂದ ವಾಸವಾಗಿದ್ದರು. ಅಯೋಧ್ಯೆಯೆಂಬ ಲೋಕಪ್ರಸಿದ್ಧವಾದ ನಗರವು ಅದರ ರಾಜಧಾನಿಯಾಗಿತ್ತು. ಮನು ಚಕ್ರವರ್ತಿಯು ಅಯೋಧ್ಯಾನಗರವನ್ನು ನಿರ್ಮಿಸಿದ್ದನು ಎಂಬುದು ಪ್ರತೀತಿ.

ಆ ಮಹಾನಗರವು ಹನ್ನೆರಡು ಯೋಜನ ಉದ್ದವಾಗಿಯೂ ಮೂರು ಯೋಜನ ಅಗಲವಾಗಿಯೂ ಇತ್ತು ಎನ್ನಲಾಗಿದೆ. ವಿಶಾಲ ರಸ್ತೆಗಳು ನಗರದಲ್ಲಿದ್ದವು. ಅಚ್ಚುಕಟ್ಟಾದ ರಾಜಬೀದಿಗಳನ್ನು ನಿತ್ಯವೂ ಸ್ವಚ್ಛಗೊಳಿಸಿ ನೀರನ್ನು ಚುಮುಕಿಸಿ ಹೂಗಳನ್ನು ಹರಡುತ್ತಿದ್ದರು. ದೇವೇಂದ್ರನ ಸ್ವರ್ಗದಂತೆಯೇ ಅಯೋಧ್ಯಾನಗರವು ಕಂಗೊಳಿಸುತ್ತಿತ್ತು. ಅಯೋಧ್ಯಾ ನಗರವು ಪ್ರಶಸ್ತವಾದ ದಿಡ್ಡಿಯ ಬಾಗಿಲುಗಳಿಂದಲೂ, ತೋರಣಗಳಿಂದಲೂ ನಿತ್ಯವೂ ಕಂಗೊಳಿಸುತ್ತಿತ್ತು. ನಗರದೊಳಗೆ ಅಂಗಡಿ ಮುಂಗಟ್ಟುಗಳು ಕ್ರಮಬದ್ಧವಾಗಿದ್ದವು. ನಾನಾ ಕುಶಲ ಕಲೆಗಳಲ್ಲಿ ನಿಪುಣರಾದ ಶಿಲ್ಪಿಗಳು ವಾಸವಾಗಿದ್ದರು. ಯುದ್ಧೋಪಯುಕ್ತವಾದ ಅನೇಕ ಬಗೆಯ ಯಂತ್ರಗಳೂ, ಆಯುಧಗಳೂ ತುಂಬಿದ್ದವು. ಆನೆ, ಕುದುರೆ, ಹಸು, ಎತ್ತು, ಒಂಟೆ ಮುಂತಾದ ಪ್ರಾಣಿಗಳನ್ನು ವಿಶೇಷವಾಗಿ ಸಾಕಲಾಗುತ್ತಿತ್ತು. ಸಾಮಂತ ರಾಜರುಗಳು ಅಯೋಧ್ಯೆ ಮಹಾರಾಜನಿಗೆ ಒಪ್ಪಿಸುವುದಕ್ಕಾಗಿ ಕಪ್ಪ ಕಾಣಿಕೆಗಳನ್ನು ತಂದು ಕಾದಿರುತ್ತಿದ್ದರು.

ನಾನಾ ದೇಶಗಳಿಂದ ವಣಿಜರು ಬಂದು ವ್ಯಾಪಾರ ನಡೆಸುತ್ತಿದ್ದರು. ವಿಸ್ಮಯವಾದ ಅಯೋಧ್ಯೆ ನಗರವನ್ನು ಪಗಡೆ ಮಣೆಯ ಆಕಾರದಲ್ಲಿ ರೂಪಿಸಲಾಗಿತ್ತು. ಏಳು ಅಂತಸ್ತುಗಳಿರುವ ವಿಮಾನವೆಂಬ ಗೃಹಪಂಕ್ತಿಗಳಿಂದ ಕೂಡಿದ ಸಿದ್ಧಪುರುಷರು, ಸಜ್ಜನರು ವಾಸ ಮಾಡುತ್ತಿದ್ದು, ಅಯೋಧ್ಯೆಯು ಮನೋಹರವಾಗಿತ್ತು. ಶುಭ್ರವಾದ ಬಿಳಿಯ ಅಕ್ಕಿಯು ಸಮೃದ್ಧವಾಗಿ ದೊರೆಯುತಿತ್ತಂತೆ. ಅಲ್ಲದೇ ನಗರದಲ್ಲಿ ಕಬ್ಬಿನ ಹಾಲಿನಂತೆ ಸಿಹಿಯಾದ ನೀರು ಯಥೇಚ್ಛವಾಗಿ ದೊರಕುತ್ತಿತ್ತು ಎನ್ನಲಾಗಿದೆ. ಯಾವಾಗಲೂ ಮೃದಂಗ, ವೀಣೆ, ಮದ್ದಲೆ ಮುಂತಾದ ವಾದ್ಯಗಳ ಮಧುರ ಧ್ವನಿಯಿಂದ ತುಂಬಿ ಅಯೋಧ್ಯಾಪುರಿಯು ಪೃಥ್ವಿಯಲ್ಲಿಯೇ ಅತ್ಯುತ್ತಮ ನಗರವೆನಿಸಿತ್ತು. ಅಯೋಧ್ಯೆಯು ಶಸ್ತ್ರಾಸ್ತ್ರ ವಿಶಾರದರೂ, ಮಹಾರಥರೂ ಆದ ವೀರಯೋಧರಿಂದ ರಕ್ಷಣೆಗೊಂಡಿತ್ತು. ಅಂತೆಯೇ ಅಹಿತಾಗ್ನಿಗಳೂ, ಶಮದಮಾದಿ ಗುಣಶಾಲಿಗಳೂ, ವೇದ ವೇದಾಂಗಗಳಲ್ಲಿ ಪಾರಂಗತರೂ, ದಾನಶೀಲರೂ, ಸತ್ಯ-ಸಂಧರೂ, ಚತುರ್ವರ್ಣದವರೂ, ಋಷಿಗಳೂ, ಮಹರ್ಷಿಗಳೂ ವಾಸವಾಗಿದ್ದರು. ಅವರು ತಮ್ಮ ತಮ್ಮ ಧನದಿಂದ ತೃಪ್ತರಾಗಿದ್ದರೇ ಹೊರತು ಇನ್ನೊಬ್ಬರ ಧನಕ್ಕೆ ಆಸೆಪಟ್ಟವರಾಗಿರಲಿಲ್ಲ.

ಅಯೋಧ್ಯೆಯಲ್ಲಿ ಕಾಮುಕನಾಗಲೀ, ಕ್ರೂರಿಯಾಗಲೀ, ವಿದ್ಯಾಹೀನರಾಗಲೀ ಅಥವಾ ನಾಸ್ತಿಕನಾಗಲೀ ಇರಲಿಲ್ಲವೆಂಬುದು ಗಮನಾರ್ಹ. ಅಯೋಧ್ಯೆಯನ್ನು ಸತ್ಯನಗರಿ ಎಂದೂ ಕರೆಯಲಾಗುತ್ತಿತ್ತು. ಎಲ್ಲಾ ಸ್ತ್ರೀ-ಪುರುಷರು ಧರ್ಮಶೀಲರೂ, ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡವರೂ, ಸೌಜನ್ಯ ಸದಾಚಾರಿಗಳಾಗಿ ಸಂತೋಷಪಡತಕ್ಕವರೂ, ಪರಿಶುದ್ಧ ಹೃದಯಿಗಳೂ ಆಗಿದ್ದರು. ಪ್ರತಿಯೊಬ್ಬರೂ ಕಿವಿಯಲ್ಲಿ ಕುಂಡಲಗಳನ್ನು ಧರಿಸುತ್ತಿದ್ದರು ಎಂಬುದು ವಿಶೇಷವಾಗಿತ್ತು. ಪ್ರಜೆಗಳೆಲ್ಲರೂ ರಾಜಭಕ್ತಿಯನ್ನು ಹೊಂದಿದವರಾಗಿದ್ದರು. ಕೋಶಲ ಪ್ರದೇಶದಲ್ಲಿ ಜನಸಾಮಾನ್ಯರು ಅವಧಿ ಭಾಷೆಯಲ್ಲಿ ಮಾತನಾಡುತ್ತಿದ್ದರು ಎನ್ನಲಾಗಿದೆ.

ವಂಶಾವಳಿ ದರ್ಶನ

ಅಗೋಚರವಾದ ಬ್ರಹ್ಮವಸ್ತುವಿನಿಂದ ಅನಾದಿಯೂ, ನಾಶರಹಿತನೂ, ಪರಿಣಾಮರಹಿತನೂ ಆದ ಶ್ರೀ ಬ್ರಹ್ಮನು ಅವಿರ್ಭವಿಸಿದನು ಎನ್ನಲಾಗಿದೆ. ಶ್ರೀ ಬ್ರಹ್ಮದೇವರ ವಂಶಸ್ಥರಾಗಿದ್ದರೂ ಶ್ರೀ ಸೂರ್ಯ ನಾರಾಯಣದೇವರ ಆರಾಧಕರೂ ಆಗಿದ್ದ ಮರೀಚಿಯ ವಂಶಜರಲ್ಲಿ ಮೂವತ್ತೊಂಬತ್ತು ಮಹಾಪುರುಷರು, ಮಹಾರಾಜರು, ಚಕ್ರವರ್ತಿಗಳೂ ಅಯೋಧ್ಯೆಯನ್ನು ರಾಜಧಾನಿಯಾಗಿಸಿ ಕೋಸಲ ಪ್ರದೇಶವನ್ನು ಆಳಿದರು ಎನ್ನಲಾಗಿದೆ. ಪ್ರಥಮವಾಗಿ ಶ್ರೀಬ್ರಹ್ಮದೇವರ ಶ್ರೇಷ್ಠ ಪುತ್ರರಾದ ಮಹರ್ಷಿ ಮರೀಚಿ ಅವರ ಪುತ್ರರಾದ ಕಶ್ಯಪ, ನಂತರ ವಂಶದಲ್ಲಿ ವಿವಸ್ವಂತ, ಮನು, ಇಕ್ಷ್ವಾಕು ಮಹಾರಾಜ, ಕುಕ್ಷಿ, ವಿಕುಕ್ಷಿ, ಬಾಣ, ಅನರಣ್ಯ, ಪೃಥು, ತ್ರಿಶಂಕು ಮಹಾರಾಜ, ಧುಂದುಮಾರ, ಯುವನಾಶ್ವ, ಮಾಂಧಾತೃ ಚಕ್ರವರ್ತಿ, ಸುಸಂಧಿ, ಧ್ರುವಸಂಧಿ, ಭರತ ಚಕ್ರವರ್ತಿ, ಅಸೀತ, ಸಗರ ಮಹಾರಾಜ, ಅಸಮಂಜ, ಅಂಶುಮಂತ, ದಿಲೀಪ ಚಕ್ರವರ್ತಿ, ಭಗೀರಥ ಮಹರ್ಷಿ, ಕುಕುತ್ಸ್ಥ, ರಘು ಚಕ್ರವರ್ತಿ, ಪ್ರವೃದ್ಧ, ಶಂಖಣ, ಸುದರ್ಶನ, ಅಗ್ನಿವರ್ಣ, ಶ್ರೀವ್ರಗ, ಮರು, ಪ್ರಶಶ್ರುಕ, ಅಂಬರೀಷ ಮಹಾರಾಜ, ನಹುಷ ಚಕ್ರವರ್ತಿ, ಯಯಾತಿ, ನಾಭಾಗ, ಅಜಮಹಾರಾಜ, ದಶರಥ ಚಕ್ರವರ್ತಿ, ಪ್ರಭು ಶ್ರೀ ರಾಮಚಂದ್ರ ಮಹಾರಾಜ ಹಾಗೂ ಅವರ ಮಕ್ಕಳುಗಳಾದ ಕುಶ-ಲವರು ಅಯೋಧ್ಯೆಯನ್ನು ಆಳಿದರು ಎಂಬುದು ಸರ್ವವೇದ್ಯವಾಗಿದೆ. ಇವರುಗಳಲ್ಲಿ ಋಷಿ ಶ್ರೇಷ್ಠ ಕಶ್ಯಪರು, ತ್ರಿಶಂಕು ಮಹಾರಾಜ, ಮನು ಚಕ್ರವರ್ತಿ, ಸಗರ ಚಕ್ರವರ್ತಿ, ದಿಲೀಪ ಚಕ್ರವರ್ತಿ, ಮಹರ್ಷಿ ಭಗೀರಥರು, ರಘು ಚಕ್ರವರ್ತಿ, ಅಂಬರೀಷ ಮಹಾರಾಜ, ದಶರಥ ಮಹಾರಾಜ, ಶ್ರೀ ರಾಮಚಂದ್ರ ಪ್ರಭು ಪ್ರಮುಖರಾದವರು ಎನ್ನಬಹುದಾಗಿದೆ.

ಮಹಾತೇಜಸ್ವಿಯಾದ ಮನು ಚಕ್ರವರ್ತಿಯು ಧರ್ಮವನ್ನು ಪಾಲಿಸುತ್ತಾ ಪ್ರಜೆಗಳನ್ನು ರಕ್ಷಿಸುತ್ತಿದ್ದನು. ಅವನ ಸೈನಿಕರು ಅಗ್ನಿಯಂತೆ ತೇಜಸ್ವಿಗಳಾಗಿದ್ದರು. ಅಲ್ಲದೇ ಪ್ರಜೆಗಳೊಂದಿಗೆ ಸೌಜನ್ಯದಿಂದ ವರ್ತಿಸತಕ್ಕವರಾಗಿದ್ದರು. ಯುದ್ಧ ತಂತ್ರದಲ್ಲಿ ಪರಿಣಿತರೂ ಆಗಿದ್ದರು ಎನ್ನಲಾಗಿದೆ. ನಂತರ ಮನುವಿನ ಮಗನಾದ ಐದನೇ ಮಹಾರಾಜ ಇಕ್ಷ್ವಾಕು ಬಹಳ ಧರ್ಮನಿಷ್ಠ, ಉದಾರಶೀಲನಾದ ಇವರಿಂದಲೇ ಇಕ್ಷ್ವಾಕು ವಂಶವು ಪ್ರಾರಂಭವಾಗಿರುವುದು ತಿಳಿದುಬರುತ್ತದೆ. ನಂತರ ಹನ್ನೊಂದನೇ ಮಹಾರಾಜ ತ್ರಿಶಂಕುವು ಸತ್ಯವಾದಿಯಾಗಿ ಪ್ರಖ್ಯಾತನಾಗಿದ್ದನು. ಇವರಿಗೆ ಒಮ್ಮೆ ಸಶರೀರವಾಗಿ ಸ್ವರ್ಗಕ್ಕೆ ಹೋಗಬೇಕೆಂಬ ಅಪೇಕ್ಷೆ ಉಂಟಾಯಿತು. ವಂಶದ ಗುರುಗಳಾದ ಮಹರ್ಷಿ ವಸಿಷ್ಠರಲ್ಲಿ ತನ್ನ ಅಭಿಲಾಷೆಯನ್ನು ತಿಳಿಸಿದನು. ವಸಿಷ್ಠರು ತಮ್ಮಿಂದ ಇದು ಅಸಾಧ್ಯ ಎಂದು ತಿರಸ್ಕರಿಸಿದರು. ಅನಂತರ ವಸಿಷ್ಠರ ಪುತ್ರರಲ್ಲಿ ತ್ರಿಶಂಕುವು ವಿನಂತಿಸಿದಾಗ ಭಗವಾನ್ ವಸಿಷ್ಠರು ಸಾಧ್ಯವಿಲ್ಲವೆಂದಾಗ ಅವರ ಮಾತನ್ನು ಮೀರಿ ತಮ್ಮಲ್ಲಿ ಬಂದ ಕಾರಣಕ್ಕೆ ಕೋಪಗೊಂಡು ನೀನು ಚಾಂಡಾಲನಾಗು ಎಂದು ಶಪಿಸಿದರು. ಚಾಂಡಾಲ ರೂಪಿಯಾದ ತ್ರಿಶಂಕುವನ್ನು ಕಂಡ ಪರಮ ಧಾರ್ಮಿಕರಾದ ಮಹರ್ಷಿ ವಿಶ್ವಾಮಿತ್ರ ಮುನಿಗಳು ಆತನಿಗೆ ಆಶ್ರಯ ಕೊಟ್ಟು ಯಾಗಕ್ಕೆ ಸಿದ್ಧಪಡಿಸಿದರು. ಯಾಗದಲ್ಲಿ ಹವಿರ್ಭಾಗವನ್ನು ಸ್ವೀಕರಿಸಲು ಸಮಸ್ತ ದೇವತೆಗಳನ್ನೂ ಆಹ್ವಾನಿಸಿದರೂ ಯಾವ ದೇವತೆಗಳೂ ಯಾಗಕ್ಕೆ ಬರಲಿಲ್ಲ. ಕೋಪಗೊಂಡ ವಿಶ್ವಾಮಿತ್ರರು ತ್ರಿಶಂಕು ಮಹಾರಾಜನನ್ನು ತಮ್ಮ ತಪೋಬಲದಿಂದ ನೀನು ಸಶರೀರನಾಗಿ ಸ್ವರ್ಗಕ್ಕೆ ಹೋಗು ಎನ್ನಲು ತ್ರಿಶಂಕುವು ಸಶರೀರವಾಗಿ ಸ್ವರ್ಗಕ್ಕೆ ಹೊರಟನು.

ತ್ರಿಶಂಕುವು ದೇವಲೋಕಕ್ಕೆ ಬರಲು ಆತಂಕಗೊಂಡ ದೇವೇಂದ್ರನು ಇತರ ದೇವತೆಗಳೊಡನೆ ಬಂದು ಅಡ್ಡ ನಿಂತು ತ್ರಿಶಂಕುವನ್ನು ಕುರಿತು ನೀನು ಬಂದ ದಾರಿ ಹಿಡಿದು ತಲೆಕೆಳಗಾಗಿ ಬೀಳು ಎಂದು ಹೇಳಿದನು. ಕೂಡಲೇ ತ್ರಿಶಂಕು ಮಹಾರಾಜನು ಕೆಳಕ್ಕೆ ಬೀಳುತ್ತಾ ವಿಶ್ವಾಮಿತ್ರ ಮುನಿಗಳಲ್ಲಿ ತ್ರಾಹಿ, ತ್ರಾಹಿ ಎಂದು ಅರುಚಿಕೊಂಡನು. ವಿಶ್ವಾಮಿತ್ರರು ಸಿಟ್ಟಿನಿಂದ ಅಲ್ಲಿಯೇ ನಿಲ್ಲು, ನಿಲ್ಲು ಎಂದು ತ್ರಿಶಂಕುವನ್ನು ಆಕಾಶದಲ್ಲಿ ನಿಲ್ಲಿಸಿದರು. ಅಲ್ಲದೇ ಸಪ್ತರ್ಷಿ ಮಂಡಲವನ್ನು ಸೃಷ್ಟಿಸಿ ಅದಕ್ಕನುಗುಣವಾಗಿ ನಕ್ಷತ್ರ ಪಂಕ್ತಿಯೊಂದನ್ನು ನಿರ್ಮಿಸಿದರು. ಆಗ ಋಷಿಗಳು, ದೇವಾಸುರರೂ ಭೀತರಾಗಿ ವಿಶ್ವಾಮಿತ್ರರಲ್ಲಿ ಭಿನ್ನವಿಸಲಾಗಿ ವಿಶ್ವಾಮಿತ್ರರು ತಾವು ನಿರ್ಮಿಸಿರುವ ನಕ್ಷತ್ರಗಳೆಲ್ಲವೂ, ಅವುಗಳ ಮಧ್ಯದಲ್ಲಿ ತ್ರಿಶಂಕುವೂ ತಲೆಕೆಳಗಾಗಿ ಪ್ರಕಾಶಿಸಿ ಜಗತ್ತಿರುವವರೆಗೂ ಸ್ಥಿರವಾಗಿರಬೇಕು ಎಂದು ಸಮ್ಮತಿಸುವಂತೆ ತಿಳಿಸಿದರು. ಆಗ ದೇವತೆಗಳು ಒಳ್ಳೆಯದು, ಹಾಗೆಯೇ ಆಗಲಿ ಎಂದು ಒಪ್ಪಿದರು.

ಮುಂದೆ ಕೋಸಲ ಪ್ರದೇಶವನ್ನು ಹತ್ತೊಂಬತ್ತನೇ ಮಹಾರಾಜ ಸಗರನೆಂಬ ಧರ್ಮಾತ್ಮನು ಅಧಿಪತಿಯಾಗಿ ಅಯೋಧ್ಯೆಯಲ್ಲಿ ರಾಜ್ಯಭಾರ ಮಾಡಿದನು. ಸಗರ ಚಕ್ರವರ್ತಿಯು ಸಮುದ್ರವನ್ನು ಅಗೆಯಿಸಿ ಅದಕ್ಕೆ ಸಾಗರ ಎಂದು ಹೆಸರು ಬರಲು ಕಾರಣನಾದನು. ಅವನಿಗೆ ವಿದರ್ಭರಾಜನ ಮಗಳಾದ ಕೇಶನಿ ಎಂಬುವಳು ಹಿರಿಯ ಹೆಂಡತಿಯಾಗಿ, ಕಶ್ಯಪ ಋಷಿಯ ಮಗಳು ಸುಮತಿಯು ಎರಡನೇ ಹೆಂಡತಿಯಾಗಿದ್ದು ಕೇಶನಿಯು ಒಬ್ಬ ಮಗನನ್ನು ಪಡೆದಳು. ಆ ಪುತ್ರನಿಗೆ ಅಸಮಂಜ ಎಂದು ಹೆಸರಿಸಲಾಯಿತು. ಅಸಮಂಜನು ಅಯೋಧ್ಯೆಯಲ್ಲಿ ಬಹಳ ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಕಾಲಾನಂತರ ಅಸಮಂಜನಿಗೆ ಅಂಶುಮಂತನೆಂಬ ಮಗನು ಜನಿಸಿ ಮಹಾರಥನಾಗಿ, ವೀರನೂ, ಪ್ರಿಯಂವದನೂ ಆಗಿ ಸಕಲರಿಗೆ ಪ್ರೀತಿಪಾತ್ರನಾಗಿದ್ದನು. ಅಂಶುಮಂತನಿಗೆ ದಿಲೀಪನೆಂಬ ಪುತ್ರನು ಜನಿಸಿದನು. ಅಂಶುಮಂತನು ಹಲವಾರು ವರ್ಷಗಳು ರಾಜ್ಯಭಾರ ಮಾಡಿ ತನ್ನ ಮಗನಾದ ದಿಲೀಪನಿಗೆ ರಾಜ್ಯವನ್ನು ವಹಿಸಿಕೊಟ್ಟು ಹಿಮಾಲಯ ಶಿಖರದಲ್ಲಿ ತಪಸ್ಸನ್ನಾಚರಿಸಿ ಸ್ವರ್ಗಸ್ಥನಾದನು. ಉತ್ತಮ ರಾಜ್ಯಭಾರ ನಡೆಸಿದ ದಿಲೀಪನು ಪಿತಾಮಹರಿಗೆ ತರ್ಪಣವನ್ನು ಅರ್ಪಿಸಲು ಸಾಧ್ಯವಾಗದೇ ಇದ್ದುದಕ್ಕೆ ಚಿಂತಿಸುತ್ತಲೇ ಇದ್ದನು. ಧರ್ಮಮಾರ್ಗದಲ್ಲಿ ನಡೆಯುತ್ತಿದ್ದ ದಿಲೀಪನಿಗೆ ಭಗೀರಥನೆಂಬ ಪುತ್ರನು ಜನಿಸಿದನು. ದಿಲೀಪನು ಕಡೆಗಾಲದಲ್ಲಿ ಭಗೀರಥನಿಗೆ ರಾಜ್ಯಾಭಿಷೇಕ ಮಾಡಿ ಸ್ವರ್ಗಸ್ಥನಾದನು.

ಭಗೀರಥರು ಮಹರ್ಷಿಯಾಗಿ ಕೆಲವು ಕಾಲ ರಾಜ್ಯಭಾರ ಮಾಡಿ ನಂತರ ರಾಜ್ಯವನ್ನು ಮಂತ್ರಿಗಳಿಗೊಪ್ಪಿಸಿ ಗಂಗೆಯನ್ನು ಧರೆಗೆ ಇಳಿಸಬೇಕೆಂಬ ನಿಶ್ಚಯದಿಂದ ದೀರ್ಘವಾದ ತಪಸ್ಸನ್ನು ಆರಂಭಿಸಿದರು. ಸುಪ್ರೀತನಾದ ಭಗವಾನ್ ಬ್ರಹ್ಮದೇವರು ದೇವತೆಗಳೊಡನೆ ಪ್ರತ್ಯಕ್ಷರಾಗಿ ವರವನ್ನು ಕೇಳಿಕೊಳ್ಳಲು ತಿಳಿಸಿದರು. ಆಗ ಭಗೀರಥನು ನನ್ನ ತಪ್ಪಸ್ಸಿಗೆ ಫಲವಿರುವುದಾದರೆ ಪೂರ್ವಜರಾದ ಸಗರ ಪುತ್ರರೆಲ್ಲರೂ ನನ್ನಿಂದ ತರ್ಪಣವನ್ನು ಪಡೆಯುವಂತಾಗಲಿ. ಆ ಮಹಾತ್ಮರ ಭಸ್ಮದ ಮೇಲೆ ಗಂಗಾ ಪ್ರವಾಹವು ಹರಿದು ನನ್ನ ಮುತ್ತಾತಂದಿರೆಲ್ಲರಿಗೂ ಸ್ವರ್ಗ ಪ್ರಾಪ್ತಿಯಾಗಲಿ ಎಂದು ಕೋರಿದನು. ಅಲ್ಲದೇ ತನಗೆ ಮತ್ತೊಂದು ವರವನ್ನು ಕರುಣಿಸಿ ಪುತ್ರ ಸಂತಾನವನ್ನು ನೀಡಬೇಕೆಂದು ಪ್ರಾರ್ಥಿಸಿದನು. ಅನಂತರ ಅಯೋಧ್ಯೆಗೆ ಹಿಂತಿರುಗಿದನು.

ಮುಂದೆ ಮೂವತ್ತೇಳನೇ ಇಕ್ಷ್ವಾಕು ವಂಶದವನಾದ ಅಜಮಹಾರಾಜನ ಮಗನಾದ ದಶರಥನು ಚಕ್ರವರ್ತಿಯಾಗಿ ಅಯೋಧ್ಯೆಯನ್ನು ಆಳಿದನು. ವೇದವೇದಾರ್ಥಗಳನ್ನು ಬಲ್ಲವನೂ ವಿದ್ವಾಂಸರನ್ನು, ಶೂರರನ್ನೂ ಪ್ರೋತ್ಸಾಹಿಸಿ ದೀರ್ಘದರ್ಶಿಯಾಗಿಯೂ, ತೇಜಸ್ವಿಯೂ ಆಗಿ ಸಕಲ ಪ್ರಜೆಗಳಿಗೆ ಪ್ರೀತಿಪಾತ್ರನೂ ಆಗಿದ್ದನು. ಹತ್ತು ಸಾವಿರ ಮಹಾರಥರೊಡನೆ ಏಕಾಂಗಿಯಾಗಿ ಯುದ್ಧ ಮಾಡಬಲ್ಲ ಅತಿರಥನೂ ಆಗಿದ್ದನು. ದಶರಥನ ಬಳಿ ಚತುರಂಗ ಸೇನೆಯಿತ್ತು ಎನ್ನಲಾಗಿದೆ. ದೇವೇಂದ್ರನಂತೆ, ಕುಬೇರನಂತೆಯೂ, ಧನ-ಕನಕ ಸಮೃದ್ಧಿಯುಳ್ಳವನಾಗಿದ್ದರೂ ಜಿತೇಂದ್ರಿಯನಾಗಿದ್ದನು. ದಶರಥನ ವಶದಲ್ಲಿ ಕಾಂಬೋಜ, ಬಾಹ್ಲೀಕ, ವನಾಯು ಮತ್ತು ಸಿಂಧು ದೇಶಗಳಲ್ಲಿ ಜನಿಸಿದ ಶ್ರೇಷ್ಠವಾದ ಅಶ್ವಗಳನ್ನು ಹೊಂದಲಾಗಿತ್ತು. ಅವನ ಬಳಿ ಮಹಾ ಬಲಶಾಲಿಗಳಾದ ಪರ್ವತಾಕಾರದ ಮದ್ದಾನೆಗಳು ಹೇರಳವಾಗಿದ್ದವು. ಅವುಗಳಲ್ಲಿ ಕೆಲವು ವಿಂಧ್ಯ ಪರ್ವತದಲ್ಲಿ, ಹಿಮವತ್ ಪರ್ವತದಲ್ಲಿ ಹುಟ್ಟಿದವಾಗಿತ್ತು. ದಶರಥನಿಗೆ ಗುಣಶಾಲಿಗಳೂ, ರಾಜಕಾರ್ಯಾಧ್ಯಕ್ಷರೂ ಆದ ದೃಷ್ಟಿ, ಜಯಂತ, ವಿಜಯ, ಸಿದ್ಧಾರ್ಥ, ಅರ್ಥಸಾಧಕ, ಅಶೋಕ, ಮಂತ್ರಪಾಲ ಮತ್ತು ಸುಮಂತ ಎಂಬ ಎಂಟು ಮಂದಿ ಅಮಾತ್ಯರಿದ್ದರು. ಅವರು ಪರರ ಇಂಗಿತವನ್ನು ಅರಿಯುವುದರಲ್ಲಿ ನಿಪುಣರೂ, ರಾಜನಿಗೆ ಪ್ರಿಯವೂ, ಹಿತಕರವೂ ಆದ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಅವರೆಲ್ಲರೂ ಮಹಾರಾಜರಲ್ಲಿ ಕಪಟವಿಲ್ಲದೆ ಅನುರಕ್ತರಾಗಿ ರಾಜಾಜ್ಞೆಯನ್ನು ಕ್ರಮವರಿತು ಪಾಲಿಸುತ್ತಿದ್ದರು. ದಶರಥ ಚಕ್ರವರ್ತಿಗೆ ವಸಿಷ್ಠ, ವಾಮದೇವ ಎಂಬಿಬ್ಬರು ಮುಖ್ಯ ಪುರೋಹಿತರಿದ್ದರು. ಪ್ರಭಾವಶಾಲಿಯಾಗಿದ್ದ ದಶರಥ ಚಕ್ರವರ್ತಿಗೆ ವಂಶವನ್ನು ಉದ್ಧರಿಸುವ ಪುತ್ರ ಸಂತಾನವಾಗಲಿಲ್ಲವೆಂಬ ಚಿಂತೆಯೂ ಇತ್ತು. ವಸಿಷ್ಠ ಮಹರ್ಷಿಗಳ ಸಲಹೆಯ ಮೇರೆಗೆ ಪುತ್ರಕಾಮೇಷ್ಟಿಯಾಗವನ್ನು ಸರಯೂ ನದಿಯ ತೀರದಲ್ಲಿ ವೇದಪಾರಂಗತರಾದ ಮಹರ್ಷಿ ಋಷ್ಯಶೃಂಗರನ್ನು ಆಹ್ವಾನಿಸಿ ಋತ್ವಿಜರಾಗುವಂತೆ ವಿನಂತಿಸಿ ಅವರಿಂದ ಅಥರ್ವ ವೇದದಲ್ಲಿ ಪ್ರೋಕ್ತವಾದ ಮಂತ್ರಗಳಿಂದ ವಿಧಿಪೂರ್ವಕವಾಗಿ ಯಾಗವನ್ನು ಮಾಡಿಸಿದನು. ಮಹರ್ಷಿ ಋಷ್ಯಶೃಂಗರು ಪುತ್ರಕಾಮೇಷ್ಟಿಯಾಗಕ್ಕೆ ದೇವಾದಿದೇವತೆಗಳನ್ನು ಆಹ್ವಾನಿಸಿ ಸ್ತುತಿಸುತ್ತಾಹೇ, ಮಹಾವಿಷ್ಣುವೆ ಲೋಕಹಿತಕ್ಕಾಗಿ ದಶರಥ ಮಹಾರಾಜನಿಗೆ ನೀನು ಪುತ್ರನಾಗಿ ಅವತರಿಸು ಎಂದು ಪ್ರಾರ್ಥಿಸಿದರು. ಯಜ್ಞಕುಂಡದಿಂದ ಪ್ರಜಾಪತ್ಯ ಪುರುಷನು ಅವಿರ್ಭವಿಸಿ ದಶರಥನಿಗೆ ಪಾಯಸವನ್ನು ಅರ್ಪಿಸಿ ತನ್ನ ಪತ್ನಿಯರಿಗೆ ವಿಭಾಗಿಸಿ ಕೊಡುವಂತೆ ಸೂಚಿಸಿ ಯಜ್ಞದ ಫಲವಾಗಿ ನೀನು ಪುತ್ರರನ್ನು ಪಡೆಯುತ್ತೀಯೆ ಎಂದು ಸೂಚಿಸಿದನು. ಹೀಗೆ ದಶರಥನ ಮನೋರಥವು ಪೂರೈಸಿದ ಹನ್ನೆರಡನೇ ತಿಂಗಳು ಚೈತ್ರಮಾಸ, ಶುಕ್ಲ ಪಕ್ಷದ ನವಮೀ ತಿಥಿಯಂದು ಪುನರ್ವಸು ನಕ್ಷತ್ರದಲ್ಲಿ ರವಿ, ಕುಜ, ಶನಿ, ಗುರು, ಶುಕ್ರ ಐದೂ ಗ್ರಹಗಳು ಉಚ್ಛರಾಶಿಯಲ್ಲಿದ್ದ ಈ ಸುಮುಹೂರ್ತದಲ್ಲಿ ಮಹಾರಾಣಿ ಕೌಸಲ್ಯಾ ದೇವಿಯ ಗರ್ಭದಿಂದ ಸರ್ವಲೋಕ ಪೂಜಿತನೂ, ದಿವ್ಯ ಲಕ್ಷಣ ಸಂಯುತನೂ ಆದ ಶ್ರೀ ರಾಮಚಂದ್ರನು ಪುತ್ರನಾಗಿ ಧರೆಯಲ್ಲಿ ಅವತರಿಸಿದನು. ಅನಂತರ ಸಾಕ್ಷಾತ್ ಮಹಾವಿಷ್ಣುವಿನ ಒಂದು ಅಂಶವೂ ಆದ ಭರತನು ಪುಷ್ಯ ನಕ್ಷತ್ರದ ದಶಮಿ ತಿಥಿಯಲ್ಲಿ ಕೈಕೇಯ ಗರ್ಭದಲ್ಲೂ, ಲಕ್ಷ್ಮಣ-ಶತ್ರುಘ್ನರು ಸುಮಿತ್ರೆಯ ಪುತ್ರರಾಗಿ ಆಶ್ಲೇಷ ನಕ್ಷತ್ರ ಕರ್ಕಾಟಕ ಲಗ್ನದಲ್ಲಿ ಜನಿಸಿದರು.

ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀ ರಾಮಚಂದ್ರನು ರಾಷ್ಟ್ರದ ಆತ್ಮವಾಗಿ, ರಾಷ್ಟ್ರ ಧರ್ಮ ನಿರೂಪಕನಾಗಿ ಕೋಸಲ ಪ್ರದೇಶವನ್ನು ರಾಜಧಾನಿ ಅಯೋಧ್ಯೆಯಿಂದ ರಾಜ್ಯಭಾರ ಮಾಡಿದನು. ಇಂದಿಗೂ ಹದಿನಾರು ಕಲ್ಯಾಣ ಗುಣವಂತನಾದ ಶ್ರೀ ರಾಮಚಂದ್ರ ಪ್ರಭುವಿನ ರಾಜ್ಯಭಾರವನ್ನು ರಾಮರಾಜ್ಯವನ್ನಾಗಿ ಲೋಕವೇ ಸ್ಮರಿಸುತ್ತಿರುವುದು ಮಹಾಪ್ರಭುವಿನ ಆಡಳಿತ ವೈಖರಿಯಾಗಿದೆ. ನಂತರ ಶ್ರೀ ರಾಮಚಂದ್ರ ಪ್ರಭುವಿನ ಮಕ್ಕಳಾದ ಕುಶ-ಲವರು ವಂಶವನ್ನು ಮುಂದುವರೆಸಿ ಶ್ರೀರಾಮನ ಜನ್ಮಸ್ಥಾನವಾದ ಅಯೋಧ್ಯೆಯಲ್ಲಿ ಶ್ರೀ ರಾಮಚಂದ್ರ ಪ್ರಭುವಿನ ಜೇಷ್ಠ ಪುತ್ರ ಕುಶನು ಪ್ರಥಮವಾಗಿ ಭವ್ಯ, ದಿವ್ಯ ಮಂದಿರವನ್ನು ನಿರ್ಮಿಸಿದನು ಎನ್ನಲಾಗಿದೆ. ಹೀಗೆ ತ್ರೇತಾಯುಗದಲ್ಲಿ ಇಕ್ಷ್ವಾಕು ವಂಶಸ್ಥರು ಸುಭಿಕ್ಷವಾಗಿ ರಾಜ್ಯಭಾರವನ್ನು ಮಾಡಿದರು. ಎಲ್ಲಾ ಕಾಲಕ್ಕೂ ಆಡಳಿತದ ಶ್ರೇಷ್ಠತೆಗೆ ಸಾಕಾರವಾಗಿಸಿದ್ ದಾರೆ. ಮೊಟ್ಟಮೊದಲಿಗೆ ಸಂಸ್ಕೃತ ಭಾಷೆಯಲ್ಲಿ ಇವೆಲ್ಲವನ್ನೂ ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಿ ಆದಿ ಕವಿ ಪೂಜ್ಯ ವಾಲ್ಮೀಕಿ ಮಹರ್ಷಿರವರು ವಿಸ್ತಾರ ಪಡಿಸಿದ್ದಾರೆ. ಅದರ ಕನ್ನಡಾನುವಾದವನ್ನು ವಿದ್ವಾನ್ ಎನ್.ರಂಗನಾಥಶರ್ಮರವರು ಅತ್ಯುತ್ತಮ ವಾಗಿ ಆಸ್ತಿಕರಿಗೆ ತಿಳಿಸಿರುವುದು ಸ್ತುತ್ಯರ್ಹ ಕಾರ್ಯವಾಗಿದೆ.

> "ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀ ರಾಮಚಂದ್ರನು ರಾಷ್ಟ್ರದ ಆತ್ಮವಾಗಿ, ರಾಷ್ಟ್ರ ಧರ್ಮ ನಿರೂಪಕನಾಗಿ ಕೋಸಲ ಪ್ರದೇಶವನ್ನು ರಾಜಧಾನಿ ಅಯೋಧ್ಯೆಯಿಂದ ರಾಜ್ಯಭಾರ ಮಾಡಿದನು. ಇಂದಿಗೂ ಹದಿನಾರು ಕಲ್ಯಾಣ ಗುಣವಂತನಾದ ಶ್ರೀ ರಾಮಚಂದ್ರ ಪ್ರಭುವಿನ ರಾಜ್ಯಭಾರವನ್ನು ರಾಮರಾಜ್ಯವನ್ನಾಗಿ ಲೋಕವೇ ಸ್ಮರಿಸುತ್ತಿರುವುದು ಮಹಾಪ್ರಭುವಿನ ಆಡಳಿತ ವೈಖರಿಯಾಗಿದೆ. ನಂತರ ಶ್ರೀ ರಾಮಚಂದ್ರ ಪ್ರಭುವಿನ ಮಕ್ಕಳಾದ ಕುಶ-ಲವರು ವಂಶವನ್ನು ಮುಂದುವರೆಸಿ ಶ್ರೀರಾಮನ ಜನ್ಮಸ್ಥಾನವಾದ ಅಯೋಧ್ಯೆಯಲ್ಲಿ ಶ್ರೀ ರಾಮಚಂದ್ರ ಪ್ರಭುವಿನ ಜೇಷ್ಠ ಪುತ್ರ ಕುಶನು ಪ್ರಥಮವಾಗಿ ಭವ್ಯ, ದಿವ್ಯ ಮಂದಿರವನ್ನು ನಿರ್ಮಿಸಿದನು ಎನ್ನಲಾಗಿದೆ.

ರಾಜ್ಯದಲ್ಲಿ ಗೋಧ್ರಾ ರೀತಿ ಘಟನೆ ಹೇಳಿಕೆ ಹಿನ್ನೆಲೆ

ಸಿಸಿಬಿ ಪೊಲೀಸರಿಂದ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ವಿಚಾರಣೆ



ಬೆಂಗಳೂರು, ಜ.19– ರಾಜ್ಯದಲ್ಲಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವೇ ಅಥವಾ ಆರ್‌ಎಸ್‌ಎಸ್ ಸರ್ಕಾರವೇ ಎಂದು ಆಡಳಿತ ಪಕ್ಷದ ಹಿರಿಯ ನಾಯಕ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ರಾಜ್ಯದಲ್ಲಿ ಗೋಧ್ರಾ ರೀತಿ ಘಟನೆ ನಡೆಸಲು ಸಂಚು ರೂಪಿಸಲಾಗುತ್ತಿದೆ ಎಂದು ಹರಿಪ್ರಸಾದ್ ನೀಡಿದ ಹೇಳಿಕೆ ಸಂಬಂಧ ಮಾಹಿತಿ ಪಡೆಯಲು ಸಿಸಿಬಿ ಪೊಲೀಸರು ಕುಮಾರ ಕೃಪಾ ಅತಿಥಿ ಗೃಹದಲ್ಲಿ ಅವರ ವಿಚಾರಣೆ ನಡೆಸಿದರು. ವಿಚಾರಣೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಹರಿಪ್ರಸಾದ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಆ ಪಕ್ಷದ ಸಂಸದ ಅನಂತ ಕುಮಾರ್ ಹೆಗಡೆ ಅವರನ್ನು ಪ್ರಶ್ನಿಸದ ಈ ಸರ್ಕಾರ ನನ್ನನ್ನು ಪ್ರಶ್ನೆ ಮಾಡಲು ಪೊಲೀಸ್ ಕಳುಹಿಸಿದೆ ಎಂದು ಕಿಡಿಕಾರಿದರು.

ನನಗೇನು ವಿಐಪಿ ಟ್ರೀಟ್‌ಮೆಂಟ್ ಬೇಡ, ಬಂಧಿಸಿ ಕರೆದುಕೊಂಡು ಹೋಗಿ, ಮಂಪರು ಪರೀಕ್ಷೆ ಮಾಡಿಸಿ ಎಂದು ಹೇಳಿದ್ದೇನೆ.


ಬಿಜೆಪಿ ನಾಯಕರು ಮನಬಂದಂತೆ ಹೇಳಿಕೆ ನೀಡುತ್ತಿದ್ದರೂ ಈ ಸರ್ಕಾರ ಅವರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಆದರೆ ನಮ್ಮದೇ ಸರ್ಕಾರ ನನ್ನ ಮೇಲೆ ತನಿಖೆ ನಡೆಸುತ್ತಿದೆ. ಇದೇನು ಆರ್‌ಎಸ್‌ಎಸ್ ಸರ್ಕಾರವೇ? ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಿ ಜೊತೆಗೆ ವಿಜಯೇಂದ್ರ ಅವರನ್ನೂ ಕರೆಸಿ ಮಂಪರು ಪರೀಕ್ಷೆ ಮಾಡಿಸಲಿ ಎಂದು ಕಿಡಿಕಾರಿದ ಹರಿಪ್ರಸಾದ್, ನನ್ನ ಸ್ಥಿತಿಯೇ ಹೀಗಾದರೆ, ಕಾಂಗ್ರೆಸ್ ಕಾರ್ಯಕರ್ತರ ಸ್ಥಿತಿ ಹೇಗಿರಬೇಕು ಎಂದಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶನಿವಾರ 20 ಜನವರಿ 2024

ಪ್ರಧಾನಿ ಮೋದಿ ಬೆಂಗಳೂರಲ್ಲಿ ಬೋಯಿಂಗ್ ಕ್ಯಾಂಪಸ್ ಉದ್ಘಾಟನೆ



ಬೆಂಗಳೂರು, ಜ.19– ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಾಣವಾಗಿರುವ ನೂತನ ಬೋಯಿಂಗ್ ವಿಮಾನ ತಯಾರಿಕಾ ಸಂಸ್ಥೆಯ ಕ್ಯಾಂಪಸ್‌ಗೆ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ.

ಶುಕ್ರವಾರ ಬೆಂಗಳೂರಿಗೆ ಆಗಮಿಸಿದ ಪ್ರಧಾನಿ ಮೋದಿ ಕೆಂಪೇಗೌಡ ಅಂತ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿಯ ದೇವನಹಳ್ಳಿಯಲ್ಲಿ ಬೋಯಿಂಗ್‌ನ ಅತ್ಯಾಧುನಿಕ ಜಾಗತಿಕ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಆವಿಷ್ಕಾರ ಕ್ಯಾಂಪಸ್ ಅನ್ನು ಉದ್ಘಾಟಿಸಿದರು. ಈ ನೂತನ ಬೋಯಿಂಗ್ ಕ್ಯಾಂಪಸ್ ಅನ್ನು 1,600 ಕೋಟಿ ರೂ.ಗಳ ಬಂಡವಾಳದಲ್ಲಿ ನಿರ್ಮಿಸಲಾಗಿದ್ದು, 43–ಎಕರೆ ಕ್ಯಾಂಪಸ್ ಅಮೆರಿಕದಿಂದ ಹೊರಗೆ ಇರುವ ಬೋಯಿಂಗ್‌ನ ಅತಿದೊಡ್ಡ ಹೂಡಿಕೆಯಾಗಿದೆ



ಅಧಿಕೃತ ಮೂಲಗಳ ಪ್ರಕಾರ ನಗರದ ಹೊರವಲಯದಲ್ಲಿರುವ ದೇವನಹಳ್ಳಿಯಲ್ಲಿರುವ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್‌ನಲ್ಲಿರುವ ಕ್ಯಾಂಪಸ್ ಭಾರತದಲ್ಲಿ ರೋಮಾಂಚಕ ಸ್ಟಾರ್ಟ್ ಅಪ್‌ಗಳು, ಖಾಸಗಿ ಮತ್ತು ಸರ್ಕಾರಿ ಪರಿಸರ ವ್ಯವಸ್ಥೆಯೊಂದಿಗೆ ಪಾಲುದಾರಿಕೆಗೆ ಮೂಲಾಧಾರವಾಗಲಿದೆ ಮತ್ತು ಜಾಗತಿಕ ಏರೋಸ್ಪೇಸ್ ಮತ್ತು ರಕ್ಷಣಾ ಉದ್ಯಮಕ್ಕೆ ಮುಂದಿನ ಪೀಳಿಗೆಯ ಉತ್ಪನ್ನಗಳು ಮತ್ತು ಸೇವೆಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ ಎಂದು ಹೇಳಲಾಗಿದೆ. ಇನ್ನು ಇಂದಿನ ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಸಿಎಂ ಸಿದ್ದರಾಮಯ್ಯ ಸೇರಿದಂತೆ ಹಲವು ಅಧಿಕಾರಿಗಳು ಪಾಲ್ಗೊಂಡಿದ್ದರು.

ಕೇಂದ್ರದಲ್ಲಿ ಏನಿದೆ: ಬೋಯಿಂಗ್ ಇಂಡಿಯಾ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಸೆಂಟರ್ (BIETC) ಕ್ಯಾಂಪಸ್ ಸುಮಾರು 1600 ಕೋಟಿ ರೂಪಾಯಿ ವೆಚ್ಚದಲ್ಲಿ 43 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿದೆ. ಅಮೆರಿಕವನ್ನು ಹೊರತುಪಡಿಸಿ ಬೇರೆ ದೇಶದಲ್ಲಿ ನಿರ್ಮಾಣವಾದ ಅತೀ ದೊಡ್ಡ ಕ್ಯಾಂಪಸ್ ಇದಾಗಿದೆ ಈ ಸಂಸ್ಥೆ ಭಾರತೀಯ ಪ್ರತಿಭೆಗಳನ್ನು ಸ್ವಾಗತಿಸಲಿದ್ದು, ಅದರಲ್ಲೂ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರಗಳ ಪ್ರತಿಭೆಗಳಿಗೆ ಅವಕಾಶಗಳನ್ನು ಒದಗಿಸಲಿದೆ ಬಿಐಇಟಿಸಿ ಭಾರತದಲ್ಲಿ ಬೋಯಿಂಗ್ ಸಂಸ್ಥೆಯ ಅತಿದೊಡ್ಡ ವಿಭಾಗವಾಗಿದೆ. ದೇಶದ ಸ್ಟಾರ್ಟಪ್‌ಗಳು, ಖಾಸಗಿ ವಲಯ ಮತ್ತು ಸರ್ಕಾರದೊಡನೆ ಈ ಬಿಐಇಟಿಸಿ ಕೇಂದ್ರ ಕಾರ್ಯಾಚರಿಸಲಿದೆ. ಜಾಗತಿಕ ಏರೋಸ್ಪೇಸ್ ಮತ್ತು ರಕ್ಷಣಾ ಉದ್ಯಮಕ್ಕೆ ನೂತನ ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಈ ಕೇಂದ್ರ ಗಮನ ಹರಿಸಲಿದೆ.

ಅಂತೆಯೇ ಬಿಐಇಟಿಸಿ ಕೇಂದ್ರದಿಂದ ಜಾಗತಿಕವಾಗಿ ಏರೋಸ್ಪೇಸ್ ಉದ್ಯಮದ ಪ್ರಗತಿಗಾಗಿ ಕಾರ್ಯಾಚರಿಸಲು ಇನ್ನಷ್ಟು ಸಹಕಾರಿ. 3,000ಕ್ಕೂ ಹೆಚ್ಚು ಇಂಜಿನಿಯರ್‌ಗಳನ್ನು ಹೊಂದುವ ಗುರಿ ಹಾಕಿಕೊಂಡಿದೆ ಬಿಐಇಟಿಸಿ. ಈ ಇಂಜಿನಿಯರ್‌ಗಳು ಸಂಶೋಧನೆ ಮತ್ತು ಅಭಿವೃದ್ಧಿ, ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾಗಿಯಾಗಿ, ಆಧುನಿಕ ತಂತ್ರಜ್ಞಾನಗಳಾದ ಕೃತಕ ಬುದ್ಧಿಮತ್ತೆ (ಎಐ), ಮೆಷಿನ್ ಲರ್ನಿಂಗ್, ಇಂಡಸ್ಟ್ರಿಯಲ್ ಇಂಟರ್ನೆಟ್ ಆಫ್ ಥಿಂಗ್ಸ್, ಕ್ಲೌಡ್ ಕಂಪ್ಯೂಟಿಂಗ್, ಮಾಡೆಲ್ ಆಧಾರಿತ ಇಂಜಿನಿಯರಿಂಗ್, ಮತ್ತು ಅಡ್ಟಿಟಿವ್ ಉತ್ಪಾದನೆಗಳನ್ನು ಬಳಸಿಕೊಳ್ಳಲಿದ್ದಾರೆ.

ಬೋಯಿಂಗ್ ಸುಕನ್ಯಾ ಯೋಜನೆ

ದೇಶಾದ್ಯಂತ ಹೆಚ್ಚು ಹೆಣ್ಣು ಮಕ್ಕಳು ವೈಮಾನಿಕ ವಲಯಕ್ಕೆ ಸೇರಲು ನೆರವಾಗುವ ಉದ್ದೇಶ ಹೊಂದಿರುವ ಯೋಜನೆ ಇದು. ಈ ಕಾರ್ಯಕ್ರಮ ಹೆಣ್ಣು ಮಕ್ಕಳಿಗೆ ಪ್ರಮುಖ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಕೌಶಲಗಳನ್ನು ರೂಢಿಸಿಕೊಳ್ಳಲು ಅವಕಾಶ ಕಲ್ಪಿಸಲಿದೆ. ಹೆಣ್ಣುಮಕ್ಕಳನ್ನು ವೈಮಾನಿಕ ಉದ್ಯೋಗಗಳಿಗೆ ಸಿದ್ಧಗೊಳಿಸಲಿದೆ. ಬಾಲಕಿಯರಿಗಾಗಿ ಬೋಯಿಂಗ್ ಸುಕನ್ಯಾ ಯೋಜನೆ 150 ಸ್ಥಳಗಳಲ್ಲಿ ಕೌಶಲ್ಯ ತರಬೇತಿ ಪ್ರಯೋಗಾಲಯಗಳನ್ನು ತೆರೆಯಲಿದೆ. ವೈಮಾನಿಕ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಪಡೆಯಲು ಉತ್ತೇಜನ ನೀಡಲಿರುವ ಯೋಜನೆ. ಈ ಯೋಜನೆಯಡಿ ಪೈಲಟ್ ಆಗಲು ತರಬೇತಿ ಪಡೆಯುತ್ತಿರುವ ಬಾಲಕಿಯರಿಗೂ ವಿದ್ಯಾರ್ಥಿ ವೇತನ ಸಿಗಲಿದೆ.

ರಾಮ ಮಂದಿರ ನಿರ್ಮಾಣ, ಶ್ರೀರಾಮನ ಮೂರ್ತಿ ಪ್ರತಿಷ್ಠಾಪನೆ; ಶಂಕರಾಚಾರ್ಯರ ಪೀಠದ ಶ್ರೀಗಳ ಮಾತಿಗೆ ಜನ ಮನ್ನಣೆ ನೀಡಿಲ್ಲ

● ಸಂಸದ ಪ್ರತಾಪ್ ಸಿಂಹ ಪ್ರತಿಕ್ರಿಯೆ ● ದೇವಸ್ಥಾನಗಳ ನಿರ್ಮಾಣ ನಿರ್ದಿಷ್ಟ ಕಾಲಮಾನವಿಲ್ಲ ● ಶಂಕರಾಚಾರ್ಯ ಮಠದ ಸ್ವಾಮೀಜಿಗಳದ್ದು ಬರೀ ವಿರೋಧಾಭಾಸ ● ರಾಜಣ್ಣ ಡಿಸಿಎಂ ಗಾದಿಗಾಗಿ ಸಿದ್ದರಾಮಯ್ಯ ಓಲೈಸಲು ಹೇಳಿಕೆ ನೀಡ್ತಿದ್ದಾರೆ

ಮೈಸೂರು, ಜ.19(ಎಸ್‌ಬಿಡಿ)– ಅಯೋಧ್ಯೆಯ ರಾಮಮಂದಿರ ಅಪೂರ್ಣ ಎನ್ನುವವರಿಗೆ ಪರಿಪೂರ್ಣ ಜ್ಞಾನವಿಲ್ಲ. ಬಾಲ ರಾಮನ ಮೂರ್ತಿ ಪ್ರತಿಷ್ಠಾಪನೆ ಬಗ್ಗೆ ಶಂಕರಾಚಾರ್ಯ ಪೀಠದ ಸ್ವಾಮೀಜಿಗಳ ಅಪದ್ಧದ ಮಾತುಗಳಿಗೆ ಜನ ಮಾನ್ಯತೆ ನೀಡಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ಕಿಡಿಕಾರಿದ್ದಾರೆ.

ಮೈಸೂರಿನ ಬಸವೇಶ್ವರ ವೃತ್ತದ ಬಳಿ ಇರುವ ಶಿಲ್ಪಿ ಅರುಣ್ ಯೋಗಿರಾಜ್ ನಿವಾಸದಲ್ಲಿ ಅವರ ಕುಟುಂಬಸ್ಥರನ್ನು ಸನ್ಮಾನಿಸಿದ ಸಂದರ್ಭದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಒಂದು ದೇವಾಲಯ ಕಟ್ಟಲು ಹತ್ತಾರು, ನೂರಾರು ವರ್ಷಗಳು ಬೇಕಾಗುತ್ತವೆ. ರಾಮಮಂದಿರವನ್ನು ಅಪೂರ್ಣ ಎಂದು ಹೇಳುವವರಿಗೆ ಪರಿಪೂರ್ಣವಾದ ಜ್ಞಾನ ಇಲ್ಲದಿರುವುದೇ ಸಮಸ್ಯೆ. ವಿವೇಚನೆ ಇಲ್ಲದೆ, ಸರಿಯಾಗಿ ಅರ್ಥ ಮಾಡಿಕೊಳ್ಳದೆ ಅಸಂಬದ್ಧವಾದ ಹೇಳಿಕೆ ನೀಡುವುದನ್ನು ಬಿಡಬೇಕು ಎಂದರು.

ದಕ್ಷಿಣ ಭಾರತದಲ್ಲೂ ಭವ್ಯವಾದ ದೇವಾಲಯಗಳು ಹೆಚ್ಚಿವೆ. ಯಾವುದೇ ಮಂದಿರವನ್ನು ಇಂತಹವರೇ ಕಟ್ಟಿಸಿದರು ಎನ್ನುವುದಕ್ಕಿಂದ ಚೋಳರ ಕಾಲ, ಹೊಯ್ಸಳರ ಕಾಲ, ಪಾಂಡ್ಯರು, ಚೇಳರು, ಕದಂಬರು, ವಿಜಯನಗರ ಸಾಮ್ರಾಜ್ಯದ ಕಾಲ, ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಲಾಯಿತು ಎಂದು ಆಯಾಯ ರಾಜಮನೆತನದ ಹೆಸರಿನಲ್ಲಿ ಗುರುತಿಸುತ್ತೇವೆ. ಏಕೆಂದರೆ ಒಂದು ದೇವಾಲಯವನ್ನು ಕಟ್ಟಲು ಹತ್ತಾರು, ನೂರಾರು ವರ್ಷಗಳು ಬೇಕಾಗುತ್ತವೆ ಎಂದು ಹೇಳಿದರು.

ಬೇಲೂರಿನ ಚೆನ್ನಕೇಶವ ಸ್ವಾಮಿ ದೇವಾಲಯ ಕಟ್ಟಲು 103 ವರ್ಷ ಬೇಕಾಯ್ತು. ಹೊಯ್ಸಳರ ಕಾಲದಲ್ಲಿ ಆರಂಭವಾದ ಚಾಮುಂಡಿಬೆಟ್ಟದ ದೇವಾಲಯ, ವಿಜಯನಗರ ಕಾಲದಲ್ಲಿ ಅಭಿವೃದ್ಧಿಯಾಗಿ, ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಗೋಪುರ ನಿರ್ಮಾಣವಾಯ್ತು ಅಂದರೆ ಹೊಯ್ಸಳರ ಕಾಲದಲ್ಲಿ ಶುರುವಾಗಿ ನಮ್ಮ ಯದುವಂಶದ ಆಡಳಿತಾವಧಿವರೆಗೂ ದೇವಸ್ಥಾನದ ಅಭಿವೃದ್ಧಿಯಾಗಿದೆ. ಹಾಗಾಗಿ ದೇವಸ್ಥಾನದ ನಿರ್ಮಾಣದ ಬಗ್ಗೆ ಅರಿವಿರಬೇಕಾಗುತ್ತದೆ. ದೇವಸ್ಥಾನವೆಂದರೆ ಬರೀ ಕಟ್ಟಡ ಕಟ್ಟುವುದಲ್ಲ. ವಿಗ್ರಹ ಪ್ರತಿಷ್ಠಾಪನೆ, ಪ್ರಾಣಪ್ರತಿಷ್ಠೆ, ವಾಸ್ತುಶಿಲ್ಪ ಎಲ್ಲದಕ್ಕೂ ಹತ್ತಾರು ವರ್ಷಗಳು ಬೇಕಾಗುತ್ತವೆ. ಗರ್ಭಗುಡಿ ದೇವಸ್ಥಾನದ ಆತ್ಮ. ಗರ್ಭಗುಡಿ ನಿರ್ಮಾಣ, ವಿಗ್ರಹ ಪ್ರತಿಷ್ಠಾಪನೆ ಹಾಗೂ ಪ್ರಾಣ ಪ್ರತಿಷ್ಠಾನ ಮುಖ್ಯವಾಗುತ್ತದೆ. ಅದನ್ನೇ ಮೋದಿ ಅವರು ಜ.22ರಂದು ನೆರವೇರಿಸುತ್ತಿದ್ದಾರೆ. ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.



ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆಯಾಗಿರುವ ಬಾಲರಾಮನ ವಿಗ್ರಹವನ್ನು ರೂಪಿಸಿದ ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಸರಸ್ವತಿ, ಪತ್ನಿ ವಿಜೇತ ಹಾಗೂ ಸೋದರ ಸೂರ್ಯಪ್ರಕಾಶ್ ಅವರನ್ನು ಸಂಸದ ಪ್ರತಾಪ್ ಅಭಿನಂದಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಸೇರಿದಂತೆ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಸಿಎಂ ಓಲೈಕೆಗಾಗಿ ಹೇಳಿಕೆ: ಅಯೋಧ್ಯೆ ಸಂಬಂಧ ಸಚಿವ ಕೆ.ಎನ್.ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರು ವಾಲ್ಮೀಕಿ ಸಮಾಜದವರು. ವಾಲ್ಮೀಕಿ ಏನನ್ನು ಬರೆದರು ಎಂಬುದು ಅವರಿಗೆ ಅರಿವಿರಬೇಕು. ಆ ಸಮುದಾಯದವರು ರಾಮನ ಬಗ್ಗೆ ಗೌರವ ಭಾವವನ್ನು ತಮ್ಮ ಎದೆಗೂಡಿನಲ್ಲಿ ಇಟ್ಟುಕೊಂಡಿರುತ್ತಾರೆ. ಆದರೆ ರಾಜಣ್ಣನವರು ಟಿಪ್ಪು ಜಯಂತಿ ಆಚರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಓಲೈಸಿ, ಉಪ ಮುಖ್ಯಮಂತ್ರಿ ಸ್ಥಾನವನ್ನು ಪಡೆಯಲು ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಜನರೇ ಉತ್ತರ ನೀಡುತ್ತಾರೆ ಎಂದು ಹೇಳಿದರು.

ಬಿಜೆಪಿಗರು ರಾಮ ಮಂದಿರ ಉದ್ಘಾಟನೆ ಕುರಿತು ತೋರುತ್ತಿರುವ ಆಸಕ್ತಿಯನ್ನು, ರಾಜ್ಯಕ್ಕೆ ಬರ ಪರಿಹಾರ ಕೊಡಿಸುವಲ್ಲಿ ತೋರುತ್ತಿಲ್ಲ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಜ.22ರಂದು ರಾಮ ಮಂದಿರ ಉದ್ಘಾಟನೆಯ ಅಂಗವಾಗಿ ಪ್ರತಿ ಊರಿನ ದೇವಸ್ಥಾನಗಳಲ್ಲಿ ಪೂಜೆ–ಪುನಸ್ಕಾರಗಳನ್ನು ಮಾಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಬಿಜೆಪಿ ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಡಾ.ಅನಿಲ್ ಥಾಮಸ್, ಕೇಬಲ್ ಮಹೇಶ್, ದಿನೇಶ್ ಗೌಡ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಅಪದ್ಧದ ಮಾತಿಗೆ ಮಾನ್ಯತೆ ಇಲ್ಲ

ಶಂಕರಾಚಾರ್ಯ ಪೀಠದ ಸ್ವಾಮೀಜಿ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಶಂಕರಚಾರ್ಯ ಮಠದ ಸ್ವಾಮಿಗಳ ಹಿನ್ನೆಲೆ, ರಾಜಕೀಯ ನಿಲುವು ಯಾವುದೆಂದು ಜನರಿಗೆ ಗೊತ್ತಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರನ್ನು ವಾರಣಾಸಿಯಲ್ಲಿ ಸೋಲಿಸಲು ಮುಂದಾಗಿದ್ದವರು ಮಠದಲ್ಲಿದ್ದಾರೆ. ಯುಪಿಎ ಸರ್ಕಾರ ಒತ್ತಡ ಹೇರಿ ಜಯೇಂದ್ರ ಸರಸ್ವತಿ ಸ್ವಾಮೀಜಿ ಅವರನ್ನು ಬಂಧಿಸಿ, ಪೊಲೀಸ್ ಠಾಣೆಯಲ್ಲಿ ಕೂರಿಸಿದಾಗ ಶಂಕರಚಾರ್ಯ ಮಠದ ಸ್ವಾಮೀಜಿಗಳು ಧ್ವನಿ ಇಲ್ಲದೇ ಸುಮ್ಮನೆ ಕುಳಿತಿದ್ದರು. ಇಂದು ಒಳ್ಳೆಯ ಕೆಲಸಕ್ಕೆ ಅಪಸ್ವರ ಎತ್ತುತ್ತಿದ್ದಾರೆ. ಇದಕ್ಕೆ ಬೆಲೆ ಕೊಡುವ ಅವಶ್ಯಕತೆ ಇಲ್ಲ. ಶಂಕರಚಾರ್ಯರು ಕೇರಳದ ಕಾಲಡಿಯಲಿ ಹುಟ್ಟಿ, ಬದರೀನಾಥ, ಕೇದರನಾಥ ಸೇರಿದಂತೆ ನಾಲ್ಕು ಧಾಮಗಳನ್ನು ಸ್ಥಾಪನೆ ಮಾಡಿದವರು. ಇಂತಹ ದೊಡ್ಡ ಪರಂಪರೆ ಹೊಂದಿರುವ ಮಠದ ಸ್ವಾಮೀಜಿಗಳಿಂದ ಈ ರೀತಿ ಅಪದ್ದದ ಮಾತುಗಳು ಬರುತ್ತವೆ ಎಂದು ನಾನೆಂದು ಭಾವಿಸಿರಲಿಲ್ಲ. ಜನರೂ ಅದಕ್ಕೆ ಹೆಚ್ಚು ಮಾನ್ಯತೆ ನೀಡುತ್ತಿಲ್ಲ. ಅವರ ರಾಜಕೀಯ ನಿಲುವುಗಳನ್ನು ಸಾಮಾಜಿಕ ಜಾಲತಾಣದಲ್ಲೇ ಬಯಲಾಗುತ್ತಿದೆ.

- ಪ್ರತಾಪ್ ಸಿಂಹ, ಸಂಸದ

ಜ.22ಕ್ಕೆ ಗುಜ್ಜೇಗೌಡನಪುರದಲ್ಲಿ ರಾಮಲಲ್ಲಾನ ಮೂರ್ತಿ ಶಿಲೆ ದೊರೆತ ಜಾಗದಲ್ಲಿ ಮಂದಿರಕ್ಕೆ ಭೂಮಿಪೂಜೆ

ಹಾರೋಹಳ್ಳಿ, ಗುಜ್ಜೇಗೌಡನಪುರ ಗ್ರಾಮಸ್ಥರೊಂದಿಗೆ ಜಿಟಿಡಿ ಪೂರ್ವಭಾವಿ ಸಭೆ



ಜಲದರ್ಶಿನಿ ಅತಿಥಿಗೃಹದಲ್ಲಿ ಹಾರೋಹಳ್ಳಿ, ಗುಜ್ಜೇಗೌಡನಪುರ ಗ್ರಾಮಸ್ಥರೊಂದಿಗೆ ಪೂಜಾ ಕಾರ್ಯಕ್ರಮಗಳ ಕುರಿತು ಪೂರ್ವಭಾವಿ ಸಭೆ ನಡೆಸುತ್ತಿರುವ ಶಾಸಕ ಜಿ.ಟಿ.ದೇವೇಗೌಡ

ಮೈಸೂರು, ಜ.19– ಉತ್ತರಪ್ರದೇಶದ ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಪ್ರತಿಷ್ಠಾಪನೆಯಾಗಲಿರುವ ರಾಮಲಲ್ಲಾನ ವಿಗ್ರಹ ಶಿಲೆಯನ್ನು ಕೆತ್ತನೆ ಮಾಡಿದ ಜಾಗ ಮತ್ತು ಶಿಲೆ ಸಿಕ್ಕಿರುವ ಗ್ರಾಮವಾದ ಗುಜ್ಜೇಗೌಡನಪುರದಲ್ಲಿ ಜ.22ರಂದು ಭೂಮಿ ಪೂಜೆ ನಡೆಯಲಿದ್ದು, ಮುಂದಿನ ದಿನಗಳಲ್ಲಿ ಪ್ರಾರ್ಥನಾ ಮಂದಿರ ನಿರ್ಮಾಣ ಮಾಡಲಾಗುವುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಹಾರೋಹಳ್ಳಿ, ಗುಜ್ಜೇಗೌಡನಪುರ ಗ್ರಾಮಸ್ಥರೊಂದಿಗೆ ಜ.22ರಂದು ನಡೆಯಲಿರುವ ಪೂಜಾ ಕಾರ್ಯಕ್ರಮಗಳ ಕುರಿತು ಪೂರ್ವಭಾವಿ ಸಭೆ ನಡೆಸಿದ ಬಳಿಕ ಮಾತನಾಡಿದರು. ಜ.22ರಂದು ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ರಾಮಲಲ್ಲಾನ ಪ್ರಾಣಪ್ರತಿಷ್ಠೆ ನಡೆಯಲಿದೆ.

ಈ ರಾಮಲಲ್ಲಾನ ವಿಗ್ರಹ ಕೆತ್ತನೆ ಮಾಡಲು ಸಿಕ್ಕಿರುವ ಶಿಲೆ ಮತ್ತು ಭೂಮಿಯು ಅತ್ಯಂತ ಮಹತ್ವದ್ದಾಗಿದೆ. ಗುಜ್ಜೇಗೌಡನಪುರ ಮತ್ತು ಹಾರೋಹಳ್ಳಿ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಗೆ ಸೇರುವ ಮೂಲಕ ಇಡೀ ವಿಶ್ವದ ಗಮನ ಸೆಳೆದಿದೆ. ಹೀಗಾಗಿ, 22ರಂದು ಬೆಳಿಗ್ಗೆ 6ರಿಂದ ಹಲವಾರು ಪೂಜಾ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರತಿಷ್ಠಾಪನಾ ಕಾರ್ಯಕ್ರಮ ನಡೆಯುವ ಸಮಯದಲ್ಲಿ ಶಿಲೆ ಸಿಕ್ಕಿದ ಭೂಮಿಯಲ್ಲಿ ಪೂಜೆ ನಡೆಸಬೇಕೆಂದು ಗ್ರಾಮಸ್ಥರ ಬೇಡಿಕೆಯಾಗಿದೆ. ಈ ಸ್ಥಳವೂ ಮುಂದೆ ಗಮನ ಸೆಳೆಯಲಿದೆ. ಭೂಮಿ ಪೂಜೆ ನೆರವೇರಿಸಿ ರಾಮದೇವರಿಗೆ ಪ್ರಾರ್ಥನೆ ಮಾಡಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಜಾಗದಲ್ಲಿ ಪ್ರಾರ್ಥನಾ ಮಂದಿರ ಮತ್ತು ರಾಮ ಮಂದಿರ ನಿರ್ಮಾಣ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಯಾಗಿರುವ ಮೂರ್ತಿಯ ಶಿಲೆಯು ಗುಜ್ಜೇಗೌಡನಪುರ ಗ್ರಾಮದ ನೆಲೆಯಾಗಿರುವುದು ದೊಡ್ಡ ಪುಣ್ಯವಾಗಿದೆ. ರಾಮಮಂದಿರದಲ್ಲಿ ಪ್ರತಿಷ್ಠಾಪನೆಯಾಗುತ್ತಿರುವ ಮೂರ್ತಿಯು ಇಡೀ ವಿಶ್ವದ ಗಮನ ಸೆಳೆದಂತೆ ಶಿಲೆ ಸಿಕ್ಕಿದ ಜಾಗವು ಅಷ್ಟೇ ಮಹತ್ವ ಪಡೆದುಕೊಂಡಿದೆ. ಹೀಗಾಗಿ, ಈ ಭೂಮಿಯನ್ನು ಒಂದು ಐತಿಹಾಸಿಕ ಸ್ಥಳವಾಗಿ ಮಾರ್ಪಡಿಸಬೇಕಾದರೆ ಮುಂದೆ ಪ್ರಾರ್ಥನಾ ಮಂದಿರ ಮಾಡುವುದಕ್ಕೆ ಬೇಕಾದ ಸಿದ್ಧತೆ ಆರಂಭಿಸಲಾಗುವುದು ಎಂದು ನುಡಿದರು.

ಜ.22ರಂದು ಜಯಪುರ, ಧನಗಳ್ಳಿ, ಹಾರೋಹಳ್ಳಿ ಗ್ರಾಪಂ ವ್ಯಾಪ್ತಿಯ ಹಳ್ಳಿಗಳು ಸೇರಿದಂತೆ ಅಕ್ಕಪಕ್ಕದ ಗ್ರಾಮಗಳ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೋರಿದರು. ಮುಖಂಡರಾದ ಶ್ರೀನಿವಾಸ್, ಜಯರಾಮ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ; ಸುತ್ತೂರು ಶ್ರೀಗಳ ಸ್ವಾಗತ

ಮೈಸೂರು, ಜ.19(ಎಸ್‌ಪಿಎನ್)– ರಾಜ್ಯ ಸರ್ಕಾರವು ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ'ರೆಂದು ತೀರ್ಮಾನಿಸಿರುವುದು ಜನತೆಯಲ್ಲಿ ಸಂತೋಷ ತಂದಿದೆ ಎಂದು ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸ್ವಾಗತಿಸಿದ್ದಾರೆ.



12ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಅಭೂತಪೂರ್ವ ಶರಣ ಚಳವಳಿಯ ಮುಂಚೂಣಿಯಲ್ಲಿ ನಿಂತು ಸರ್ವ ಸಮಾನತೆಯನ್ನು ತರಬಯಸಿದ ಬಸವಣ್ಣನವರು ಓರ್ವ ಸೀಮಾ ಪುರುಷರು. ಜಾತಿ ವ್ಯವಸ್ಥೆ, ಅದರ ಮೂಲಕ ಪ್ರಬಲವಾಗಿದ್ದ ಮೇಲು–ಕೀಳುಗಳ ಪರಿಗಣನೆಯನ್ನು ಸ್ಪಷ್ಟವಾಗಿ ನಿರಾಕರಿಸಿದರು. ಅದುವರೆಗೆ ಸಮಾಜದ ಅತ್ಯಂತ ಕೆಳಸ್ತರದಲ್ಲಿದ್ದ ಎಲ್ಲರನ್ನೂ ಅಣ್ಣ, ಅಪ್ಪ ಎಂದು ಕರೆದರು. ಹಾಗೆಯೇ ಲಿಂಗಸಮಾನತೆಯನ್ನು ಸಾರಿದರು ಎಂದು ಸ್ಮರಿಸಿದ್ದಾರೆ.

ಭಕ್ತಿ ಭಂಡಾರಿಗಳಾಗಿದ್ದ ಅವರು ಕಾಯಕ, ದಾಸೋಹಗಳ ಮೂಲಕ ಹೊಸ ಸಮಾಜವನ್ನು ನಿರ್ಮಿಸಿದರು. ಅಧ್ಯಾತ್ಮ ಜ್ಞಾನವನ್ನು ಮಾತೃಭಾಷೆ ಕನ್ನಡದಲ್ಲೂ ಹೇಳಬಹುದೆಂದು ತೋರಿಸಿಕೊಟ್ಟರು. ದೀನ ದಲಿತರು, ಮಹಿಳೆಯರು ತಮ್ಮ ಸಾಧನೆಗಳ ವಿಚಾರ ವಿನಿಮಯಕ್ಕೆ ಮಹಾಮನೆಯ ಆಶ್ರಯ ಪಡೆದಿತ್ತು. ಅಲ್ಲಿ ಹೊಟ್ಟೆಗೂ ಆಹಾರ, ಚಿಂತನೆಗೂ ಆಹಾರ! ಅವರು ಕಂಡರಿಸಿದ ಅನುಭವ ಮಂಟಪದ ಅಂಗಳದಲ್ಲಿ ಜಿಜ್ಞಾಸುಗಳ ಸಂವಾದ ನಡೆಯುತ್ತಿತ್ತು.

ಜನ ಕಲ್ಯಾಣವನ್ನು ಸಾಧಿಸಿದ ಕಲ್ಯಾಣದಲ್ಲಿ ಜನರು ಎಲ್ಲರನ್ನೂ 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎನ್ನತೊಡಗಿದರು. ಇಂಥ ಎಲ್ಲರ ಬಾಳಿನ ಬೆಳಕಾಗಿದ್ದ ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ'ನೆಂದು ಕರೆದು ಗೌರವಿಸಿರುವ ಕರ್ನಾಟಕ ಸರ್ಕಾರಕ್ಕೆ ಸಮಸ್ತ ಕನ್ನಡಿಗರ ಪರವಾಗಿ ಅಭಿನಂದನೆ. ಇದರೊಂದಿಗೆ ಸಮ ಸಮಾಜದ ಕನಸನ್ನು ನನಸು ಮಾಡಲು ಎಲ್ಲರೂ ತ್ರಿಕರಣಪೂರ್ವಕವಾಗಿ ಶ್ರಮಿಸುವುದು ಅಗತ್ಯ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಟೀಲುವಾದಕ ವಿಠಲ ರಾಮಮೂರ್ತಿಗಳಿಗೆ 'ಧನುರ್ ವೈಣಿಕ ಬ್ರಹ್ಮ' ಪ್ರಶಸ್ತಿ



ಹಿರಿಯ ಪಿಟೀಲು ವಾದಕ ವಿದ್ವಾನ್ ವಿಠಲ ರಾಮಮೂರ್ತಿ ಅವರಿಗೆ 'ಧನುರ್ ವೈಣಿಕ ಬ್ರಹ್ಮ' ಪ್ರಶಸ್ತಿಯನ್ನು ಶುಕ್ರವಾರ ಮೈಸೂರು ಅವಧೂತ ದತ್ತಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಪ್ರಧಾನ ಮಾಡಿದರು.

ಮೈಸೂರು, ಜ.19(ಎಸ್‌ಪಿಎನ್)– ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಶ್ರೀ ನಾದಬ್ರಹ್ಮ ಸಂಗೀತ ಸಭಾ, ಪಿಟೀಲು ಚೌಡಯ್ಯ ಸ್ಮರಣಾ ವೇದಿಕೆ ಸಹಯೋಗದೊಂದಿಗೆ ನಡೆದ ಸಮಾರಂಭದಲ್ಲಿ ಹಿರಿಯ ಪಿಟೀಲು ವಾದಕ ವಿದ್ವಾನ್ ವಿಠಲ ರಾಮಮೂರ್ತಿ ಅವರಿಗೆ 'ಧನುರ್ ವೈಣಿಕ ಬ್ರಹ್ಮ' ಪ್ರಶಸ್ತಿಯನ್ನು ಶುಕ್ರವಾರ ಮೈಸೂರು ಅವಧೂತ ದತ್ತಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಪ್ರಧಾನ ಮಾಡಿದರು.

ನಂತರ ಮಾತನಾಡಿದ ಅವರು, ಸಂಗೀತ, ನಾಟ್ಯ ಸೇರಿದಂತೆ ಇತರೆ ಕಲೆಗಳನ್ನು ಅವಧೂತ ದತ್ತಪೀಠದಲ್ಲಿ ಆಯೋಜಿಸಲಾಗುತ್ತಿದೆ. ಹಿರಿಯ ಶ್ರೀಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸಾಮೀಜಿ ಅವರು ಅನೇಕ ಗೀತೆಗಳ ರಚಿಸಿ, ವಿವಿಧ ರಾಗಗಳಲ್ಲಿ ಹಾಡಿದ್ದಾರೆ. ಪಿಟೀಲು ವಾದನದಲ್ಲಿ ಚೌಡಯ್ಯನವರ ಸಾಧನೆ ಇಂದಿಗೂ ಪ್ರಸ್ತುತ. ವೀಣಾ ವಾದನವನ್ನು ಮುಂದಿನ ಪೀಳಿಗೆಗೂ ಪರಿಚಯಿಸುವ ದೃಷ್ಟಿಯಿಂದ ಅನೇಕ ಶಿಷ್ಯವೃಂದವನ್ನು ಹೊಂದಿದ್ದರು ಎಂದು ತಿಳಿಸಿದರು.

ವಿದ್ವಾನ್ ವಿಠಲ ರಾಮಮೂರ್ತಿ ಅವರು, 25ಕ್ಕೂ ಹೆಚ್ಚು ದೇಶಗಳಲ್ಲಿ ವೀಣಾವಾದನ ಕಛೇರಿ ನಡೆಸಿಕೊಟ್ಟಿದ್ದಾರೆ. ಅಲ್ಲದೆ, ಅತೀ ಚಿಕ್ಕವಯಸ್ಸಿನಲ್ಲೇ ಪಿಟೀಲು ಕಲಿಕೆಗೆ ಹೆಚ್ಚಿನ ಆಸಕ್ತಿಯಿಂದ ಕಲಿತಿದ್ದಾರೆ. ಇಂತಹ ವಿದ್ವಾಂಸರನ್ನು ಪಿಟೀಲ್ ಚೌಡಯ್ಯ ಸ್ಮರಣಾರ್ಥ 'ಧನುರ್ ವೈಣಿಕ ಬ್ರಹ್ಮ' ಪ್ರಶಸ್ತಿ ನೀಡಿ, ಗೌರವಿಸುತ್ತಿರುವುದು ಸೂಕ್ತವಾಗಿದೆ ಎಂದರು.

ಸಂಗೀತಕ್ಕೆ ದೇವರನ್ನು ಒಲಿಸಿಕೊಳ್ಳಲು ಶಕ್ತಿಯಿದೆ. ಇದು ಆಧ್ಯಾತ್ಮದ ಮೂಲವೂ ಹೌದು. ನಮ್ಮ ಹಿರಿಯರು ಸಂಗೀತದಿಂದ ಮಳೆಯನ್ನು ತರಿಸಿದ ಉದಾಹರಣೆಗಳಿವೆ. ದೇವರನ್ನು ಒಲಿಸಿಕೊಂಡ ಉದಾಹರಣೆಗಳಿವೆ. ಹೀಗೆ ಆಧ್ಯಾತ್ಮದ ಸಾಧನೆಗಳನ್ನು ಹೇಳಲು ಅನೇಕ ಘಟನೆಗಳನ್ನು ಹೇಳಬಹುದು. ಹಾಗಾಗಿಯೇ ಮೈಸೂರಿಗೆ ಸಾಂಸ್ಕೃತಿಕ ನಗರಿ ಎಂಬ ಬಿರುದು ಬರಲು ಕಾರಣವಾಗಿದೆ ಎಂದರು.

ಪ್ರಶಸ್ತಿ ಸ್ವೀಕರಿಸಿ, ಮಾತನಾಡಿದ ವಿದ್ವಾನ್ ವಿಠಲ ರಾಮಮೂರ್ತಿ, ಪಿಟೀಲು ಚೌಡಯ್ಯ ಸ್ಮರಣಾರ್ಥ ಅವರ ಹೆಸರಿನಲ್ಲಿ 'ಧನುರ್ ವೈಣಿಕ ಬ್ರಹ್ಮ' ಪ್ರಶಸ್ತಿ ನೀಡಿರುವುದರಿಂದ ನನ್ನ ಮೇಲಿನ ಜವಾಬ್ದಾರಿ ಹೆಚ್ಚಿದೆ. ಅದರಲ್ಲೂ ಸಂಗೀತ, ನೃತ್ಯ ಕಲಾವಿದರಿಗೆ ಸದಾ ಪ್ರೋತ್ಸಾಹಿಸುತ್ತಿರುವ ಗಣಪತಿ ಸಚ್ಚಿದಾನಂದ ಆಶ್ರಮ ಕಲೆಗಳನ್ನು ಪೋಷಿಸುವ ತೊಟ್ಟಿಲು ಎಂದರೆ ತಪ್ಪಾಗಲಾರದು. ಈ ವೇದಿಕೆಯಲ್ಲಿ ಸಂಗೀತ ಕಲಾನಿಧಿ, ಸಂಗೀತ ರತ್ನ ಬಿರುದಾಂಕಿತ ಟಿ.ಚೌಡಯ್ಯ ಸ್ಮರಣಾರ್ಥ ನನಗೆ ನೀಡುತ್ತಿರುವ ಗೌರವ ದೊಡ್ಡದು ಎಂದು ಬಣ್ಣಿಸಿದರು.

ವೇದಿಕೆ ಕಾರ್ಯಕ್ರಮದ ನಂತರ ವಿದ್ವಾನ್ ವಿಠಲ ರಾಮಮೂರ್ತಿ ಮತ್ತು ವಿದುಷಿ ಪದ್ಮಶಂಕರ್ ಅವರಿಂದ ವೀಣಾವಾದನ ನಡೆಸಿಕೊಟ್ಟು, ಸಭಿಕರ ಮನಸೂರೆಗೊಂಡರು. ಇವರಿಗೆ ವಿದ್ವಾನ್ ವಿ.ವಿ. ರಮಣಮೂರ್ತಿ ಮೃದಂಗ, ವಿದ್ವಾನ್ ತ್ರಿಪುಣಿತರ ರಾಧಕೃಷ್ಣನ್ ಘಟಂ ನುಡಿಸಿ ಸಾಥ್ ನೀಡಿದರು. ವೇದಿಕೆಯಲ್ಲಿ ಸಂಗೀತ ರತ್ನ ಮೈಸೂರು ಟಿ.ಚೌಡಯ್ಯ ವೇದಿಕೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಬಿಜೆಪಿ ಮೈಸೂರು(ಜಿಲ್ಲಾ) ನಗರಾಧ್ಯಕ್ಷರಾಗಿ ನೇಮಕಗೊಂಡಿರುವ ಎಲ್. ನಾಗೇಂದ್ರ ಅವರನ್ನು ಚಾಮುಂಡೇಶ್ವರಿ ಮಂಡಲದ ಉಪಾಧ್ಯಕ್ಷರಾದ ಹಿನಕಲ್ ಗಣೇಶ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಫಲಾನುಭವಿಗಳ ಪ್ರಕೋಷ್ಠ ಸಂಚಾಲಕರಾದ ಗೋಪಾಲಗೌಡ, ಯುವ ಮೋರ್ಚಾ ಮಾಜಿ ಜಿಲ್ಲಾಧ್ಯಕ್ಷ ವಿಜಯ್, ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯದರ್ಶಿ ದಾರಿಪುರ ಸುನಿಲ್ ಉಪಸ್ಥಿತರಿದ್ದರು.



ಮೈಸೂರು ಪುರಭವನದಲ್ಲಿ ನಾಗಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಲಿ ಅವರಿಂದ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಪೌರಾಣಿಕ ನಾಟಕ ಏರ್ಪಡಿಸಲಾಗಿತ್ತು. ಇದರ ಉದ್ಘಾಟನೆಯನ್ನು ಶ್ರೀ ಮನೆಮುಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹಾಗೂ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ನೆರವೇರಿಸಿದರು. ಈ ವೇಳೆ ಕೂರ್ಗಳ್ಳಿ ಬೋರೇಗೌಡ, ವಿದ್ಯುತ್ ಗುತ್ತಿಗೆದಾರ ಶಿವಕುಮಾರ್ ಮುರುಡಗಳ್ಳಿ, ಶಿವಣ್ಣ, ಬೀರಿಹುಂಡಿ ಶಿವಸ್ವಾಮಿ, ಶೆಟ್ಟನಾಯಕನಹಳ್ಳಿ ಸಿದ್ಧಾರ್ಥ್, ಗೋಕುಲಂ ಲೋಕೇಶ್, ಹೆಚ್.ಬಿ. ಸಂಪತ್‌ಕುಮಾರ್, ಕೆ.ಎಸ್.ಆರ್.ಟಿ.ಸಿ ಕೃಷ್ಣಮೂರ್ತಿ, ಜಟ್ಟಿಹುಂಡಿ ರಾಚಪ್ಪ ಇತರರು ಉಪಸ್ಥಿತರಿದ್ದರು.

ದೇವರಾಜ ಮಾರುಕಟ್ಟೆ ರಾತ್ರಿ ವೇಳೆ ಬಿಡಾಡಿ ದನಗಳ ಕೊಟ್ಟಿಗೆ!

● ಹಣ್ಣು–ತರಕಾರಿ ವ್ಯಾಪಾರಸ್ಥರ ನೆಮ್ಮದಿ ಹಾಳು ● ಮೈಸೂರು ಪಾಲಿಕೆ ಇದಾವುದಕ್ಕೂ ತಲೆಕೆಡಿಸಿಕೊಳ್ಳುತ್ತಿಲ್ಲ!

ಮೈಸೂರು, ಜ.19(ಎಂಕೆ)– ಮೈಸೂರಿನ ಪಾರಂಪರಿಕ ದೇವರಾಜ ಮಾರುಕಟ್ಟೆಯಲ್ಲಿ ರಾತ್ರಿ ವೇಳೆ ಬಿಡಾಡಿ ದನ–ಕರುಗಳ ಕಾಟಕ್ಕೆ ಹಣ್ಣು–ತರಕಾರಿ ವ್ಯಾಪಾರಸ್ಥರು ಹೈರಾಣಾಗಿದ್ದಾರೆ...!

ವಿಶಾಲ ದೇವರಾಜ ಮಾರುಕಟ್ಟೆ ರಾತ್ರಿ ವೇಳೆ ಕೊಟ್ಟಿಗೆಯಾಗಿ ಪರಿವರ್ತನೆಯಾಗಲಿದೆ. ಬಂಡವಾಳ ಹೂಡಿ ಜೋಪಾನ ಮಾಡಿದ್ದ ಹಣ್ಣು–ತರಕಾರಿ ಹಿಂಡಿಂಡು ದನ–ಕರುಗಳ ಪಾಲಾಗುತ್ತಿದ್ದು, ಇವುಗಳನ್ನು ನಿಯಂತ್ರಿಸುವವರೇ ನಾಪತ್ತೆಯಾಗಿದ್ದಾರೆ.

ಇಡೀ ದಿನ ವ್ಯಾಪಾರ ನಡೆಸಿ, ಮರುದಿನದ ವ್ಯಾಪಾರಕ್ಕೆಂದು ಉಳಿದ ಹಣ್ಣು–ತರಕಾರಿಗಳಿಗೆ ಟಾರ್ಪಲ್ ಹೊದಿಸಿ, ಹಗ್ಗಕಟ್ಟಿ ಜೋಪಾನ ಮಾಡಿದ್ದರೂ ಟಾರ್ಪಲ್ ಎಳೆದು ಹಣ್ಣು–ತರಕಾರಿ ಮೇಯುತ್ತಿರುವ ದನ–ಕರುಗಳಿಂದ ವ್ಯಾಪಾರಿಗಳು ಏನೂ ಮಾಡಲಾಗದಂತಹ ಸ್ಥಿತಿಯಲ್ಲಿ ಕಾಲ ಕಳೆಯುವಂತಾಗಿದೆ

ದೇವರಾಜ ಮಾರುಕಟ್ಟೆಯ ಸುತ್ತಲೂ ಸುಮಾರು 6 ಕಡೆ ಒಳ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಗಿದೆ. ದನ–ಕರುಗಳು ಮಾರುಕಟ್ಟೆಯೊಳಗೆ ಬರದಂತೆ ತಡೆಯಲು ಕಬ್ಬಿಣದ ತುಂಡು ಕಂಬಗಳನ್ನು ಸಹ ನಿಲ್ಲಿಸಲಾಗಿದೆ. ಆದರೆ ಕಂಬಗಳು ಕಿತ್ತು ಬಂದಿರುವುದರಿಂದಾಗಿ ದನ–ಕರುಗಳಿಗೆ ತಡೆಯೇ ಇಲ್ಲದಂತಾಗಿದೆ. ಕಂಬಗಳಿಲ್ಲದ ಮಾರುಕಟ್ಟೆ ಒಳ ಆವರಣ ರಾತ್ರಿ ವೇಳೆ ಬಿಡಾಡಿ ದನ–ಕರುಗಳ ಕೊಟ್ಟಿಗೆಯಾಗುತ್ತಿದೆ.



ಮಾರುಕಟ್ಟೆಯಲ್ಲಿ ಬಿಡಾಡಿ ದನ–ಕರುಗಳು

ದಿಕ್ಕು–ದೆಸೆ ಇಲ್ಲ: ರಾತ್ರಿ ವೇಳೆ ದೇವರಾಜ ಮಾರುಕಟ್ಟೆಯೊಳಗೆ ದನ–ಕರು, ನಾಯಿಗಳ ಹಿಂಡು ದಿನೇ ದಿನೆ ಹೆಚ್ಚಾಗುತ್ತಿದ್ದರೂ ಕೇಳುವವರೇ ಇಲ್ಲ. ಮಾರುಕಟ್ಟೆಗೆ ದಿಕ್ಕು–ದೆಸೆ ಇಲ್ಲದಂತಾಗಿದೆ. ಸಾವಿರಾರು ವ್ಯಾಪಾರಿಗಳ ಲಕ್ಷಾಂತರ ಬಂಡವಾಳಕ್ಕೆ ಭದ್ರತೆಯೇ ಇಲ್ಲದಂತಾಗಿದೆ. ರಾತ್ರಿ ವೇಳೆ ದನ–ಕರುಗಳು, ನಾಯಿಗಳ ಹಿಂಡು ಜೊತೆಗೆ ಪುಂಡರ ಹಾವಳಿ ವಿಪರೀತವಾಗಿದೆ ಎಂದು ತರಕಾರಿ ವ್ಯಾಪಾರಿಗಳು 'ಮೈಸೂರು ಮಿತ್ರ'ನಲ್ಲಿ ದೂರಿದರು.

ಮೊದಲು ಮಾರುಕಟ್ಟೆಯೊಳಗೆ ಬರುವ ಬಿಡಾಡಿ ದನ–ಕರುಗಳನ್ನು ಪಿಂಜಾರಾ ಪೋಲ್‌ಗೆ ಹೊಡೆದುಕೊಂಡು ಹೋಗಲಾಗುತ್ತಿತ್ತು. ಆದರೆ ಈಗ ಪಾಲಿಕೆಯ ಸಿಬ್ಬಂದಿಗಳೇ 100–200 ರೂ.ಗಳಿಗೆ ದನ–ಕರುಗಳನ್ನು ಮಾರುಕಟ್ಟೆಯೊಳಗೆ ಬಿಡುತ್ತಿದ್ದಾರೆ. ಏನೇ ಹಾಳಾದರೂ ಕೇಳುತ್ತಿಲ್ಲ ಎಂದು ಕಿಡಿಕಾರಿದರು.

ಇಬ್ಬರೇ ಸೆಕ್ಯೂರಿಟಿ... ಅದೂ ವಯಸ್ಸಾದವರೂ...!: 820ಕ್ಕೂ ಹೆಚ್ಚು ಮಳಿಗೆಗಳಿರುವ ಮೂರೂವರೆ ಎಕರೆ ವಿಸ್ತೀರ್ಣದ ದೇವರಾಜ ಮಾರುಕಟ್ಟೆ ಕಾವಲಿಗೆ ಇರುವುದು ಇಬ್ಬರೇ ಸೆಕ್ಯೂರಿಟಿ ಗಾರ್ಡ್‌ಗಳು. ಅವರಲ್ಲಿ ಒಬ್ಬರು ಬೆಳಿಗ್ಗೆಯಿಂದ ಸಂಜೆಯವರೆಗಿದ್ದರೆ, ಮತ್ತೊಬ್ಬರು ರಾತ್ರಿಯಿಂದ ಬೆಳಗಿನ ಜಾವದವರೆಗೆ ಇರುತ್ತಾರೆ. ಅವರಿಬ್ಬರು ವಯಸ್ಸಾಗಿರುವ ಸೆಕ್ಯೂರಿಟಿ ಗಾರ್ಡ್‌ಗಳಾಗಿದ್ದು, ಎಲ್ಲಿ ಡ್ಯೂಟಿ ಮಾಡುತ್ತಿರುತ್ತಾರೆ ಎಂಬುದೇ ಯಾರಿಗೂ ಗೊತ್ತಿಲ್ಲ ಜನಸಂದಣಿಯಲ್ಲಿ ಕಳ್ಳತನವಾದರೂ ಕೇಳೋರಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದನ–ಕರುಗಳಿಗೆ ದಾರಿ ಸಲೀಸು...!

ದೇವರಾಜ ಮಾರುಕಟ್ಟೆಯ ಹೂವಿನ ವ್ಯಾಪಾರದ ಕಡೆ ಇರುವ ದ್ವಾರದ ಬಳಿ ಇದ್ದಂತಹ ಕಬ್ಬಿಣದ ಪೋಲ್‌ಗಳನ್ನು ಮುರಿದು ಹಾಕಲಾಗಿದೆ. ಇದರಿಂದ ಸರಾಗವಾಗಿ ದನ–ಕರುಗಳು ಒಳನುಗ್ಗುತ್ತಿವೆ. ಸಂಜೆಯಾಗುತ್ತಿದ್ದಂತೆ ಮಾರುಕಟ್ಟೆಯೊಳಗೆ ದನ–ಕರುಗಳು ಬರಲಿವೆ. ಇನ್ನೂ ಧನ್ವಂತರಿ ರಸ್ತೆ ಕಡೆಯಿಂದ ಯಾವುದೇ ಗೇಟ್ ಇಲ್ಲ. ಪಾಲಿಕೆಯವರಿಗೆ ಸಾಕಷ್ಟು ಬಾರೀ ಗೇಟ್ ಅಳವಡಿಸುವಂತೆ ಕೋರಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

- ಹಣ್ಣು-ತರಕಾರಿ ವ್ಯಾಪಾರಿಗಳು

ಪಾಲಿಕೆ ಸಿಬ್ಬಂದಿ ಇನ್ನೂ ಬರುತ್ತಲೇ ಇದ್ದಾರಂತೆ...!

ದೇವರಾಜ ಮಾರುಕಟ್ಟೆಯೊಳಗೆ ಮಳಿಗೆಗಳಿಂದ ಎರಡರಿಂದ ಮೂರು ಅಡಿಯಷ್ಟು ಹೊರಕ್ಕೆ ಅಂದರೆ ತಿರುಗಾಡುವ ದಾರಿಯಲ್ಲೇ ವ್ಯಾಪಾರ ಮಾಡುತ್ತಿರುವವರನ್ನು ತೆರವುಗೊಳಿಸಲು ಪಾಲಿಕೆ ಸಿಬ್ಬಂದಿ ಇನ್ನೂ ಬರುತ್ತಲೇ ಇದ್ದಾರೆ. ಜ.5 ರಂದು ಬರುತ್ತೇವೆ ಎಂದಿದ್ದರು. ಆದರೆ ಇದುವರೆಗೂ ಬಂದಿಲ್ಲ. ದೇವರಾಜ ಮಾರುಕಟ್ಟೆಯಲ್ಲಿನ ಸಣ್ಣ ಸಮಸ್ಯೆಗೂ ಪಾಲಿಕೆ ಸಿಬ್ಬಂದಿ ಸ್ಪಂದಿಸುತ್ತಿಲ್ಲ.

- ನೊಂದ ಮಳಿಗೆದಾರರು, ದೇವರಾಜ ಮಾರುಕಟ್ಟೆ

ಮೈಸೂರು ಮಿತ್ರ ಶನಿವಾರ 20 ಜನವರಿ 2024

ಮಠ ಮಂದಿರಗಳು ಶೈಕ್ಷಣಿಕ ಪ್ರಗತಿಗೆ ಸಹಕಾರಿ

ಪಾಂಡವಪುರ, ಜ.19– ಮಠ ಮಂದಿರಗಳು ಸಮಾಜದಲ್ಲಿ ಸಂಸ್ಕೃತಿ, ಸಂಸ್ಕಾರ ಬಿತ್ತುವ ಜೊತೆಗೆ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಿದೆ ಎಂದು ಬೆಳಗಾವಿ ನಿಡಸೋಸಿ ಸಿದ್ದ ಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಡಾ.ಬಾಲಗಂಗಾಧರನಾಥ ಸ್ವಾಮೀಜಿಗಳ 80ನೇ ಜಯಂತ್ಯುತ್ಸವ ಹಾಗೂ 11ನೇ ಸ್ಮರಣೋತ್ಸವ ಮತ್ತು ಶಾಲಾ–ಕಾಲೇಜು ವಾರ್ಷಿಕೋತ್ಸವ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ದೇಶ ಅಜ್ಞಾನದ ಕತ್ತಲಿನಲ್ಲಿ ಮುಳುಗಿದ್ದ ಸಂದರ್ಭ ಮಠ ಮಂದಿರಗಳು ಶಿಕ್ಷಣ, ಸಂಸ್ಕೃತಿ, ಸಂಸ್ಕಾರದ ಜ್ಞಾನ ನೀಡಿ ಸಮಾಜವನ್ನು ಜ್ಞಾನದೆಡೆಗೆ ತರುವ ಕೆಲಸ ಮಾಡಿವೆ ಎಂದರು. ಆದಿಚುಂಚನಗಿರಿ ಮಠ ಸಮಾಜಕ್ಕೆ ಶಿಕ್ಷಣ, ದಾಸೋಹ, ಸಂಸ್ಕಾರ ಮೂಡಿಸುವ ಕೆಲಸ ಮಾಡುತ್ತಿದೆ. ರಾಜ್ಯ, ದೇಶ ಮಾತ್ರವಲ್ಲದೆ ಹೊರ ದೇಶಗಳಲ್ಲೂ ಶಿಕ್ಷಣ ಸಂಸ್ಥೆ ತೆರೆದು ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಿದೆ ಎಂದರು.


ಚಿತ್ರನಟ ದರ್ಶನ್ ಅವರನ್ನು ಬಿಜಿಎಸ್ ಸಂಸ್ಥೆಯಿಂದ ಅಭಿನಂದಿಸಲಾಯಿತು.

ನಟ ದರ್ಶನ್ ಮಾತನಾಡಿ, ಬಿಜಿಎಸ್‌ಗೂ ನಮಗೂ ಅವಿನಾಭಾವ ಸಂಬಂಧವಿದೆ. ಬಿಜಿಎಸ್‌ನಲ್ಲಿ ಯಾವುದೇ ಕಾರ್ಯಕ್ರಮವಾದರೂ ನನ್ನ ಉಪಸ್ಥಿತಿ ಇರುತ್ತಿದೆ. ಇದೆಲ್ಲಾ ನನಗೆ ಮಠದ ಮೇಲಿರುವ ಅತಿಯಾದ ಪ್ರೀತಿ ಮತ್ತು ಭಕ್ತಿ ಕಾರಣ ಎಂದರು.

ಪತ್ರಕರ್ತ ರೆಹಮತ್ ಕಂಚಿಕಾರ್ ಮಾತನಾಡಿದರು. ನಟ ದರ್ಶನ್ ಸೇರಿದಂತೆ ಗಣ್ಯರು ಬಾಲಗಂಗಾಧರನಾಥ ಸ್ವಾಮೀಜಿ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ಬಿಜಿಎಸ್ ಕ್ಯಾಲೆಂಡರ್, ಡೇರಿ ಹಾಗೂ ಚೆಣ್ಣರ ಕುಂಚ ಸಂಚಿಕೆ ಬಿಡುಗಡೆ ಮಾಡಲಾಯಿತು. ಬಳಿಕ ಶಾಲಾ–ಕಾಲೇಜು ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸಮಾರಂಭದಲ್ಲಿ ಶಾಲೆ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ, ಚಿತ್ರನಟ ಜೈಜಗದೀಶ್, ನಟಿ ವಿಜಯಲಕ್ಷ್ಮಿ ಸಿಂಗ್, ಬಿಜೆಪಿ ಮುಖಂಡ ಸಚ್ಚಿದಾನಂದ, ಬಿಇಓ ಬಿ.ಚಂದ್ರಶೇಖರ್ ಸೇರಿದಂತೆ ಶಾಲಾ ಕಾಲೇಜು ಉಪನ್ಯಾಸಕರು, ಶಿಕ್ಷಕರು, ಸಿಬ್ಬಂದಿಗಳು ಭಾಗವಹಿಸಿದ್ದರು.

ಬಿಜೆಪಿ ನೂತನ ಜಿಲ್ಲಾಧ್ಯಕ್ಷರಾಗಿ ಡಾ.ಇಂದ್ರೇಶ್ ಪದಗ್ರಹಣ

ಮಂಡ್ಯ, ಜ.19– ನಗರದ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ ಸರಳ ಸಮಾರಂಭದಲ್ಲಿ ಮಂಡ್ಯ ಜಿಲ್ಲಾ ಬಿಜೆಪಿ ನೂತನ ಅಧ್ಯಕ್ಷ ಡಾ.ಇಂದ್ರೇಶ್ ನಿಕಟಪೂರ್ವ ಅಧ್ಯಕ್ಷ ಸಿ.ಪಿ.ಉಮೇಶ್ ಅವರಿಂದ ಪಕ್ಷದ ಬಾವುಟ ಪಡೆಯುವ ಮೂಲಕ ಅಧಿಕಾರ ಸ್ವೀಕರಿಸಿದರು.


ಬಳಿಕ ಮಾತನಾಡಿದ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಸ್ಥಾನ ಅಧಿಕಾರವಲ್ಲ, ಪಕ್ಷದ ಜವಾಬ್ದಾರಿ. ಒಳ್ಳೆಯ ಕೆಲಸ ಮಾಡಿ ಪಕ್ಷ ಕಟ್ಟುವಂತೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ವರಿಷ್ಠರು ತಿಳಿಸಿದ್ದಾರೆ. ಪಕ್ಷವನ್ನು ಎತ್ತರಕ್ಕೆ ಕೊಂಡೊಯ್ಯುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಯಾವುದೇ ಕಾರಣಕ್ಕೂ ಕಟ್ಟಕಡೆ ಕಾರ್ಯಕರ್ತನಿಗೂ ಧಕ್ಕೆ ಬಾರದ ರೀತಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಪಕ್ಷದ ಕಾರ್ಯಕರ್ತರ ಹಾಗೂ ಮುಖಂಡರ ಸಹಕಾರ, ಪ್ರೀತಿ ವಿಶ್ವಾಸ ಇರಲಿ. ದೇಶ ಮೊದಲು, ಪಕ್ಷ ವ್ಯಕ್ತಿ ನಂತರ ಎಂಬುದೇ ಬಿಜೆಪಿ ಸಿದ್ಧಾಂತವಾಗಿದೆ. ವ್ಯಕ್ತಿಗೆ ಯಾವುದೇ ಪ್ರಾಧಾನ್ಯತೆ ಇಲ್ಲ. ಪಕ್ಷದ ಜವಾಬ್ದಾರಿಯನ್ನು ಯಾರಿಗಾದರೂ ಕೊಡಲಿ, ನಾವು–ನೀವು ಎಲ್ಲರೂ ಒಗ್ಗಟ್ಟಾಗಿ ದುಡಿದು ಪಕ್ಷ ಸದೃಢಗೊಳಿಸೋಣ ಎಂದರು.

ಲೋಕಸಭೆ ಚುನಾವಣೆ ಸಮೀಪಿಸುತ್ತಿದ್ದು, 100ಕ್ಕೆ 100ರಷ್ಟು ನಾವು ಗೆಲ್ಲಬೇಕು. ಜಿಪಂ ಮತ್ತು ತಾಪಂ ಚುನಾವಣೆಯಲ್ಲಿ ಪಕ್ಷದ ಯಾರೊಬ್ಬರೂ ಸದಸ್ಯರಾಗಿ ಆಯ್ಕೆಯಾಗಿಲ್ಲ. ಮುಂಬರುವ ಚುನಾವಣೆಯಲ್ಲಿ ಪಕ್ಷದ ಸಾಮಾನ್ಯ ವ್ಯಕ್ತಿಯೂ ಸದಸ್ಯನಾಗಿ ಆಯ್ಕೆಯಾಗಬೇಕು. ಜಿಲ್ಲಾ ಘಟಕದಲ್ಲಿ ಯಾವುದೇ ಬಣ, ಗುಂಪುಗಾರಿಕೆಗೆ ಅವಕಾಶ ಕೊಡದೆ, ಪ್ರತಿಯೊಬ್ಬರ ವಿಶ್ವಾಸ ಗಳಿಸಿ ಪಕ್ಷ ಕಟ್ಟುತ್ತೇನೆ. ಯಾವುದೇ ಬಣ, ಗುಂಪುಗಾರಿಕೆ ಮಾಡಬಾರದು. ನಮ್ಮದು ಒಂದೇ ಪಾರ್ಟಿ, ಅದು ಬಿಜೆಪಿ ಪಾರ್ಟಿ. ನಿಕಟಪೂರ್ವ ಅಧ್ಯಕ್ಷ ಸಿ.ಪಿ.ಉಮೇಶ್ ಅವರ ಮಾರ್ಗದರ್ಶನದಲ್ಲಿ ಮುನ್ನಡೆದು ಪಕ್ಷ ಸದೃಢಗೊಳಿಸುತ್ತೇನೆ ಎಂದರು.

ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಮತದಾರರ ಸಂಖ್ಯೆ ಹೆಚ್ಚಾಗಿದೆ. ಇದಕ್ಕೆ ಸಿ.ಪಿ.ಉಮೇಶ್ ಅವರ ಕಾರ್ಯಕ್ಷಮತೆಯೇ ಕಾರಣ. ಹೀಗಿದ್ದರೂ ಉಮೇಶ್ ಅವರನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ಸ್ಥಾನದಿಂದ ತೆಗೆದಿದ್ದಾರೆ ಎಂದರೆ ವರಿಷ್ಠರು ಅವರಿಗೆ ರಾಜ್ಯ ಮಟ್ಟದಲ್ಲಿ ಉನ್ನತ ಸ್ಥಾನ ನೀಡಲಿದ್ದಾರೆ. ಅತಿ ಶೀಘ್ರದಲ್ಲೇ ಸಿಹಿ ಸುದ್ದಿ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಸಿ.ಪಿ. ಉಮೇಶ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಮುಖಂಡರಾದ ಬೂಕಹಳ್ಳಿ ಮಂಜು, ಕೆ.ಎಸ್.ನಂಜುಂಡೇಗೌಡ, ಸ್ವಾಮಿ, ಲಕ್ಷ್ಮಿ ಅಶ್ವಿನ್‌ಗೌಡ, ಅಶೋಕ್ ಜಯರಾಂ, ಈ.ಸಿ.ನಿಂಗರಾಜೇಗೌಡ, ವಿದ್ಯಾ ನಾಗೇಂದ್ರ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.



ಜಿಲ್ಲಾ ಬಿಜೆಪಿ ನೂತನ ಅಧ್ಯಕ್ಷ ಡಾ.ಇಂದೇಶ್ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಜಿಲ್ಲಾಧ್ಯಕ್ಷರ ನೇಮಕ ವಿಚಾರ: ಕಾರ್ಯಕರ್ತರ ಅಸಮಾಧಾನ

ಜಿಲ್ಲಾ ಬಿಜೆಪಿ ನೂತನ ಅಧ್ಯಕ್ಷರನ್ನಾಗಿ ಡಾ.ಇಂದ್ರೇಶ್ ಅವರನ್ನು ನೇಮಕ ಮಾಡಲಾಗಿದೆ. ಆದರೆ ರಾಜ್ಯ ಬಿಜೆಪಿ ಘಟಕದ ವಿರುದ್ಧ ಜಿಲ್ಲಾ ಬಿಜೆಪಿ ಕೆಲ ಮುಖಂಡರು ಹಾಗೂ ಕಾರ್ಯಕರ್ತರು ಅಸಮಾಧಾನಗೊಂಡಿದ್ದಾರೆ.

ಇತ್ತೀಚೆಗೆ ನೂತನ ಬಿಜೆಪಿ ಅಧ್ಯಕ್ಷರ ನೇಮಕ ವಿಚಾರಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ– ಧಾರವಾಡ ಕ್ಷೇತ್ರದ ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ನೇತೃತ್ವದಲ್ಲಿ ಮಂಡ್ಯ ಬಿಜೆಪಿ ಕಚೇರಿಯಲ್ಲಿ ಸಭೆ ನಡೆಸಲಾಗಿತ್ತು. ಸಭೆಯಲ್ಲಿ ಬಹುತೇಕ ಮುಖಂಡರು ಹಾಲಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಅವರನ್ನೇ ಮುಂದುವರೆಸುವಂತೆ ಒತ್ತಾಯ ಮಾಡಿದ್ದರು. ಈ ಸಂಬಂಧ ಟೆಂಗಿನಕಾಯಿ ವರದಿಯನ್ನು ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ರಾಜ್ಯ ಪದಾಧಿಕಾರಿಗಳ ತಂಡಕ್ಕೆ ಸಲ್ಲಿಸಿದ್ದರು. ಆದಾಗ್ಯೂ ಡಾ.ಇಂದ್ರೇಶ್ ಅವರನ್ನು ಜಿಲ್ಲಾಧ್ಯಕ್ಷರನ್ನಾಗಿ ಮಾಡಿರುವುದಕ್ಕೆ ಕೆಲವರಲ್ಲಿ ಅಸಮಾಧಾನವಿದ್ದು, ಇಂದಿನ ಪದಗ್ರಹಣ ಸಭೆಗೂ ಕೆಲವರು ಗೈರು ಹಾಜರಿಯಾಗಿದ್ದರು.

ಅಸಮಾಧಾನಕ್ಕೆ ಪ್ರಮುಖ ಕಾರಣವೆಂದರೆ ಕಾರ್ಯಕರ್ತರಿಂದ ಮಾಹಿತಿ ಪಡೆಯದೇ ಅಧ್ಯಕ್ಷರ ನೇಮಕವಾಗಿದ್ದರೆ ಬೇಸರ ಇರುತ್ತಿರಲಿಲ್ಲ. ಆದರೆ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿಯೂ ಪ್ರಸ್ತುತ ಇರುವ ಅಧ್ಯಕ್ಷರನ್ನೇ ಮುಂದುವರೆಸಿ ಎಂದು ಕೇಳಿಕೊಂಡಿದ್ದರೂ ಹಾಲಿ ಅಧ್ಯಕ್ಷರನ್ನು ಬದಲಿಸಿ, ಹೊಸ ಅಧ್ಯಕ್ಷರ ನೇಮಕವಾಗಿದೆ. ಹೀಗಿರುವಾಗ ಕಾರ್ಯಕರ್ತರ ಮಾತಿಗೆ ಬೆಲೆ ಇಲ್ಲದಂತಾಗಿದೆ ಎಂದು ಬೇಸರ ಹೊರಹಾಕಿದ್ದಾರೆ.

ಸುತ್ತೂರು ಜಾತ್ರಾ ರಥಕ್ಕೆ ಎಸ್ಪಿ ಯತೀಶ್ ಸ್ವಾಗತ


ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥವನ್ನು ಎಸ್ಪಿ ಯತೀಶ್ ಸ್ವಾಗತಿಸಿದರು.

ಮಂಡ್ಯ, ಜ.19– ಸುತ್ತೂರು ಶ್ರೀಕ್ಷೇತ್ರದಲ್ಲಿ ಫೆ.6ರಿಂದ ಆರಂಭವಾಗುವ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥಕ್ಕೆ ಶುಕ್ರವಾರ ಮಂಡ್ಯದ ಜಿಲ್ಲಾಧಿಕಾರಿ ಕಚೇರಿ ಎದುರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಪುಷ್ಪಾರ್ಚನೆ ಮಾಡಿ ಸ್ವಾಗತಿಸಿದರು.

ಬಳಿಕ ಮಾತನಾಡಿದ ಎಸ್ಪಿ ಯತೀಶ್, ಸುತ್ತೂರು ಜಾತ್ರಾ ಮಹೋತ್ಸವಕ್ಕೆ ವಿಶೇಷ ಪರಂಪರೆ ಇದ್ದು, ಲಕ್ಷಾಂತರ ಭಕ್ತರು ಭಾಗಿಯಾಗಿ ದೇವರು ಮತ್ತು ಗುರುಗಳ ಕೃಪಾಶೀರ್ವಾದ ಪಡೆಯುತ್ತಾ ಬಂದಿದ್ದಾರೆ. ಆದಿಚುಂಚನಗಿರಿ ಮಠ ಹಾಗೂ ಸುತ್ತೂರು ಮಠ ಜನಪರ ಕೆಲಸದಲ್ಲಿ ಮುಂಚೂಣಿಯಲ್ಲಿದ್ದು, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ವಿಶೇಷ ಕೊಡುಗೆ ನೀಡಿವೆ ಎಂದರು. ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಸೇವೆಯಲ್ಲಿ ಸುತ್ತೂರು ಮಠದ ಪಾತ್ರ ಬಹಳ ದೊಡ್ಡದಾಗಿದೆ. ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ಹಲವು ವೈಜ್ಞಾನಿಕ ವಿಚಾರಗಳನ್ನು ಜನರಿಗೆ ಮುಟ್ಟಿಸುವಲ್ಲಿ ಜಾತ್ರೆ ಸಹಕಾರಿಯಾಗಲಿದೆ. ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಸುತ್ತೂರು ಜಾತ್ರೆ ಒಳಗೊಂಡಿರುವುದು ಸಂತೋಷಕದ ಸಂಗತಿ. ಮಂಡ್ಯ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿ ವರ್ಷ ಸುತ್ತೂರು ಜಾತ್ರೆಗೆ ಜನತೆ ಹೋಗುತ್ತಿರುವುದು ಬಹಳ ವಿಶೇಷ ಎಂದರು.

ಈ ವೇಳೆ ಜಿಪಂ ಸಿಇಓ ಶೇಕ್ ತನ್ವೀರ್ ಆಸೀಫ್, ಕಾಯಕಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್, ಲಿಂಗಾಯತ ಮಹಾಸಭಾ ಅಧ್ಯಕ್ಷ ಎಂ.ಬೆಟ್ಟಹಳ್ಳಿ ಮಂಜುನಾಥ್, ಧನಗೂರು ಮಠದ ಶ್ರೀಮುಮ್ಮಡಿ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ಬಿಜೆಪಿ ಮುಖಂಡರಾದ ಇಂದ್ರೇಶ್, ಅಶೋಕ್ ಜಯರಾಮ್, ಸಮಾಜದ ಮುಖಂಡರಾದ ಗುರುಪ್ರಸಾದ್, ಬಿ.ಟಿ.ಜೀವನ್, ತ್ರಿಭುವನ್, ಜಿ.ಮಹಾಂತಪ್ಪ, ಆಲಕೆರೆ ಮಾದೇಶ್, ಎಂ.ಎಚ್.ವನೇಶ್, ನಿಜಗುಣ ಸೇರಿದಂತೆ ಹಲವರಿದ್ದರು.

ಜ.22ರಂದು ಪಾಲಹಳ್ಳಿಯಲ್ಲಿ ವಿಶೇಷ ಪೂಜೆ

ಪಾಲಹಳ್ಳಿ, ಜ.19– ಅಯೋಧ್ಯೆಯ ರಾಮ ಮಂದಿರದಲ್ಲಿ ಜ.22ರಂದು ಶ್ರೀರಾಮ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನಡೆಯುವ ಹಿನ್ನೆಲೆಯಲ್ಲಿ ಪಾಲಹಳ್ಳಿಯ ರಾಮ ಮಂದಿರದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿದ್ದು, ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀರಾಮನ ಉತ್ಸವ ನಡೆಯಲಿದೆ. ಅಲ್ಲದೇ ಅನ್ನ ಸಂತರ್ಪಣೆ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಲೋಕಸಭಾ ಚುನಾವಣೆಯಲ್ಲಿ ಎಂಎಲ್‌ಸಿ ಮಧು ತಟಸ್ಥವಾಗುವ ಬಗ್ಗೆ ತಿಳಿದಿಲ್ಲ

ಭಾರತೀನಗರ, ಜ.19– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಟಸ್ಥವಾಗಿ ಉಳಿಯುವ ಸಂಬಂಧ ಎಂಎಲ್‌ಸಿ ಮಧು ಜಿ.ಮಾದೇಗೌಡರ ಹೇಳಿಕೆ ಬಗ್ಗೆ ತಿಳಿದಿಲ್ಲ ಎಂದು ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ತಿಳಿಸಿದರು.

ಸೂನಗಹಳ್ಳಿ, ಹೆಮ್ಮಿಗೆ, ಕಬ್ಬನಹಳ್ಳಿ, ಬಿ.ಹೊಸೂರು ಹಾಗೂ ಚಿಕ್ಕರಸಿನಕೆರೆ ಹೋಬಳಿ ವ್ಯಾಪ್ತಿಯ ಗ್ರಾಮಗಳ ಭಕ್ತರೊಂದಿಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ತೆರಳುತ್ತಿದ್ದ ವೇಳೆ ಮಾತನಾಡಿದ ಅವರು, ಜಿ.ಮಾದೇಗೌಡರು ಶಾಸಕ, ಸಂಸದ, ಕೇಂದ್ರ ಸಚಿವರಾಗಿ ಕಾಂಗ್ರೆಸ್ ಪಕ್ಷಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಸಾಕಷ್ಟು ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಶ್ರಮಿಸಿದ್ದಾರೆ. ಮಧು ಮಾದೇಗೌಡರು ಜಿ.ಮಾದೇಗೌಡರ ಜೊತೆ ಪಕ್ಷಕ್ಕೆ ದುಡಿದಿದ್ದಾರೆ ಎಂದರು.


ಶಾಸಕ ರಮೇಶ್‌ಬಾಬು ಭಕ್ತರೊಂದಿಗೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ತೆರಳಿದರು.

ಬದಲಾದ ರಾಜಕೀಯ ಸನ್ನಿವೇಶದಲ್ಲಿ ಮಧು ಮಾದೇಗೌಡರಿಗೆ ಅಪಮಾನ ಹಾಗೂ ಮನಸ್ಸಿಗೆ ನೋವಾಗಿರಬಹುದು. ಇದರಿಂದಾಗಿ ಲೋಕಸಭಾ ಚುನಾವಣೆಯಲ್ಲಿ ತಟಸ್ಥವಾಗಿ ಉಳಿಯುವ ಬಗ್ಗೆ ಮಾತನಾಡಿದ್ದಾರೆ. ಅವರ ನಿಲುವು ನಮಗೂ ಕೂಡ ನೋವುಂಟುಮಾಡಿದೆ ಎಂದು ವಿಷಾದ ವ್ಯಕ್ತಪಡಿಸಿದರು. ರಾಜ್ಯ ಹಾಗೂ ಜಿಲ್ಲಾ ನಾಯಕರೊಡನೆ ಎಂಎಲ್‌ಸಿ ಮಧು ಅವರೊಂದಿಗೆ ಮಾತನಾಡಿ ಅವರ ಸಮಸ್ಯೆ ಪರಿಹರಿಸಲು ಮುಂದಿನ ದಿನಗಳಲ್ಲಿ ಪ್ರಯತ್ನಿಸಲಾಗುವುದು ಎಂದರು.

ಈ ವೇಳೆ ತಾಪಂ ಸದಸ್ಯ ಬಿ. ಗಿರೀಶ್, ಗ್ರಾಪಂ ಸದಸ್ಯ ಕೆ.ವಿ.ಶ್ರೀನಿವಾಸ್, ಮುಖಂಡರಾದ ಆರ್.ಸಿದ್ದಪ್ಪ, ಸಿದ್ದೇಗೌಡ, ಸ್ವರೂಪ್ ಚಂದ್ರ ಸೇರಿದಂತೆ ಮತ್ತಿತರರಿದ್ದರು.

ಚೆನ್ನಾಜಮ್ಮ ನಿಧನ



ಕಿರುಗಾವಲು, ಜ.19– ಕಿರುಗಾವಲು ನಿವಾಸಿ, ನಿವೃತ್ತ ಶಿಕ್ಷಕ ಲೇ.ಚನ್ನೇಗೌಡರ ಪತ್ನಿ ಚೆನ್ನಾಜಮ್ಮ (91) ಗುರುವಾರ ನಿಧನರಾದರು. ಮೃತರು ಪುತ್ರ ನಿವೃತ್ತ ಆಹಾರ ಶಿರಸ್ತೇದಾರ್ ಕಾಳಲಿಂಗೇಗೌಡ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರು ನರಸಿಂಹರಾಜ ಕ್ಷೇತ್ರದ ಬಿಜೆಪಿ ವತಿಯಿಂದ ನೂತನವಾಗಿ ಪಕ್ಷದ ಮೈಸೂರು ನಗರ ಅಧ್ಯಕ್ಷರಾಗಿ ನೇಮಕಗೊಂಡ ಮಾಜಿ ಶಾಸಕ ಎಲ್. ನಾಗೇಂದ್ರರವರನ್ನು ಅಭಿನಂದಿಸಲಾಯಿತು. ಈ ವೇಳೆ ಮಾಜಿ ಮೇಯರ್ ಸಂದೇಶ ಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನದ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ. ಮಂಜುನಾಥ್, ಕ್ಷೇತ್ರದ ಅಧ್ಯಕ್ಷ ಭಾನುಪ್ರಕಾಶ್, ಪ್ರಧಾನ ಕಾರ್ಯದರ್ಶಿ ವೇಲು, ಮಾಜಿ ಅಧ್ಯಕ್ಷ ಸು.ಮುರಳಿ, ನಗರ ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್ ಸಂದೇಶ್‌ಸ್ವಾಮಿ, ಮುಖಂಡರುಗಳಾದ ಆನಂದ್, ನಾರಾಯಣ ಲೋಲಪ್ಪ, ಮಂಜುನಾಥ್, ರಾಜೇಂದ್ರ, ಮಂಜು ಸಿ.ಗೌಡ, ಪದ್ಮನಾಭ, ಕೃಷ್ಣಮೂರ್ತಿ ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ರಾಮಲಲ್ಲಾ ವಿಗ್ರಹ ಬಾಲರಾಮನಂತೆ ಕಾಣಿಸುತ್ತಿಲ್ಲ

ಭೋಪಾಲ್: ಅಯೋಧ್ಯೆ ರಾಮಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಲಿರುವ ರಾಮಲಲ್ಲಾ ಮೂರ್ತಿ ಮಗುವಿನಂತೆ ಕಾಣುತ್ತಿಲ್ಲ ಎಂದು ಹೇಳುವ ಮೂಲಕ ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಹೊಸ ವಿವಾದವನ್ನು ಮೈಮೇಲೆ ಎಳೆದುಕೊಂಡಿದ್ದಾರೆ.



ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ, ವಿವಾದಿತ ಹಾಗೂ ನಾಶಪಡಿಸಿದ ವಿಗ್ರಹ ಎಲ್ಲಿದೆ? ಎರಡನೇ ಪ್ರತಿಮೆಯ ಅಗತ್ಯವೇನು? ನಮ್ಮ ಗುರು ಶಂಕರಾಚಾರ್ಯ ಸ್ವಾಮಿ, ಸ್ವರೂಪಾನಂದ ಜಿ ಮಹಾರಾಜ್ ಕೂಡ ರಾಮನ ವಿಗ್ರಹವನ್ನು ಸ್ಥಾಪಿಸಲು ಸಲಹೆ ನೀಡಿದ್ದರು. ದೇವಾಲಯದಲ್ಲಿ ಕುಳಿತಿರುವ ವಿಗ್ರಹವು ಮಗುವಿನಂತೆ ಕಾಣುತ್ತಿಲ್ಲ ಎಂದು ಬರೆದಿದ್ದಾರೆ.

ದಿಗ್ವಿಜಯ್ ಸಿಂಗ್ ಅವರ ಈ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ ಟ್ರಸ್ಟ್ ಸದಸ್ಯ ಕಮಲೇಶ್ವರ್ ಚೌಪಾಲ್, ದಿಗ್ವಿಜಯ್ ಸಿಂಗ್ ಅವರ ಹೇಳಿಕೆಗಳಿಗೆ ಯಾವುದೇ ಕಾರಣಕ್ಕೂ ಪ್ರಾಮುಖ್ಯತೆ ನೀಡಬೇಡಿ. ಅವರ ಹೇಳಿಕೆಗಳು ಯಾವಾಗಲೂ ಅಸಂಬದ್ಧ ಆಗಿರುತ್ತದೆ. ಸುಮ್ಮನೆ ಗಾಳಿಯಲ್ಲಿ ಗುಂಡು ಹಾರಿಸುವ ರೀತಿ ಅವರು ಮಾತನಾಡುತ್ತಾರೆ ಎಂದು ಹೇಳಿದ್ದಾರೆ.


ಮೈಸೂರು ಹಾಗೂ ಗೋವಾ ತಂಡಗಳ ರಣಜಿ ಕ್ರಿಕೆಟ್ ಪಂದ್ಯ ಆಡಲು ಮೈಸೂರಿಗೆ ಆಗಮಿಸಿರುವ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್ ಅವರನ್ನು ಸಂದೇಶ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಭೇಟಿಯಾಗಿ ಅಯೋಧ್ಯೆಯ ಶ್ರೀರಾಮಮಂದಿರದ ಮಂತ್ರಾಕ್ಷತೆ ಹಾಗೂ ಶ್ರೀರಾಮರ ಭಾವಚಿತ್ರ ನೀಡಲಾಯಿತು. ಈ ಸಂದರ್ಭದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಕಾರ್ಯಕರ್ತರಾದ ಟಿ.ಎಸ್. ಅರುಣ್, ಸಚಿನ್ ನಾಯಕ್, ಲಿಖಿತ್ ಹಾಗೂ ದರ್ಶನ್ ಉಪಸ್ಥಿತರಿದ್ದರು.

ನಿವೇಶನ ಅಡಮಾನ ಮಾಡಿಸಿಕೊಂಡು ಸಾಲವನ್ನೇ ನೀಡದೇ ವಸೂಲಿಗಿಳಿದ ಮುತ್ತೂಟ್ ಫೈನಾನ್ಸ್; ಹೃದಯಾಘಾತದಿಂದ ಸಾಲಗಾರ ಸಾವು

ಪತ್ನಿ ನೀಡಿದ ವಂಚನೆ ಪ್ರಕರಣದಲ್ಲಿ ಫೈನಾನ್ಸ್‌ನ ಮೂವರ ಬಂಧನ

ಮೈಸೂರು, ಜ.19– ನಿವೇಶನವನ್ನು ಬ್ಯಾಂಕ್‌ಗೆ ಅಡಮಾನದ ನೋಂದಣಿ ಮಾಡಿಸಿಕೊಂಡು, ಮನೆ ಕಟ್ಟಲು ಸಾಲ ಮಂಜೂರಾಗಿರುವುದಾಗಿ ತಿಳಿಸಿ, ಆದರೆ ಸಾಲದ ಹಣ ನೀಡದೇ ದಂಪತಿಗೆ ವಂಚಿಸಿದ ಆರೋಪದ ಮೇರೆಗೆ ಖಾಸಗಿ ಫೈನಾನ್ಸ್ ಕಂಪನಿಯ ಮ್ಯಾನೇಜರ್ ಸೇರಿದಂತೆ ಮೂವರನ್ನು ಮೈಸೂರಿನ ಲಕ್ಷ್ಮೀಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮುತ್ತೂಟ್ ಹೌಸಿಂಗ್ ಫೈನಾನ್ಸ್ ಕಂಪನಿಯ ಏರಿಯಾ ಮ್ಯಾನೇಜರ್ ಯೋಗಾನಂದ, ಅಸಿಸ್ಟೆಂಟ್ ಮ್ಯಾನೇಜರ್ ಬಸವರಾಜು, ಸೇಲ್ಸ್ ಆಫೀಸರ್ ಆನಂದ್ ಮತ್ತು ಕಂಪನಿಯ ಇನ್ ಚಾರ್ಜ್ ಬಂಧನಕ್ಕೊಳಗಾದವರಾಗಿದ್ದು, ನ್ಯಾಯಾಧೀಶರು ಇವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವಿವರ: ನಂಜನಗೂಡಿನ ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖಾ ಕಚೇರಿಯಲ್ಲಿ ಡಿ–ಗ್ರೂಪ್ ನೌಕರರಾಗಿದ್ದ ಎಂ.ಸುರೇಶ್ ಮತ್ತು ಅವರ ಪತ್ನಿ, ಖಾಸಗಿ ಶಾಲೆಯ ಶಿಕ್ಷಕಿ ಚಂದ್ರಕಲಾ ಅವರು ಗಿರಿಯಾಬೋವಿ ಪಾಳ್ಯ ಸರ್ವೆ ನಂ.190/2ರಲ್ಲಿ ಇರುವ ನಿವೇಶನ ಸಂಖ್ಯೆ 51ರಲ್ಲಿ ಮನೆ ಕಟ್ಟಲು ಸಾಲಕ್ಕಾಗಿ ಮುತ್ತೂಟ್ ಫೈನಾನ್ಸ್ ಅಧಿಕಾರಿಗಳನ್ನು ಸಂಪರ್ಕಿಸಿದ್ದರು. ಈ ವೇಳೆ ಅವರೊಂದಿಗೆ ಮಾತನಾಡಿದ್ದ ಅಸಿಸ್ಟೆಂಟ್ ಮ್ಯಾನೇಜರ್ ಬಸವರಾಜು ಅವರು ಮೊದಲಿಗೆ 15 ರಿಂದ 20 ಲಕ್ಷ ರೂ. ಸಾಲ ನೀಡುವುದಾಗಿ ತಿಳಿಸಿ ನಿವೇಶನಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು 2023ರ ಜುಲೈ ಮೊದಲ ವಾರದಲ್ಲಿ ಪಡೆದಿದ್ದರು.

ಆಗಸ್ಟ್ 3ರಂದು ಈ ದಂಪತಿಗೆ 16,39,780 ರೂ. ಸಾಲ ಮಂಜೂರಾಗಿದೆ. ಅದರಲ್ಲಿ 1,33,585 ರೂ. ಸುರೇಶ್ ಅವರ ಹೆಸರಿನಲ್ಲಿ ಲೈಫ್ ಇನ್ಶೂರೆನ್ಸ್ ಪಾಲಿಸಿ ಮಾಡಿಸಿ, ನಿವೇಶನವನ್ನು ಸಂಸ್ಥೆಯ ಹೆಸರಿಗೆ ಮಾರ್ಟ್‌ಗೇಜ್ (ಅಡಮಾನ ನೋಂದಣಿ) ಮಾಡಿಸಿಕೊಂಡು ಸಾಲದ ಹಣವನ್ನು ನೀಡುವುದಾಗಿ ತಿಳಿಸಿ ಖಾಲಿ ಹಾಳೆಗೆ 60 ರಿಂದ 70 ಸಹಿ, ಜೊತೆಗೆ ಸಹಿ ಮಾಡಿದ 12 ಖಾಲಿ ಚೆಕ್‌ಗಳನ್ನೂ ಪಡೆದುಕೊಂಡಿದ್ದಾರೆ.

ಲೋನ್‌ಗೆ ಸಂಬಂಧಿಸಿದಂತೆ ಕಡತವನ್ನು ಆನಂದ್ ಅವರಿಗೆ ನೀಡಿರುವುದಾಗಿ ಅಸಿಸ್ಟೆಂಟ್ ಮ್ಯಾನೇಜರ್ ಬಸವರಾಜು ತಿಳಿಸಿದ್ದು, ಅದರಂತೆ ಆನಂದ್ ಅವರು 2023ರ ಅಕ್ಟೋಬರ್ 6ರಂದು ಈ ದಂಪತಿಯ ನಿವೇಶನವನ್ನು ಮೈಸೂರು ಪೂರ್ವ ನೋಂದಣಾಧಿಕಾರಿಯವರ ಕಚೇರಿಯಲ್ಲಿ ಸಂಸ್ಥೆ ಹೆಸರಿಗೆ ಮಾರ್ಟ್‌ಗೇಜ್ ನೋಂದಣಿ ಮಾಡಿಸಿಕೊಂಡು ಅಕ್ಟೋಬರ್ 8ರಂದು ಆರ್‌ಟಿಜಿಎಸ್ ಮೂಲಕ ದಂಪತಿಯ ಖಾತೆಗೆ ಹಣ ಬರುತ್ತದೆ ಎಂದು ತಿಳಿಸಿದ್ದಾರೆ. ಆದರೆ ದಂಪತಿಯ ಖಾತೆಗೆ ಹಣ ಜಮೆ ಆಗಲೇ ಇಲ್ಲ. ವಿಚಿತ್ರವೆಂದರೆ ಸಾಲದ ಹಣವನ್ನೇ ಪಡೆಯದ ಸುರೇಶ್ ಅವರ ಖಾತೆಯಿಂದ ಮೊದಲ ಕಂತಿನ ಇಎಂಐ ಕಟ್ಟಾಗಿದೆ. ಇದರಿಂದ ಗಾಬರಿಯಾದ ಸುರೇಶ್ ಅವರು ಅಸಿಸ್ಟೆಂಟ್ ಮ್ಯಾನೇಜರ್ ಬಸವರಾಜು ಅವರನ್ನು ಸಂಪರ್ಕಿಸಿದಾಗ ಇನ್ನೆರಡು ದಿನದಲ್ಲಿ ಸಾಲದ ಹಣ ನಿಮ್ಮ ಖಾತೆಗೆ ಜಮೆ ಆಗುತ್ತದೆ ಎಂದು ಹೇಳಿ ಸಾಗಹಾಕಿದ್ದಾರೆ ಎಂದು ಚಂದ್ರಕಲಾ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದರು.

ಆದರೆ ಸಾಲದ ಹಣ ಜಮೆ ಆಗದೇ ಇದ್ದುದ್ದರಿಂದ ಒಂದೆಡೆ ನಿವೇಶನವೂ ಫೈನಾನ್ಸ್ ಕಂಪನಿಗೆ ಅಡಮಾನವಾಗಿದೆ. ಸಾಲದ ಹಣವೂ ಬಂದಿಲ್ಲ. ಇಎಂಐ ಕಟ್ಟಾಗುತ್ತಿದೆ ಎಂಬ ಕಾರಣಕ್ಕೆ ಆಘಾತಗೊಂಡ ಸುರೇಶ್, 2023ರ ಅಕ್ಟೋಬರ್ 13ರಂದು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ನಂತರ ಚಂದ್ರಕಲಾ ಅವರು ತಮಗೆ ಸಾಲದ ಹಣ ಹಾಗೂ ಪತಿಯ ಹೆಸರಿನಲ್ಲಿ ಮಾಡಿರುವ ಲೈಫ್ ಇನ್ಶೂರೆನ್ಸ್ ಪಾಲಿಸಿ ದಾಖಲೆಗಳನ್ನು ಕೊಡುವಂತೆಯೂ ಕಂಪನಿಗೆ ಎಷ್ಟೇ ಅಲೆದಾಡಿದರೂ ಅವರಿಗೆ ಸ್ಪಂದನೆ ದೊರೆಯಲಿಲ್ಲ. ಈ ಹಿನ್ನೆಲೆಯಲ್ಲಿ ಏರಿಯಾ ಮ್ಯಾನೇಜರ್ ಯೋಗಾನಂದ್ ಅವರ ಬಳಿ ವಿಷಯ ತಿಳಿಸಿದರೂ ಅವರೂ ಸ್ಪಂದಿಸಿಲ್ಲ. ಈ ನಡುವೆ ಸಾಲದ ಹಣವನ್ನೇ ನೀಡದೇ ಎರಡನೇ ಕಂತಿನ ಇಎಂಐ ಹಣಕ್ಕಾಗಿ ಫೈನಾನ್ಸ್ ಕಂಪನಿಯವರು ಚೆಕ್ ಅನ್ನು 2023ರ ನವೆಂಬರ್ 10ರಂದು ಬ್ಯಾಂಕ್‌ಗೆ ಹಾಕಿದ್ದಾರೆ. ಆದರೆ ಖಾತೆಯಲ್ಲಿ ಹಣವಿಲ್ಲದ ಕಾರಣ ಚೆಕ್ ಬೌನ್ಸ್ ಆಗಿದೆ.

ತಮ್ಮ ನಿವೇಶನ ಫೈನಾನ್ಸ್ ಕಂಪನಿಯ ಹೆಸರಿಗೆ ಮಾರ್ಟ್‌ಗೇಜ್ ರಿಜಿಸ್ಟ್ರೇಷನ್ ಆಗಿದ್ದು, ನಿವೇಶನವನ್ನು ತಾವು ಮಾರಾಟ ಮಾಡಲು ಆಗದಂತಹ ಪರಿಸ್ಥಿತಿಗೆ ಚಂದ್ರಕಲಾ ಸಿಲುಕಿದ್ದಾರೆ. ನಿವೇಶನ ಫೈನಾನ್ಸ್ ಕಂಪನಿಗೆ ಅಡಮಾನವಾಗಿ 3 ತಿಂಗಳು ಕಳೆದರೂ ಸಾಲದ ಹಣ ಬಂದಿಲ್ಲ. ತಮ್ಮ ಪತಿ ಸಾವನ್ನಪ್ಪಿ 3 ತಿಂಗಳಾದರೂ ಅವರ ಹೆಸರಿನಲ್ಲಿ ಲೈಫ್ ಇನ್ಶೂರೆನ್ಸ್ ಮಾಡಿಸಿರುವುದಾಗಿ ಹೇಳುತ್ತಿರುವ ಫೈನಾನ್ಸ್ ಕಂಪನಿಯವರು ಇನ್ಶೂರೆನ್ಸ್ ಪಾಲಿಸಿಯ ಕಡತವನ್ನೂ ಕೊಡುತ್ತಿಲ್ಲ. ಹೀಗಾಗಿ ಫೈನಾನ್ಸ್ ಕಂಪನಿಯ ಈ ಮೂವರೂ ಅಧಿಕಾರಿಗಳೂ ತಮ್ಮ ನಿವೇಶನವನ್ನು ಫೈನಾನ್ಸ್ ಕಂಪನಿಯ ಹೆಸರಿಗೆ ಮಾರ್ಟ್‌ಗೇಜ್ ಮಾಡಿಕೊಂಡು ತಮಗೆ ಸಾಲದ ಹಣವನ್ನೂ ನೀಡದೇ ಮಾನಸಿಕ ಕಿರುಕುಳ ನೀಡಿ ಪತಿಯ ಸಾವಿಗೆ ಕಾರಣರಾಗಿದ್ದಾರೆ ಎಂದು ಚಂದ್ರಕಲಾ ಜ.18ರಂದು ನೀಡಿದ ದೂರನ್ನು ದಾಖಲಿಸಿಕೊಂಡ ಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್ ನೇತೃತ್ವದ ಪೊಲೀಸರ ತಂಡ ಇಂದು ಮೂವರು ಆರೋಪಿಗಳನ್ನು ಬಂಧಿಸಿ ನ್ಯಾಯಾಧೀಶರ ಗೃಹ ಕಚೇರಿಗೆ ಹಾಜರುಪಡಿಸಿದ್ದು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಎಂಟ್ರಿ ಪಾಸ್ ಕ್ಯೂಆರ್ ಕೋಡ್ ಸ್ಕ್ಯಾನ್ ಬಳಿಕವೇ ರಾಮಮಂದಿರ ಪ್ರವೇಶ

ಅಯೋಧ್ಯೆ: ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಆಗಮಿಸುವ ಅತಿಥಿಗಳಿಗೆ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರವೇಶ ಪಾಸ್‌ಗಳನ್ನು ಶುಕ್ರವಾರ ಬಿಡುಗಡೆಗೊಳಿಸಿದೆ. ಪ್ರವೇಶ ಪಾಸ್‌ನಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದ ಬಳಿಕವೇ ರಾಮಮಂದಿರದ ಒಳಗೆ ಪ್ರವೇಶ ಸಿಗಲಿದೆ ಎಂದು ಟ್ರಸ್ಟ್ ಹೇಳಿದೆ.



ಪಾಸ್‌ನ ಸ್ವರೂಪವನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿರುವ ಟ್ರಸ್ಟ್, ಪ್ರಾಣ ಪ್ರತಿಷ್ಠಾಪನೆ ಉತ್ಸವದಲ್ಲಿ ಪಾಲ್ಗೊಳ್ಳುವ ಗಣ್ಯರಿಗಾಗಿ ಈ ಮಾಹಿತಿ. ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರವು ನೀಡಿದ ಪ್ರವೇಶ ಪಾಸ್‌ನಲ್ಲಿ ನಮೂದಿಸಲಾದ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿದ ನಂತರವೇ ಭಗವಾನ್ ಶ್ರೀ ರಾಮಲಲ್ಲಾ ಸರ್ಕಾರ್ ಅವರ ಪ್ರಾಣ ಪ್ರತಿಷ್ಠಾಪನಾ ಉತ್ಸವಕ್ಕೆ ಪ್ರವೇಶವನ್ನು ಪಡೆಯಬಹುದು. ಆಮಂತ್ರಣ ಪತ್ರಿಕೆಯೊಂದೇ ಇದ್ದರೆ ಪ್ರವೇಶ ಇರುವುದಿಲ್ಲ. ಪ್ರವೇಶ ಪಾಸ್ ಹೇಗಿರುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿ ಪ್ರತಿಯನ್ನು ಲಗತ್ತಿಸಲಾಗಿದೆ ಎಂದು ಹೇಳಿದೆ. 3 ಸಾವಿರ ಅರ್ಚಕರು, ದಾನಿಗಳು, ರಾಜಕಾರಣಿಗಳು ಸೇರಿ ಏಳು ಸಾವಿರಕ್ಕೂ ಹೆಚ್ಚು ಅತಿಥಿಗಳಿಗೆ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಗಳನ್ನು ಕಳುಹಿಸಲಾಗಿದೆ.


ಮೈಸೂರು ತಾಲೂಕಿನ ಮರ್ಚಾ ಹೋಬಳಿಯ ಕುಪ್ಪೇಗಾಲ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ನಾಗೇಂದ್ರ, ಉಪಾಧ್ಯಕ್ಷರಾಗಿ ಕೃಷ್ಣ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಚುನಾವಣಾ ಅಧಿಕಾರಿ ಅಶ್ವಿನ್, ಸಂಘದ ನಿರ್ದೇಶಕರಾದ ಕೆ. ಉಮಾಶಂಕರ್, ಕೆ.ಪಿ.ಅನಿಲ್ ಕುಮಾರ್, ಮಂಜುನಾಥ್, ಸುರೇಶ್, ಸತೀಶ್, ಲೋಕೇಶ್, ಚಿಕ್ಕಾಮೇಗೌಡ, ರೋಹಿಣಿ, ಮೀನಾಕ್ಷಿ ಇತರರು ಉಪಸ್ಥಿತರಿದ್ದರು.

ಅಯೋಧ್ಯೆ ಮೇಲೆ ಉಗ್ರರ ಕರಿನೆರಳು: 3 ಅನುಮಾನಾಸ್ಪದ ವ್ಯಕ್ತಿಗಳ ಬಂಧನ

ಲಖನೌ: ಅಯೋಧ್ಯೆ ಶ್ರೀರಾಮ ಮಂದಿರ ಉದ್ಘಾಟನೆಗೆ ಸಿದ್ಧತೆಗಳು ಭರದಿಂದ ಸಾಗಿದ್ದು, ಈ ನಡುವಲ್ಲೇ ಭಯೋತ್ಪಾದಕ ನಿಗ್ರಹ ದಳ ಮೂವರು ಅನುಮಾನಾಸ್ಪದ ವ್ಯಕ್ತಿಗಳನ್ನು ಬಂಧನಕ್ಕೊಳಪಡಿಸಿದೆ ಎಂದು ಶುಕ್ರವಾರ ತಿಳಿದುಬಂದಿದೆ.

ಉತ್ತರ ಪ್ರದೇಶದ ವಿಶೇಷ ಪೊಲೀಸ್ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ್ ಕುಮಾರ್ ಅವರು ಮಾತನಾಡಿ, ಅಯೋಧ್ಯೆ ಜಿಲ್ಲೆಯಲ್ಲಿ ರಾಜ್ಯ ಭಯೋತ್ಪಾದನಾ ನಿಗ್ರಹ ದಳವು ಮೂವರು ಅನುಮಾನಾಸ್ಪದ ವ್ಯಕ್ತಿಗಳನ್ನು ವಶಕ್ಕೆ ಪಡೆದಿದೆ ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯ ಸರ್ಕಾರ ಮತ್ತು ಪೊಲೀಸ್ ಪ್ರಧಾನ ಕಚೇರಿಯ ಸೂಚನೆಯ ಮೇರೆಗೆ ನಡೆಸುತ್ತಿರುವ ತಪಾಸಣೆ ಅಭಿಯಾನದ ಭಾಗವಾಗಿ, ಅಯೋಧ್ಯೆ ಜಿಲ್ಲೆಯ ಯುಪಿ–ಎಟಿಎಸ್‌ನಿಂದ ಮೂವರು ಅನುಮಾನಾಸ್ಪದ ವ್ಯಕ್ತಿಗಳನ್ನು ಬಂಧಿಸಲಾಗಿದೆ. ಈ ಶಂಕಿತರನ್ನು ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಇಲ್ಲಿಯವರೆಗೆ ಯಾವುದೇ ಭಯೋತ್ಪಾದಕ ಸಂಘಟನೆಯೊಂದಿಗೆ ಅವರ ಸಂಪರ್ಕ ಬೆಳಕಿಗೆ ಬಂದಿಲ್ಲ ಎನ್ನಲಾಗಿದೆ. ಶ್ರೀರಾಮ ಮಂದಿರ ಉದ್ಘಾಟನೆಗೆ ಕ್ಷಣಗಣನೆ ಆರಂಭವಾಗಿದ್ದು, ಈ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಉತ್ತರ ಪ್ರದೇಶ ಸರ್ಕಾರ ಭದ್ರತೆಯನ್ನು ಹೆಚ್ಚಿಸಿದೆ. ಡ್ರೋಣ್‌ಗಳ ಮೂಲಕ ಕಣ್ಗಾವಲು ಹೆಚ್ಚಿಸಿದ್ದು, ನಗರದಲ್ಲಿ ಭದ್ರತೆಯನ್ನು ಬಿಗಿಗೊಳಿಸಿದೆ.


ಇತ್ತೀಚೆಗೆ ನಡೆದ ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್‌ಗೆ ನಿರ್ದೇಶಕರಾಗಿ ಆಯ್ಕೆ ಆದ ಶ್ರೀಮತಿ ಬಿ.ಎಸ್.ಲತಾ ಅವರನ್ನು ವಿವಿಧ ಮಹಿಳಾ ಸಂಘ ಸಂಸ್ಥೆಗಳ ಮುಖ್ಯಸ್ಥರು ಅಭಿನಂದಿಸಿದರು. ಚಿತ್ರದಲ್ಲಿ ರೇಖಾ ಚಂದನ್ (ವಿಕ್ರಾಂತ್ ದೇವೇಗೌಡ ಅವರ ಪುತ್ರಿ), ಸುಧಾ, ದೀಪ್ತಿ ಧನಲಕ್ಷ್ಮಿ, ಲಕ್ಷ್ಮಿ, ಚರಿಷ್ಮಾ ಇತರರು ಈ ವೇಳೆ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಲಾರಿ ಮುಷ್ಕರ ಹಿಂದಕ್ಕೆ

ಕೇಂದ್ರ ಸರ್ಕಾರ ನೂತನ ಕಾಯ್ದೆಯನ್ನು ಹಿಂಪಡೆಯದಿದ್ದರೆ ಹೋರಾಟವನ್ನು ತೀವ್ರಗೊಳಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು ಎಂದು ಬಿ.ಕೋದಂಡ ರಾಮು ಹೇಳಿದರು. ಹಿಟ್ ಅಂಡ್ ರನ್ ಕೇಸುಗಳಲ್ಲಿ ಚಾಲಕರಿಗೆ ದಂಡ ಹಾಗೂ ಕಠಿಣ ಜೈಲು ಶಿಕ್ಷೆ ಪ್ರಮಾಣ ಹೆಚ್ಚಿಸಿ ಕಾಯ್ದೆ ಜಾರಿಗೊಳಿಸುತ್ತಿರುವುದನ್ನು ಖಂಡಿಸಿ ಲಾರಿ ಮುಷ್ಕರ ಕೈಗೊಳ್ಳಲಾಗಿತ್ತು. ಚಾಲಕರ ಪರವಾಗಿ ನಮ್ಮ ಒಕ್ಕೂಟ ಮುಷ್ಕರ ಕೈಗೊಂಡಿತ್ತು. ತುರ್ತು ಸಭೆಯಲ್ಲಿ ಮುಷ್ಕರಕ್ಕೆ ಬೆಂಬಲ ನೀಡಿದ್ದ ಎಲ್ಲಾ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿ, ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಮೂರು ದಿನಗಳಿಂದ ನಡೆಯುತ್ತಿದ್ದ ಮುಷ್ಕರದಿಂದಾಗಿ ಕಟ್ಟಡ ನಿರ್ಮಾಣ ಸಾಮಗ್ರಿಗಳಾದ ಕಬ್ಬಿಣ, ಸಿಮೆಂಟ್, ಮರಳು, ಕಲ್ಲು, ಜಲ್ಲಿ, ತರಕಾರಿ, ಸಾಂಬಾರ ಪದಾರ್ಥಗಳು, ದ್ವಿದಳ ಧಾನ್ಯ, ಕೃಷಿ ಉತ್ಪನ್ನ, ಕೈಗಾರಿಕಾ ಕಚ್ಚಾ ಪದಾರ್ಥ, ಸಿದ್ಧ ಉತ್ಪನ್ನಗಳು ಸೇರಿದಂತೆ ಇನ್ನಿತರ ಸರಕು ಸಾಗಣೆ ವಾಹನಗಳನ್ನು ಸ್ಥಗಿತಗೊಳಿಸಿರುವುದರಿಂದ ಗ್ರಾಹಕರಿಗೆ ಬಿಸಿ ತಟ್ಟಿತ್ತು. ಔಷಧ, ಪಡಿತರ, ಡೀಸೆಲ್, ಪೆಟ್ರೋಲ್, ಗ್ಯಾಸ್‌ನಂತಹ ಅಗತ್ಯ ವಸ್ತುಗಳ ಸಾಗಣೆ ಮಾಡುವ ವಾಹನಗಳನ್ನು ಹೊರತುಪಡಿಸಿ ಮಧ್ಯಮ ಮತ್ತು ಭಾರೀ ಸರಕು ಸಾಗಣೆ ವಾಹನಗಳು, ರೈಲ್ವೆ ಗೂಡ್ಸ್ ಶೆಡ್ ವಾಹನಗಳ ಚಾಲಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ಅಯೋಧ್ಯೆಯ ಬಾಲರಾಮನ ದರ್ಶನ

ಶಂಖ, ಗದೆ, ಸ್ವಸ್ತಿಕ್, ವಿಷ್ಣು, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಹಾಗೂ ನೆತ್ತಿಯ ಮೇಲೆ ಸೂರ್ಯನಿದ್ದಾನೆ. ಶುಕ್ರವಾರ ಬೆಳಗ್ಗೆ ನಿಂತ ಭಂಗಿಯಲ್ಲಿರುವ ರಾಮಲಲ್ಲಾ ವಿಗ್ರಹದ ಮೊದಲ ಬಾರಿ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಲಾಯಿತು. ಮೂರ್ತಿಯನ್ನು ಬಿಳಿವಸ್ತ್ರದಿಂದ ಮುಚ್ಚಲಾಗಿತ್ತು. ನಂತರ ಕಣ್ಣಿಗಷ್ಟೇ ಬಟ್ಟೆ ಕಟ್ಟಿರುವ ರಾಮಲಲ್ಲಾ ವಿಗ್ರಹದ ಫೋಟೋಗಳು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡಿದವು. ಈಗ ಹಲವು ವಿಶೇಷತೆ ಹೊಂದಿರುವ ಪೂರ್ಣ ಮೂರ್ತಿಯ ಚಿತ್ರಗಳು ವೈರಲ್ ಆಗುತ್ತಿವೆ. ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ರಾಮಲಲ್ಲಾ ವಿಗ್ರಹದ ಫೋಟೋಗಳು ರಾರಾಜಿಸುತ್ತಿವೆ. ರಾಜಕೀಯ ನಾಯಕರು, ರಾಮಭಕ್ತರ ಫೇಸ್‌ಬುಕ್, ಎಕ್ಸ್ ಖಾತೆಗಳು ಹಾಗೂ ವಾಟ್ಸಪ್ ಸ್ಟೇಟಸ್‌ಗಳಲ್ಲೂ ಬಾಲರಾಮ ಮಿಂಚುತ್ತಿದ್ದಾನೆ. ಎಲ್ಲರೂ 'ಜೈ ಶ್ರೀರಾಮ್' ಘೋಷವಾಕ್ಯವನ್ನು ಮೂರ್ತಿಯ ಚಿತ್ರದೊಂದಿಗೆ ಹಂಚಿಕೊಂಡಿದ್ದಾರೆ.

ರಾಮಮಂದಿರದಡಿ ಭಕ್ತಿಯ ಭವಿಷ್ಯ ಭಂಡಾರ!

ಇದೊಂದು ಐತಿಹಾಸಿಕ ಮಾಹಿತಿಯ ಸಂಗ್ರಹವಾಗಿದ್ದು, ಭವಿಷ್ಯದ ಜನತೆಯೊಂದಿಗೆ ಸಂವಹನದ ವಿಧಾನವಾಗಿ, ಭವಿಷ್ಯದ ಪುರಾತತ್ವಶಾಸ್ತ್ರಜ್ಞರು ಅಥವಾ ಇತಿಹಾಸಕಾರರಿಗೆ ಸಹಾಯ ಮಾಡಲು ಇದನ್ನು ಬಳಸಲಾಗುತ್ತದೆ. ಟೈಮ್ ಕ್ಯಾಪ್ಸೂಲ್ ಸಹಾಯದಿಂದ ಭವಿಷ್ಯದ ಪೀಳಿಗೆಗಳು ಈಗಿನ ನಿರ್ದಿಷ್ಟ ಯುಗ, ಸಮಾಜ ಮತ್ತು ದೇಶದ ಬಗ್ಗೆ ಮಾಹಿತಿಯನ್ನು ಪಡೆಯಬಹುದು. ಸಾಮಾನ್ಯವಾಗಿ, ಈ ಟೈಮ್ ಕ್ಯಾಪ್ಸೂಲ್‌ಗಳನ್ನು ಕಟ್ಟಡಗಳ ಅಡಿಪಾಯದಲ್ಲಿ ಇರಿಸಲಾಗುತ್ತದೆ. ಸದ್ಯ ಈ ಟೈಮ್ ಕ್ಯಾಪ್ಸೂಲ್ ಅಯೋಧ್ಯೆ, ಭಗವಾನ್ ರಾಮನ ಬಗ್ಗೆ ಸಂದೇಶವನ್ನು ಸಂಸ್ಕೃತದಲ್ಲಿ ಹೊಂದಿರುತ್ತದೆ. ಇದನ್ನು ತಾಮ್ರದ ತಗಡಿನಲ್ಲಿ ಕೆತ್ತಿಸಿ, ಅದನ್ನು ಸುರಕ್ಷಿತವಾದ, ತುಕ್ಕು ಹಿಡಿಯದ, ಶಿಲೆಯ ಪೆಟ್ಟಿಗೆಯಲ್ಲಿ ಇರಿಸಲಾಗುತ್ತದೆ ಎಂದು ಹೇಳಲಾಗಿದೆ. ಸಂಸ್ಕೃತ ಭಾಷೆಯೇ ಯಾಕೆಂದರೆ ಈ ಭಾಷೆಯಲ್ಲಿ ಹೆಚ್ಚಿನ ಮಾಹಿತಿಯನ್ನು ಹೊಂದಿದ ವಾಕ್ಯಗಳನ್ನು ಕೆಲವೇ ಪದಗಳಲ್ಲಿ ರಚಿಸಲು ಸಾಧ್ಯ. ಈ ಟೈಮ್ ಸಮಯ ಕ್ಯಾಪ್ಸೂಲ್ ಅನ್ನು ಭೂಮಿ ಪೂಜೆಯ ದಿನ ಅಥವಾ ಪ್ರಾಣ ಪ್ರತಿಷ್ಠಾಪನೆಯ ದಿನ ಇರಿಸಲಾಗುವುದಿಲ್ಲ. ಏಕೆಂದರೆ ಅದು ಸಿದ್ಧವಾಗಲು ಇನ್ನೂ ಸಮಯ ತೆಗೆದುಕೊಳ್ಳುತ್ತದೆ. ಕನಿಷ್ಠ ಪದಗಳಲ್ಲಿ ಹೆಚ್ಚಿನ, ನಿಖರ ಮಾಹಿತಿಯನ್ನು ಬರೆಯಲು ತಜ್ಞರನ್ನು ಸಂಪರ್ಕಿಸಲಾಗಿದೆ.

ಟೈಮ್ ಕ್ಯಾಪ್ಸುಲ್ ವಿಶೇಷತೆ ಏನು: ಇದೊಂದು ಐತಿಹಾಸಿಕ ಮಾಹಿತಿಯ ಸಂಗ್ರಹವಾಗಿದ್ದು, ಅಲ್ಯೂಮಿನಿಯಂ, ಸ್ಟೇನ್‌ಲೆಸ್ ಸ್ಟೀಲ್ ಅಥವಾ ತಾಮ್ರದಂತಹ ಲೋಹಗಳಿಂದ ಟೈಮ್ ಕ್ಯಾಪ್ಸುಲ್ ಅನ್ನು ತಯಾರಿಸಲಾಗುತ್ತದೆ. ಸಾವಿರಾರು ವರ್ಷಗಳ ನಂತರವೂ ಅದು ಹಾಳಾಗದಂತೆ ಆಸಿಡ್ ಮುಕ್ತವಾಗಿಸಿ ಅದರ ಮೇಲೆ ಸಂದೇಶವನ್ನು ಬರೆಯಲಾಗುತ್ತದೆ. ಟೈಮ್ ಕ್ಯಾಪ್ಸುಲ್ ಕಂಟೇನರ್ 3 ಅಡಿ ಉದ್ದವಾಗಿರುತ್ತದೆ.

400 ವರ್ಷ ಹಿಂದಿನ ಕ್ಯಾಪ್ಸೂಲ್: 2017ರ ನ.30ರಂದು, ಸ್ಪೇನ್‌ನ ಬರ್ಗೋಸ್‌ನಲ್ಲಿರುವ ಜೀಸಸ್ ಕ್ರೈಸ್ಟ್ ಪ್ರತಿಮೆಯ ಅಡಿಯಲ್ಲಿ ನೆಲದೊಳಗೆ 400 ವರ್ಷಗಳಷ್ಟು ಹಳೆಯದಾದ ಕ್ಯಾಪ್ಸುಲ್ ಕಂಡುಬಂದಿತ್ತು. ಇದು 1777ರ ಕಾಲದ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮಾಹಿತಿಯನ್ನು ಹೊಂದಿದೆ. ತಜ್ಞರ ಪ್ರಕಾರ ಇದು ಅತ್ಯಂತ ಹಳೆಯ ಸಮಯದ ಕ್ಯಾಪ್ಸುಲ್ ಎನ್ನಲಾಗಿದೆ. ಕಾರ್ಯಕ್ರಮ ನೆರವೇರಿಸಲಿದ್ದು, ಗರ್ಭಗುಡಿಯಲ್ಲಿ ಈಗಾಗಲೇ ರಾಮ ಲಲ್ಲಾನ ಮೂರ್ತಿಯನ್ನು ಇರಿಸಲಾಗಿದೆ.

ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟ

ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ನೀತಿ ಸಂಹಿತೆ ಜಾರಿಗೆ ಮುನ್ನ ಶಾಸಕರ ಕ್ಷೇತ್ರಗಳಿಗೆ ಅನುದಾನ ಬಿಡುಗಡೆ ಮಾಡಿ ಪ್ರಮುಖ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲು ಮುಖ್ಯಮಂತ್ರಿ ಅವರು ಪ್ರತಿ ಕ್ಷೇತ್ರಕ್ಕೆ ತಲಾ 25 ಕೋಟಿ ರೂ. ಬಿಡುಗಡೆಗೆ ಮುಂದಾಗಿದ್ದಾರೆ. 17ನೇ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕರ್ನಾಟಕದ 28 ಕ್ಷೇತ್ರಗಳಿಗೆ ಏಪ್ರಿಲ್ 18 ಮತ್ತು 23 ರಂದು ಎರಡು ಹಂತಗಳಲ್ಲಿ ಮತದಾನ ನಡೆದಿತ್ತು. ಫಲಿತಾಂಶ ಪ್ರಕಟಗೊಂಡ ನಂತರ ಬಿಜೆಪಿ ಮೊದಲ ಬಾರಿಗೆ 25 ಸ್ಥಾನಗಳಲ್ಲೂ, ಕಾಂಗ್ರೆಸ್, ಜೆಡಿಎಸ್ ಮತ್ತು ಪಕ್ಷೇತರರು ತಲಾ ಒಂದು ಸ್ಥಾನಗಳಲ್ಲಿ ಜಯ ಗಳಿಸಿದ್ದರು. ಅಂದು ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಇತ್ತು, ಅಂದಿನ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ, ಹಿರಿಯ ನಾಯಕರಾದ ಕೆ.ಎಚ್.ಮುನಿಯಪ್ಪ, ವೀರಪ್ಪ ಮೊಯಿಲಿ, ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಬಿಜೆಪಿ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ವಿರುದ್ಧ ಸೋಲನನುಭವಿಸಿದ್ದರು.

87.17 ಲಕ್ಷ ರೂ. ವಂಚನೆ

ನಾನು ವಿವಿಧ ದಿನಾಂಕಗಳಲ್ಲಿ ಪಾವತಿಸಿದ ಹಣ ಸೇರಿ ಒಟ್ಟು 87.17 ಲಕ್ಷ ರೂ. ಹಣವನ್ನು ಆನ್‌ಲೈನ್ ವಂಚಕರು ನನ್ನ ಬ್ಯಾಂಕ್ ಖಾತೆಯಿಂದ ದೋಚಿದ್ದಾರೆ ಎಂದು ಅಶ್ವಿನಿ ಸೆನ್ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣಗಳ ಮೂಲಕ ನನ್ನನ್ನು ಆನ್‌ಲೈನ್‌ನಲ್ಲಿ ಸಂಪರ್ಕಿಸಿದ ವಂಚಕರು, ಟ್ರೇಡಿಂಗ್‌ನಲ್ಲಿ ಹಣ ದ್ವಿಗುಣ ಮಾಡಿಸುವ ಆಸೆ ತೋರಿಸಿ ಬ್ಯಾಂಕ್ ಖಾತೆಯಿಂದ ಹಣ ವರ್ಗಾಯಿಸಿಕೊಂಡಿದ್ದಾರೆ. ಅವರು ನೀಡಿದ ಭರವಸೆ ನೀಡಿ ಬ್ಯಾಂಕ್ ಡೀಟೇಲ್ಸ್, ಓಟಿಪಿ, ಆಧಾರ್ ಮತ್ತು ಇತರ ವೈಯಕ್ತಿಕ ಮಾಹಿತಿ ನೀಡಿದ್ದೆ. ಆದರೆ, ನನಗೆ ಯಾವುದೇ ಹಣ ಬರಲಿಲ್ಲ. ಬದಲಾಗಿ ನನ್ನ 87.17 ಲಕ್ಷ ರೂ. ಮೋಸದಿಂದ ವಂಚಕರ ಪಾಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಆನ್‌ಲೈನ್ ಟ್ರೇಡಿಂಗ್ ಬ್ಯುಸಿನೆಸ್‌ನಲ್ಲಿ ಸಂಪರ್ಕದಲ್ಲಿದ್ದ ವ್ಯಕ್ತಿಗಳ ಫೋನ್ ನಂಬರ್‌ಗೆ ಸಂಪರ್ಕಿಸಲು ಯತ್ನಿಸಿದರೂ, ಅವರು ಸಿಗುತ್ತಿಲ್ಲ. ಹಾಗೆಯೇ ನನ್ನ ಬ್ಯಾಂಕ್ ಖಾತೆಯಲ್ಲಿ ಡೆಪಾಸಿಟ್ ಆಗಿದ್ದ 30 ಲಕ್ಷ ರೂ. ಎಲ್‌ಐಸಿ ಕಮಿಷನ್ ಹಣ ಹಾಗೂ 25 ಲಕ್ಷ ರೂ. ಸಾಲ ಮಂಜೂರಾಗಿದ್ದ ಹಣದ ಮಾಹಿತಿಯನ್ನು ವಂಚಕರಿಗೆ ಯಾರೋ ಸೋರಿಕೆ ಮಾಡಿದ್ದಾರೆ ಎಂದು ಅಶ್ವಿನಿ ಆರೋಪಿಸಿದ್ದಾರೆ.

ಎರಡು ಪ್ರತ್ಯೇಕ ಪ್ರಕರಣ: ಕೆಲಸ ಕೊಡಿಸುವುದಾಗಿ ಹಾಗೂ ಆನ್‌ಲೈನ್ ಟ್ರೇಡಿಂಗ್ ನೆಪದಲ್ಲಿ ಮತ್ತಿಬ್ಬರು 32.43 ಲಕ್ಷ ರೂ. ಹಣ ಕಳೆದುಕೊಂಡಿದ್ದಾರೆ. ಹಣ ಹೂಡಿಕೆ ಮಾಡಿ ಲಾಭ ಗಳಿಸಿಕೊಡುವುದಾಗಿ ನಂಬಿಸಿದ ಸೈಬರ್ ವಂಚಕರು, ಎಸ್. ಹರ್ಷ ಎಂಬುವರಿಂದ 24.6 ಲಕ್ಷ ರೂ. ಹಾಗೂ ಪ್ರೀತಿ ಅವರಿಂದ 7.83 ಲಕ್ಷ ರೂ. ಹಣ ಲಪಟಾಯಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಸೆನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್, ತಂತ್ರಜ್ಞಾನ ಬಳಸಿ ಆನ್‌ಲೈನ್ ವಂಚಕರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ. ಆನ್‌ಲೈನ್ ವಂಚನೆ ಪ್ರಕರಣ ನಡೆಯುತ್ತಿರುವ ಬಗ್ಗೆ ಮಾಹಿತಿ ತಿಳಿದಿದ್ದರೂ, ತಿಳುವಳಿಕೆ ಇರುವ ವಿದ್ಯಾವಂತರೇ ಹಣದ ಆಸೆಗೆ ಬಲಿಯಾಗಿ ತಾವೇ ಹಣ ಕಳೆದುಕೊಳ್ಳುತ್ತಿದ್ದಾರೆ. ಈ ರೀತಿಯಲ್ಲಿ ಆನ್‌ಲೈನ್ ವಹಿವಾಟು ಮಾಡಬೇಡಿ, ನಿಮ್ಮ ಬ್ಯಾಂಕ್ ಅಥವಾ ಯಾವುದೇ ಮಾಹಿತಿಯನ್ನು ಯಾರಿಗೂ ನೀಡಬೇಡಿ ಎಂದು ಅವರು ಸಲಹೆ ನೀಡಿದ್ದಾರೆ.

ಮೂವರು ಅಯ್ಯಪ್ಪಸ್ವಾಮಿ ಭಕ್ತರು ಸಾವು

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ನಂಜನಗೂಡು ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಬಸವರಾಜು ಹಾಗೂ ಸಿಬ್ಬಂದಿ, ಅಗ್ನಿಶಾಮಕ ಸಿಬ್ಬಂದಿಯನ್ನು ಕರೆಸಿಕೊಂಡು ಸ್ಥಳೀಯ ಈಜುಗಾರರ ನೆರವಿನಿಂದ ಕಾರ್ಯಾಚರಣೆ ನಡೆಸಿ, ಮಧ್ಯಾಹ್ನದ ವೇಳೆಗೆ ಮೂವರ ದೇಹಗಳನ್ನು ಹೊರತೆಗೆಸಿದರು.

ಆ ಪೈಕಿ ಇನ್ನೂ ಉಸಿರಾಡುತ್ತಿದ್ದ ಗವಿರಂಗ ಅವರನ್ನು ನಂಜನಗೂಡು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರೂ, ಮಾರ್ಗಮಧ್ಯೆ ಕೊನೆಯುಸಿರೆಳೆದರು. ಪ್ರಕರಣ ದಾಖಲಿಸಿಕೊಂಡಿರುವ ನಂಜನಗೂಡು ಪಟ್ಟಣ ಠಾಣೆ ಪೊಲೀಸರು, ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ದೇಹಗಳನ್ನು ಸಂಜೆ ವಾರಸುದಾರರಿಗೆ ಒಪ್ಪಿಸಿದರು.

ವಿಷಯ ತಿಳಿಯುತ್ತಿದ್ದಂತೆಯೇ ಆಸ್ಪತ್ರೆ ಬಳಿ ತೆರಳಿದ ಶಾಸಕ ದರ್ಶನ್ ಧ್ರುವನಾರಾಯಣ, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ, ಮರಣೋತ್ತರ ಪರೀಕ್ಷೆ ನಡೆಸಲು ನೆರವಾದರಲ್ಲದೆ, ಅಂತ್ಯಕ್ರಿಯೆಗೆ ವೈಯಕ್ತಿಕ ನೆರವು ನೀಡಿದರು. ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ. ಎನ್. ನಂದಿನಿ, ನಂಜನಗೂಡು ಉಪವಿಭಾಗದ ಡಿವೈಎಸ್ಪಿ ಗೋವಿಂದರಾಜು ಭೇಟಿ ನೀಡಿ, ದೇಹಗಳನ್ನು ವಾರಸುದಾರರಿಗೆ ಹಸ್ತಾಂತರಿಸಿದರು.

ಮೈಸೂರಲ್ಲಿ ಕರ್ನಾಟಕ-ಗೋವಾ ರಣಜಿ ಪಂದ್ಯ

ಗೋವಾ ಮೊದಲ ದಿನದ ಅಂತ್ಯಕ್ಕೆ 8 ವಿಕೆಟ್ ನಷ್ಟಕ್ಕೆ 228 ರನ್

ಬ್ಯಾಟ್ಸ್‌ಮನ್‌ಗಳನ್ನು ಕಾಡಿದ ಕರ್ನಾಟಕದ ಬೌಲರ್‌ಗಳು



ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಮೈದಾನದಲ್ಲಿ ಶುಕ್ರವಾರ ನಡೆದ ಕರ್ನಾಟಕ-ಗೋವಾ ನಡುವಿನ ರಣಜಿ ಪಂದ್ಯದಲ್ಲಿ ಗೋವಾ ವಿಕೆಟ್ ಪಡೆದು ಸಂಭ್ರಮಿಸುತ್ತಿರುವ ಕರ್ನಾಟಕದ ಆಟಗಾರರು.



ಬ್ಯಾಟಿಂಗ್‌ಗಾಗಿ ಕಾಯುತ್ತಿರುವ ಗೋವಾ ಆಟಗಾರ ಅರ್ಜುನ್ ತೆಂಡುಲ್ಕರ್ (ಸಚಿನ್ ತೆಂಡುಲ್ಕರ್ ಪುತ್ರ)

ಮೈಸೂರು,ಜ.19(ಎಂಟಿವೈ)- ಪ್ರತಿಷ್ಠಿತ ರಣಜಿ ಟ್ರೋಫಿ ಪಂದ್ಯಾವಳಿಯ ಕರ್ನಾಟಕ-ಗೋವಾ ನಡುವಿನ ಕ್ರಿಕೆಟ್ ಪಂದ್ಯ ಮೈಸೂರಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಮೈದಾನದಲ್ಲಿ ಶುಕ್ರವಾರ ಆರಂಭವಾಗಿದ್ದು, ಮೊದಲ ದಿನದ ಅಂತ್ಯಕ್ಕೆ ಗೋವಾ 8 ವಿಕೆಟ್ ಕಳೆದುಕೊಂಡು 228ರನ್ ಗಳಿಸಿದರೆ, ಉತ್ತಮ ಪ್ರದರ್ಶನ ನೀಡಿದ ಕರ್ನಾಟಕದ ಆಟಗಾರರು ಗಮನ ಸೆಳೆದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಗೋವಾ ತಂಡಕ್ಕೆ ಕರ್ನಾಟಕದ ಬೌಲರ್‌ಗಳು ಆರಂಭಿಕ ಆಘಾತ ನೀಡಿದರು. ಆದರೆ ಸ್ನೇಹಲ್ ಕೌತಂಕರ್(83) ಅರ್ಧ ಶತಕ, ನಾಯಕ ದರ್ಶನ್ ಮಿಸಲ್(39) ಸಮಯೋಚಿತ ಆಟದಿಂದ ಗೋವಾ ಗೌರವಯುತ ಮೊತ್ತ ದಾಖಲಿಸಿತು. ಮೊದಲ ದಿನದ ಅಂತ್ಯಕ್ಕೆ 87 ಓವರ್‌ನಲ್ಲಿ 8 ವಿಕೆಟ್ ಕಳೆದುಕೊಂಡು 228 ರನ್ ಗಳಿಸಿತು. ಕರ್ನಾಟಕದ ಬೌಲರ್ ವಿ.ವೈಶಾಕ್ 45 ರನ್‌ಗೆ 3 ವಿಕೆಟ್, ರೋಹಿತ್‌ಕುಮಾರ್ 66 ರನ್ ನೀಡಿ 3 ವಿಕೆಟ್ ಪಡೆದು ಗೋವಾ ಆಟಗಾರರಿಗೆ ಸಿಂಹಸ್ವಪ್ನ ಎನಿಸಿದರು.

ಇನ್ನಿಂಗ್ಸ್ ಆರಂಭಿಸಿದ ಗೋವಾ ತಂಡ 3.4 ಓವರ್‌ನಲ್ಲಿ 7 ರನ್ ಗಳಿಸಿದ್ದಾಗ ವೈಶಾಕ್ ಬೌಲಿಂಗ್ ಆರಂಭಿಕ ಆಟಗಾರ ಇಶಾನ್ ಗಡೇಕರ್(6), ಶರತ್ ಹಿಡಿದ ಕ್ಯಾಚ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ತೆರಳಿದರು. ಬಳಿಕ ಕ್ರೀಸ್‌ಗೆ ಬಂದ ಮೂರನೇ ಕ್ರಮಾಂಕದ ಆಟಗಾರ ಕೆ.ವಿ.ಸಿದ್ದಾರ್ಥ 2 ರನ್ ಗಳಿಸಿದ್ದಾಗ ಕೌಶಿಕ್ ಬೌಲಿಂಗ್‌ನಲ್ಲಿ ನಿಕಿನ್ ಜೋಸ್‌ಗೆ ಕ್ಯಾಚ್ ನೀಡಿ ಔಟಾದರು. ಉತ್ತಮ ಆಟದ ಭರವಸೆ ಮೂಡಿಸಿದ್ದ ಮತ್ತೊಬ್ಬ ಆರಂಭಿಕ ಆಟಗಾರ ಸುಯಶ್ ಪ್ರಭುದ್ದೇಸಾಯ್ ತಂಡಕ್ಕೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ವೈಯಕ್ತಿಕವಾಗಿ 24 ರನ್ ಗಳಿಸಿದ್ದಾಗ, ತಂಡದ ಮೊತ್ತ 45ರನ್ ಆಗಿದ್ದಾಗ ಸುಯಶ್ ರೋಹಿತ್ ಕುಮಾರ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ನಿರ್ಗಮಿಸಿದರು.

ಸಂಕ್ಷಿಪ್ತ ಸ್ಕೋರ್
ಗೋವಾ ಮೊದಲ ಇನ್ನಿಂಗ್ಸ್:
ದಿನದ ಅಂತ್ಯಕ್ಕೆ 87 ಓವರ್‌ನಲ್ಲಿ 8 ವಿಕೆಟ್ ನಷ್ಟಕ್ಕೆ 228 ರನ್

ಆ ನಂತರ ಜೊತೆಗೂಡಿದ ಸ್ನೇಹಲ್ ಕೌತಂಕರ್ ಹಾಗೂ ನಾಯಕ ದರ್ಶನ್ ಮಿಸಲ್ ಮುರಿಯದ ನಾಲ್ಕನೇ ವಿಕೆಟ್‌ಗೆ 82 ರನ್ ಕಲೆ ಹಾಕಿದರು. ಈ ವೇಳೆ 39 ರನ್ ಗಳಿಸಿದ್ದ ನಾಯಕ ದರ್ಶನ್, ರೋಹಿತ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಶರತ್ ಅವರ ಸ್ಟಂಪ್‌ಗೆ ಬಲಿಯಾದರು. ನಂತರ ದೀಪ್‌ರಾಜ್ ಗಾಂವ್ಕರ್ ಯಾವುದೇ ರನ್ ಗಳಿಸದೆ ರೋಹಿತ್ ಕುಮಾರ್ ಮೂರನೇ ಬಲಿಯಾದರು. ಬಳಿಕ ತಂಡದ ಮೊತ್ತ 70.1 ಓವರ್‌ನಲ್ಲಿ 181ರನ್ ಆಗಿದ್ದಾಗ 19ರನ್ ಗಳಿಸಿದ್ದ ವಿಕೆಟ್ ಕೀಪರ್ ಸಮರ್ ದುಬಶಿ, ವೈಶಾಕ್ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ಒಂದೆಡೆ ವಿಕೆಟ್ ಉರುಳುತ್ತಿದ್ದರೂ ಕ್ರೀಸ್‌ನಲ್ಲಿದ್ದ ಸ್ನೇಹಲ್ ಕೌತಂಕರ್ 83ರನ್ ಗಳಿಸಿದ್ದಾಗ ವೆಂಕಟೇಶ್ ಬೌಲಿಂಗ್‌ನಲ್ಲಿ ಎಸ್.ಜೆ.ನಿಕಿನ್ ಜೋಸ್‌ಗೆ ಕ್ಯಾಚ್ ನೀಡಿ ತಂಡದ 7ನೇ ಬಲಿಯಾಗಿ ಹೊರ ನಡೆದರು. ಆಗ ತಂಡದ ಮೊತ್ತ 75 ಓವರ್‌ನಲ್ಲಿ 7 ವಿಕೆಟ್ ನಷ್ಟಕ್ಕೆ 196ರನ್ ಆಗಿತ್ತು. ಈ ವೇಳೆ 8ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಸಚಿನ್ ತೆಂಡುಲ್ಕರ್ ಪುತ್ರ ಅರ್ಜುನ್ ತೆಂಡುಲ್ಕರ್, ಮತ್ತೊಬ್ಬ ಆಟಗಾರ ಮೋಹಿತ್ ರೆಡ್ಕರ್ ಜೊತೆ ಸೇರಿ ಇನ್ನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು. ಈ ವೇಳೆ 9ನೇ ಕ್ರಮಾಂಕದ ಆಟಗಾರ ಮೋಹಿತ್ 16 ರನ್ ಗಳಿಸಿದ್ದಾಗ ವೈಶಾಕ್ ಬೌಲಿಂಗ್‌ನಲ್ಲಿ ಬೋಲ್ಡ್ ಆಗಿ ವಿಕೆಟ್ ಒಪ್ಪಿಸಿದರು. ದಿನದ ಅಂತ್ಯದ ವೇಳೆ ಅರ್ಜುನ್ ತೆಂಡುಲ್ಕರ್ 45 ಎಸೆತ ಎದುರಿಸಿ 10 ರನ್ ಗಳಿಸಿ ಅಜೇಯರಾಗುಳಿದರೆ 10ನೇ ಕ್ರಮಾಂಕ ಆಟಗಾರ ಹೆರಂಬ್ ಪರಾಬ್ 6 ರನ್‌ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಕರ್ನಾಟಕದ ಪರ ವಿ.ವೈಶಾಕ್ 18 ಓವರ್‌ನಲ್ಲಿ 45 ರನ್ ನೀಡಿ 3 ವಿಕೆಟ್ ಪಡೆದರೆ, ರೋಹಿತ್‌ಕುಮಾರ್ 23 ಓವರ್‌ನಲ್ಲಿ 66 ರನ್ ನೀಡಿ 3 ವಿಕೆಟ್ ಗಳಿಸಿದರು. ಕೌಶಿಕ್ 22 ಓವರ್‌ನಲ್ಲಿ 36ರನ್ ನೀಡಿ 1 ವಿಕೆಟ್, ಎಂ.ವೆಂಕಟೇಶ್ 14 ಓವರ್‌ನಲ್ಲಿ 25 ರನ್ ನೀಡಿ 1 ವಿಕೆಟ್ ಪಡೆದರು. ಶುಭಂಗ್ ಹೆಗಡೆ 8 ಓವರ್‌ನಲ್ಲಿ 27 ರನ್, ಮಯಾಂಕ್ ಅಗರ್‌ವಾಲ್ 2 ಓವರ್‌ನಲ್ಲಿ 13 ರನ್ ನೀಡಿ ಗಮನ ಸೆಳೆದರು.



ಮೈಸೂರು ತಾಲೂಕಿನ ವರಕೋಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ಶುಕ್ರವಾರ ನಡೆಯಿತು. ಚುನಾವಣೆಯಲ್ಲಿ ಸಂಘದ ಅಧ್ಯಕ್ಷರಾಗಿ ಕರೀಗೌಡ ಆಯ್ಕೆಯಾದರು. ಈ ವೇಳೆ ತಾಪಂ ಮಾಜಿ ಸದಸ್ಯ ಮುದ್ದರಾಮೇಗೌಡ, ಮುಖಂಡರಾದ ಬಡಗಲಹುಂಡಿ ಶಿವಣ್ಣ, ಬಸವರಾಜು, ಶಂಕರ್, ಸ್ವಾಮಿ, ವರಕೋಡು ಬಾಲು ಸೇರಿದಂತೆ ಇನ್ನಿತರರು ಇದ್ದರು.

ತ್ಯಾಜ್ಯ ನಿರ್ವಹಣೆ ಕುರಿತು ಬೀದಿ ನಾಟಕ, ಜಾಥಾ ಮೂಲಕ ಜಾಗೃತಿ



ಮೈಸೂರು, ಜ.19(ಎಂಕೆ)- ನಗರದ ರಾಮಸ್ವಾಮಿ ವೃತ್ತದಲ್ಲಿ ಕರ್ನಾಟಕ ಎನ್‌ಸಿಸಿ ಮಹಿಳಾ ಕೆಡೆಟ್‌ಗಳು ತ್ಯಾಜ್ಯ ನಿರ್ವಹಣೆ ಕುರಿತು ಬೀದಿ ನಾಟಕ ಹಾಗೂ ಜಾಥಾ ಮೂಲಕ ಜಾಗೃತಿ ಮೂಡಿಸಿದರು.

ಗುಡ್ ಶೆಫರ್ಡ್ ಕ್ಯಾನ್ವೆಂಟ್‌ನ ಮಹಿಳಾ ಎನ್‌ಸಿಸಿ ಕೆಡೆಟ್‌ಗಳು ತ್ಯಾಜ್ಯ ನಿರ್ವಹಣೆಯ ಕುರಿತ ಜಾಗೃತಿ ಫಲಕಗಳನ್ನಿಡಿದು ರಾಮಸ್ವಾಮಿ ವೃತ್ತದಿಂದ ಜಿಲ್ಲಾ ನ್ಯಾಯಾಲಯದವರೆಗೆ ಜಾಗೃತಿ ಜಾಥಾ ನಡೆಸಿದರು. ಬಳಿಕ ಕೋರ್ಟ್ ಎದುರು ಬೀದಿ ನಾಟಕದ ಮೂಲಕ ಸಾರ್ವಜನಿಕರು ತ್ಯಾಜ್ಯ ನಿರ್ವಹಣೆ ಮಾಡುವುದು ಹಾಗೂ ಒಣ ಕಸ-ಹಸಿ ಕಸ ಬೇರ್ಪಡಿಸುವ ಕುರಿತು ಅರಿವು ಮೂಡಿಸಿದರು. ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಕರ್ನಲ್ ರಾಜೀವ್ ಕುಮಾರ್, ಆಡಳಿತಾಧಿಕಾರಿ ಪಿ. ಎಸ್.ಸಂಗೀತಾ ಜಾಗೃತಿ ಜಾಥಾಗೆ ಚಾಲನೆ ನೀಡಿದರು. ಸಬ್ ಮೇಜರ್ ವಿಕೆ ಮಿಶ್ರಾ, ಅಂತೋನಿ ಯಮ್ಮಾಳ್, ಅಸೋಸಿಯೇಟ್ ಎನ್‌ಸಿಸಿ ಅಧಿಕಾರಿ, ಎನ್‌ಸಿಸಿ ಹಾಗೂ ಗುಡ್ ಶೆಫರ್ಡ್ ಕ್ಯಾನ್ವೆಂಟ್‌ನ ಸಿಬ್ಬಂದಿ ಭಾಗವಹಿಸಿದ್ದರು.

ಪಿಎಸ್‌ಐ ಮರುಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪ

ಬೆಂಗಳೂರು, ಜನವರಿ 19: 545 ಪಿಎಸ್‌ಐ ಹುದ್ದೆಗಳ ನೇಮಕಾತಿಯಲ್ಲಿ ಭಾರೀ ಅಕ್ರಮ ನಡೆದ ಹಿನ್ನೆಲೆಯಲ್ಲಿ ಇದೀಗ ಮರು ಪರೀಕ್ಷೆ ನಡೆಸಲಾಗುತ್ತಿದೆ. ಇದೇ ಜನವರಿ 23ರಂದು ಮರು ಪರೀಕ್ಷೆ ನಡೆಯಲಿದ್ದು, ಇದಕ್ಕೆ ಅಭ್ಯರ್ಥಿಗಳು ಸಹ ತಯಾರಿ ಮಾಡಿಕೊಂಡಿದ್ದಾರೆ. ಆದರೆ, ಈಗ ಪಿಎಸ್‌ಐ ಮರು ಪರೀಕ್ಷೆಯ ಪ್ರಶ್ನೆ ಪತ್ರಿಕೆಯೂ ಸೋರಿಕೆಯಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಇಂಟೆಲಿಜೆನ್ಸ್ ವಿಭಾಗದ ಸಬ್ ಇನ್ಸ್‌ಪೆಕ್ಟರ್‌ವೊಬ್ಬರು ಮಾತನಾಡಿದ್ದಾರೆ ಎನ್ನಲಾದ ಆಡಿಯೋ ವೈರಲ್ ಆಗಿದ್ದು, ಈ ಸಂಬಂಧ ಅಭ್ಯರ್ಥಿಗಳು ಪ್ರತಿಭಟನೆಗಿಳಿದಿದ್ದಾರೆ. ಇದರ ಬೆನ್ನಲ್ಲೇ ಇದೀಗ ಸಿಸಿಬಿ ಪೊಲೀಸರು, ಆ ಸಬ್‌ಇನ್ಸ್‌ಪೆಕ್ಟರ್‌ನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆಗೊಳಪಡಿಸಿದ್ದಾರೆ.

ಎರಡೂ ಪರೀಕ್ಷೆಗಳ ಅಕ್ರಮಕ್ಕೆ ಸಂಚು ರೂಪಿಸಿದ್ದಾರೆ: ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಾಂತಕುಮಾರ್ ಪ್ರತಿಕ್ರಿಯಿಸಿದ್ದು, 1 ಲಕ್ಷ 60 ಸಾವಿರ ಅಭ್ಯರ್ಥಿಗಳು ಸಿಟಿಐ ಪರೀಕ್ಷೆ ಬರೆಯಲಿದ್ದಾರೆ. ಪಿಎಸ್‌ಐ ಒಬ್ಬರು ಮಾತನಾಡಿದ ಆಡಿಯೋ ಲಭ್ಯವಾಗಿದೆ. ಪ್ರಶ್ನೆ ಪತ್ರಿಕೆ ನಾವೇ ಕೊಡುತ್ತೇವೆ, ಪೋಸ್ಟಿಂಗ್ ಕೊಡಿಸುತ್ತೇವೆ ಎಂದಿದ್ದಾರೆ. ಪಿಎಸ್‌ಐ ಪರೀಕ್ಷೆ ಕೂಡ ಬರೆಸುತ್ತೇವೆ ಅಂತಾ ಮಾತನಾಡಿದ್ದಾರೆ. ಕೆಪಿಎಸ್‌ಸಿ ಬೋರ್ಡ್ ಮುಂದೆ ವಿದ್ಯಾರ್ಥಿಗಳಿಗೆ ಪ್ರವೇಶ ಇಲ್ಲ. ಆದರೆ ಪೋಷಕರನ್ನು ಭೇಟಿ ಮಾಡಲು ಒಳಗಡೆ ಕರೆಸಿಕೊಳ್ಳುತ್ತಿದ್ದಾರೆ ಎಂದಿದ್ದಾರೆ.

ಜ.21ರಂದು ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್ ಪರೀಕ್ಷೆ ಇದೆ. ಜ.23ರಂದು ನಡೆಯುವ ಪಿಎಸ್‌ಐ ಪರೀಕ್ಷೆಗೆ ಸಂಚು ನಡೆಸಿದ್ದಾರೆ. ಎರಡೂ ಪರೀಕ್ಷೆಗಳ ಅಕ್ರಮಕ್ಕೆ ಸಂಚು ರೂಪಿಸಿದ್ದಾರೆ. ಒಂದು ಹುದ್ದೆಗೆ 80 ಲಕ್ಷ ರೂಪಾಯಿ ಡಿಮ್ಯಾಂಡ್ ಮಾಡುತ್ತಿದ್ದಾರೆ. ಆಡಿಯೋದಲ್ಲಿ ಪವನ್ ಮತ್ತು ರಜತ್ ಎಂಬುವರ ಹೆಸರು ಉಲ್ಲೇಖಿಸಿದ್ದಾರೆ ಎಂದು ಹೇಳಿದ್ದಾರೆ. ರಾಜಕಾರಣಿಗಳ ಹೆಸರು ಕೂಡ ಬಳಕೆ ಮಾಡಿದ್ದಾರೆ. ಪರೀಕ್ಷೆ ಮುಂದೂಡುವಂತೆ ಕೆಪಿಎಸ್‌ಸಿಗೆ ನಾವು ಆಗ್ರಹಿಸುತ್ತಿದ್ದೇವೆ. ಚಂದ್ರಲೇಔಟ್ ಪೊಲೀಸ್ ಠಾಣೆಗೆ ಈಗಾಗಲೇ ದೂರು ನೀಡಿದ್ದೇವೆ. ಸಿಬಿಆರ್‌ಟಿ ಮೂಲಕ ಪರೀಕ್ಷೆ ನಡೆಸುವಂತೆ ಕಾಂತಕುಮಾರ್ ಆಗ್ರಹಿಸಿದ್ದಾರೆ.

ಭಾರತದ ಬಳಿಕ ಚಂದ್ರನ ನೆಲದ ಮೇಲೆ ಕಾಲಿಟ್ಟ ಜಪಾನ್‌ನ ಸ್ಲಿಮ್

ನವದೆಹಲಿ, ಜ. 19- ಭಾರತದ ಚಂದ್ರಯಾನ-3 ಬಳಿಕ ಜಪಾನ್‌ನ ಬಹುನಿರೀಕ್ಷಿತ ಸ್ಲಿಮ್ ನೌಕೆ ಚಂದ್ರನ ಮೇಲೆ ಯಶಸ್ವಿಯಾಗಿ ಕಾಲಿಟ್ಟಿದೆ. ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಷನ್ ಏಜೆನ್ಸಿ ಅಂದರೆ ಜಾಕ್ಸಾ ಸ್ಲಿಮ್ ನೌಕೆಯನ್ನು ಯಶಸ್ವಿಯಾಗಿ ಚಂದ್ರನ ಮೇಲೆ ಲ್ಯಾಂಡ್ ಮಾಡುವಲ್ಲಿ ಯಶಸ್ವಿಯಾಗಿದೆ. ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಶನ್ ಏಜೆನ್ಸಿ (JAXA) ಸ್ಲಿಮ್ ಇಳಿಯಲು ಆರಂಭ ಮಾಡಿದ ನಂತರ 20 ನಿಮಿಷಗಳಲ್ಲಿ ಲ್ಯಾಂಡಿಂಗ್ ಪ್ರಯತ್ನವನ್ನು ಪೂರ್ಣಗೊಳಿಸಲಾಗುವುದು ಎಂದು ತಿಳಿಸಿತ್ತು. 2023ರ ಸೆಪ್ಟೆಂಬರ್ 6 ರಂದು ಉಡಾವಣೆಯಾಗಿದ್ದ ಸ್ಲಿಮ್ ಸಣ್ಣ ಕಾರಿನ ಗಾತ್ರದ ಬಾಹ್ಯಾಕಾಶ ನೌಕೆಯಾಗಿದೆ.

ಸಿಎಆರ್ ಕಾನ್ಸ್‌ಟೇಬಲ್ ಹುದ್ದೆಗೆ ಜ. 28ರಂದು ಪರೀಕ್ಷೆ

ಮೈಸೂರು, ಜ. 19(ಆರ್‌ಕೆ)- 2023-23ನೇ ಸಾಲಿನ ಸಶಸ್ತ್ರ ಮೀಸಲು ಪಡೆ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಾಗಿ ಮೈಸೂರಿನಲ್ಲಿ ಜನವರಿ 28ರಂದು ಲಿಖಿತ ಪರೀಕ್ಷೆ ನಡೆಯಲಿದೆ. ಭಾನುವಾರ ಬೆಳಗ್ಗೆ 11ರಿಂದ ಮಧ್ಯಾಹ್ನ 12.30 ಗಂಟೆವರೆಗೆ ನಡೆಯುವ ಪರೀಕ್ಷೆಗೆ 13,900 ಅಭ್ಯರ್ಥಿಗಳು ನೋಂದಣಿಯಾಗಿದ್ದಾರೆ. ಮೈಸೂರಿನ ಮಹಾರಾಣಿ, ಜ್ಞಾನಗಂಗಾ, ಫರೂಖಿಯಾ, ಮಾತೃಮಂಡಳಿ, ಸದ್ವಿದ್ಯಾ, ಮಹಾಜನ, ಶಾರದಾ ವಿಲಾಸ, ಸೆಂಟ್ ಫಿಲೋಮಿನಾ, ವಿದ್ಯಾವರ್ಧಕ ಸೇರಿದಂತೆ 29 ಕಾಲೇಜುಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪ್ರವೇಶ ಪತ್ರ ಹಾಗೂ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು, ಪರೀಕ್ಷೆ ಆರಂಭವಾಗುವುದಕ್ಕಿಂತ 150 ನಿಮಿಷ ಮುಂಚಿತವಾಗಿ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಲ್ಲಿ ಹಾಜರಿದ್ದು, ಬಯೋಮೆಟ್ರಿಕ್ ಹಾಜರಾತಿ ನೀಡಬೇಕೆಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ತಿಳಿಸಿದ್ದಾರೆ.

ಅಪೌಷ್ಟಿಕ ಮಕ್ಕಳ ಆರೋಗ್ಯ ತಪಾಸಣಾ ಶಿಬಿರ

ಸೂಕ್ತ ಪೋಷಕಾಂಶ ಭರಿತ ಆಹಾರ ಸೇವನೆ ಸಲಹೆ

ಮೈಸೂರು, ಜ.19(ಎಂಕೆ)- ಮೈಸೂರಿನ ನಂಜುಮಳಿಗೆ ವೃತ್ತದ ಸಮೀಪದಲ್ಲಿರುವ ಸೇಠ್ ಮೋಹನ್‌ದಾಸ್ ತುಳಸಿದಾಸ್ ತಾಯಿ ಮತ್ತು ಮಕ್ಕಳ ಆಸ್ಪತ್ರೆ(ಎಸ್‌ಎಂಟಿ ಆಸ್ಪತ್ರೆ)ಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇನ್ನರ್ ವ್ಹೀಲ್ ಕ್ಲಬ್ ಆಫ್ ರೋಟರಿ ಉತ್ತರ ಹಾಗೂ ಭಾರತೀಯ ವೈದ್ಯಕೀಯ ಸಂಘದ ವತಿಯಿಂದ ಶುಕ್ರವಾರ 'ಅಪೌಷ್ಟಿಕ ಮಕ್ಕಳ ಆರೋಗ್ಯ ತಪಾಸಣಾ ಶಿಬಿರ' ನಡೆಸಲಾಯಿತು.



ಮೈಸೂರಿನ ನಂಜುಮಳಿಗೆ ವೃತ್ತದ ಸಮೀಪದಲ್ಲಿರುವ ಎಸ್‌ಎಂಟಿ ಆಸ್ಪತ್ರೆಯಲ್ಲಿ ಶುಕ್ರವಾರ 'ಅಪೌಷ್ಟಿಕ ಮಕ್ಕಳ ಆರೋಗ್ಯ ತಪಾಸಣಾ ಶಿಬಿರ' ನಡೆಸಲಾಯಿತು. ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮಕ್ಕಳಿಗೆ ಮಲ್ಟಿ ವಿಟಮಿನ್ ಸಿರಪ್, ಐರನ್ ಸಿರಪ್ ಮತ್ತು ಕ್ಯಾಲ್ಸಿಯಂ ಸಿರಪ್ ಅನ್ನು ವಿತರಿಸಿದರು. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಎಂ.ಎಸ್.ಜಯಂತ್ ಮತ್ತಿತರರಿದ್ದರು.

ಶಿಬಿರ ಉದ್ಘಾಟಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿ, ಅಪೌಷ್ಟಿಕತೆಯು ಕಳಪೆ ಆಹಾರ ಮತ್ತು ಆಹಾರದ ಕೊರತೆಯಿಂದ ಉಂಟಾಗುತ್ತದೆ. ಸೇವಿಸುವ ಆಹಾರದಲ್ಲಿ ಪೋಷಕಾಂಶಗಳ ಮಟ್ಟ ಕಡಿಮೆ ಇರುವಾಗ ಹಾಗೂ ಪೌಷ್ಟಿಕಾಂಶದ ಅಸಮತೋಲನದಿಂದ ಕೊರತೆ ಉಂಟಾಗುತ್ತದೆ. ನಾವು ಸೇವಿಸುವ ಆಹಾರ ಪದಾರ್ಥಗಳಲ್ಲಿ ಸೂಕ್ತ ಪ್ರಮಾಣದಲ್ಲಿ ಪೋಷಕಾಂಶಗಳು ಇಲ್ಲದಿದ್ದರೆ ದೇಹಕ್ಕೆ ಅಗತ್ಯವಾದ ಪೋಷಣೆ ದೊರೆಯದು ಎಂದು ತಿಳಿಸಿದರು.

ಪೌಷ್ಟಿಕಾಂಶದ ಕೊರತೆಯಿಂದ ನಾನಾ ಬಗೆಯ ಅನಾರೋಗ್ಯ ಸಮಸ್ಯೆಗಳು ಪ್ರಚೋದನೆ ಪಡೆದುಕೊಳ್ಳುತ್ತವೆ. ಮಕ್ಕಳಲ್ಲಿ ಬೆಳವಣಿಗೆಯಲ್ಲಿ ಹಾಗೂ ಅವರ ಕಲಿಕಾ ಸಾಮರ್ಥ್ಯವೂ ಕುಂಠಿತವಾಗುವುದು. ಗ್ರಹಿಕಾ ಸಾಮರ್ಥ್ಯ ಕುಗ್ಗುವುದು. ಆಯಾಸಗೊಳ್ಳುವಿಕೆ ಮತ್ತು ಶಾಲಾ ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ಆಸಕ್ತಿ ಇಲ್ಲದಿರುವುದು ಹಾಗೂ ಭಾಷಾ ಕಲಿಕೆಯಲ್ಲಿ ಹಿಡಿತ ಇಲ್ಲದಿರುವುದು ಕಂಡು ಬರುವುದರೊಂದಿಗೆ ಮಕ್ಕಳ ಭೌತಿಕ ಮತ್ತು ದೈಹಿಕ ಬೆಳವಣಿಗೆಯೂ ಕುಂಠಿತವಾಗುತ್ತದೆ ಎಂದು ಎಚ್ಚರಿಸಿದರು.

ಅಪೌಷ್ಟಿಕ ಲಕ್ಷಣಗಳಿವು: ಊಟ-ತಿಂಡಿ-ಪಾನೀಯಗಳ ಬಗ್ಗೆ ಆಸಕ್ತಿ ಇಲ್ಲದೆ ಇರುವುದು. ದಣಿವು ಮತ್ತು ಕಿರಿಕಿರಿ ಉಂಟಾಗುವುದು. ಯಾವುದೇ ಸಂಗತಿಯ ಬಗ್ಗೆ ಹೆಚ್ಚಿನ ಬುದ್ಧಿಯನ್ನು ಕೇಂದ್ರೀಕರಿಸಲು ಕಷ್ಟವಾಗುವುದು. ದೇಹದಲ್ಲಿ ಕೊಬ್ಬು, ಸ್ನಾಯು ಹಾಗೂ ದ್ರವ್ಯರಾಶಿಗಳ ಕೊರತೆ ಉಂಟಾಗುವುದು. ಪದೇ ಪದೇ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳುವುದು. ಅದು ಗುಣಮುಖವಾಗಲು ಸಾಕಷ್ಟು ಸಮಯ ತೆಗೆದುಕೊಳ್ಳುವುದು. ಗಾಯವಾದರೆ ಗುಣಮುಖವಾಗಲು ಅಧಿಕ ಸಮಯ ತೆಗೆದುಕೊಳ್ಳುವುದು. ಶಸ್ತ್ರಚಿಕಿತ್ಸೆಯ ನಂತರ ಅಧಿಕ ತೊಡಕುಗಳು ಕಾಣಿಸಿಕೊಳ್ಳುತ್ತವೆ. ಖಿನ್ನತೆ ಕಾಣಿಸಿಕೊಳ್ಳುವುದು. ಪುರುಷ ಮತ್ತು ಮಹಿಳೆಯರಲ್ಲಿ ಫಲವತ್ತತೆಯ ಕೊರತೆ ಉಂಟಾಗುವುದು. ಉಸಿರಾಟದ ಸಮಸ್ಯೆ. ಚರ್ಮವು ತೆಳುವಾಗುವುದು, ಅತಿಯಾಗಿ ಚಳಿಯ ಸಂವೇದನೆಗೆ ಒಳಗಾಗುವುದು. ಕೂದಲು ಹಾಗೂ ಚರ್ಮವು ಶುಷ್ಕತೆಯನ್ನು ಕಳೆದುಕೊಳ್ಳುವುದು ಅಪೌಷ್ಟಿಕ ಲಕ್ಷಣಗಳಾಗಿವೆ ಎಂದು ಮಾಹಿತಿ ನೀಡಿದರು.

ಸೂಕ್ತ ತಪಾಸಣೆ ಹಾಗೂ ಪರೀಕ್ಷೆಯನ್ನು ಮಾಡಿಸಿದಾಗ ನಮ್ಮ ಆರೋಗ್ಯದ ಸಮಸ್ಯೆ ಏನು ಎನ್ನುವುದರ ಬಗ್ಗೆ ಸೂಕ್ತ ಮಾಹಿತಿ ದೊರೆಯುವುದು. ಈ ಮೂಲಕ ಅಪೌಷ್ಟಿಕತೆಯನ್ನು ಗುರುತಿಸಿ, ಅದಕ್ಕೆ ಸೂಕ್ತ ಪೋಷಕಾಂಶ ಭರಿತ ಆಹಾರ ಸೇವಿಸುವುದರ ಮೂಲಕ ಸಮಸ್ಯೆಯನ್ನು ತಡೆಯಬಹುದು ಎಂದು ತಿಳಿಸಿದರು. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಎಂ.ಎಸ್.ಜಯಂತ್, ಐಎಂಎ ಮೈಸೂರು ಶಾಖೆ ಕಾರ್ಯದರ್ಶಿ ಡಾ.ಶಿವಶಂಕರ್, ಇನ್ನರ್ ವೀಲ್ ಕ್ಲಬ್ ಆಫ್ ರೋಟರಿ ಉತ್ತರ ಪದಾಧಿಕಾರಿಗಳು, ಆರೋಗ್ಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.


150ಕ್ಕೂ ಹೆಚ್ಚು ಮಕ್ಕಳ ತಪಾಸಣೆ...

'ಅಪೌಷ್ಟಿಕ ಮಕ್ಕಳ ಆರೋಗ್ಯ ತಪಾಸಣಾ ಶಿಬಿರ'ದಲ್ಲಿ ಸುಮಾರು 150 ಕ್ಕೂ ಹೆಚ್ಚು ಮಕ್ಕಳು ಹಾಗೂ ತಾಯಂದಿರು ಭಾಗವಹಿಸಿದ್ದರು. ಇದೇ ವೇಳೆ ಮಕ್ಕಳಿಗೆ ಮಲ್ಟಿ ವಿಟಮಿನ್ ಸಿರಪ್, ಐರನ್ ಸಿರಫ್ ಮತ್ತು ಕ್ಯಾಲ್ಸಿಯಂ ಸಿರಫ್ ಅನ್ನು ಉಚಿತವಾಗಿ ವಿತರಿಸಲಾಯಿತು.

ಸಂಸ್ಕೃತಿ ಉಳಿವಿಗೆ ಪುಸ್ತಕ ಓದಬೇಕು

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಅಭಿಮತ

ಮಡಿಕೇರಿ, ಜ.19–ಜ್ಞಾನ ಸಂಪಾದನೆ ಮತ್ತು ಸಂಸ್ಕೃತಿಯ ಉಳಿವಿಗೆ ಪುಸ್ತಕ ಓದುವ ಹಾಗೂ ಬರೆಯುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ತಿಳಿಸಿದರು.



ಮಡಿಕೇರಿಯ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟ ಹಾಗೂ ಲೇಖಕಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಅವರ ಪುಸ್ತಕವನ್ನು ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಬಿಡುಗಡೆಗೊಳಿಸಿದರು. ಬೊಳ್ಳಜಿರ ಬಿ.ಅಯ್ಯಪ್ಪ, ಉಳ್ಳಿಯಡ ಡಾಟಿ ಪೂವಯ್ಯ, ಐಚಂಡ ರಶ್ಮಿ ಮೇದಪ್ಪ ಇದ್ದರು.

ನಗರದ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟದ 81ನೇ ಪುಸ್ತಕ ಹಾಗೂ ಲೇಖಕಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಬರೆದಿರುವ 6ನೇ ಪುಸ್ತಕ 'ಪೂ ಬಳ್ಳಿ' ಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ವಿಶಿಷ್ಟವಾಗಿರುವ ಕೊಡವ ಭಾಷೆಯ ಮೇಲಿನ ಅಭಿಮಾನದಿಂದ ಅನೇಕರು ಕೊಡವ ಪುಸ್ತಕವನ್ನು ಹೊರತರುತ್ತಿದ್ದಾರೆ. ಆ ಮೂಲಕ ಭಾಷೆ ಮತ್ತು ಸಂಸ್ಕೃತಿಯ ಉಳಿವಿಗೆ ಪ್ರಯತ್ನಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕಾದರೆ ಆಚಾರ, ವಿಚಾರ ತಿಳಿದುಕೊಳ್ಳಬೇಕಾದರೆ ಪುಸ್ತಕ ಓದಬೇಕು ಮತ್ತು ಬರೆಯುವ ಹವ್ಯಾಸ ಬೆಳೆಸಿಕೊಳ್ಳಬೇಕು. ನಮ್ಮ ಪೂರ್ವಜರು ನೀಡಿರುವ ಸಂದೇಶವನ್ನು ಲೇಖಕಿ ತಮ್ಮ 'ಪೂ ಬಳ್ಳಿ' ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಇದು ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮತ್ತು ಪ್ರೇರಣೆ ನೀಡುವಂತಿದೆ ಎಂದರು.

ಹಿರಿಯ ಸಾಹಿತಿ ಉಳ್ಳಿಯಡ ಡಾಟಿ ಪೂವಯ್ಯ ಮಾತನಾಡಿ, ಸಾಹಿತ್ಯಕ್ಕೆ ಎಂದಿಗೂ ಸಾವಿಲ್ಲ. ಯಾವುದೇ ಲಾಭವನ್ನು ನಿರೀಕ್ಷೆ ಮಾಡದೆ, ಸ್ವಾರ್ಥ ಮನೋಭಾವನೆಯನ್ನು ಬಿಟ್ಟು ಎಲ್ಲರಿಗೂ ಮೆಚ್ಚುಗೆ ಆಗುವ ರೀತಿಯಲ್ಲಿ ಬರೆಯುವುದೇ ಉತ್ತಮ ಸಾಹಿತ್ಯ. ಎಲ್ಲರ ಜೀವನಕ್ಕೂ ಅನ್ವಯವಾಗುವ ರೀತಿಯ ಬರಹಗಳು ಹೆಚ್ಚು ಹೆಚ್ಚು ರಚನೆಯಾಗಬೇಕು. ವಿಸ್ತಾರವಾದ ವಿಚಾರವನ್ನು ಚುಟುಕಾಗಿ ಕವನದಲ್ಲಿ ವಿವರಿಸುವ ಪ್ರಯತ್ನವನ್ನು 'ಪೂ ಬಳ್ಳಿ' ಪುಸ್ತಕದ ಲೇಖಕಿ ಫ್ಯಾನ್ಸಿ ಮುತ್ತಣ್ಣ ಮಾಡಿದ್ದಾರೆ. ಸಾಂಸಾರಿಕ ವಿಚಾರವನ್ನು ವಿನೋದವಾಗಿ ವಿವರಿಸಿದ್ದಾರೆ. ಇದು ಓದುಗರಿಗೆ ಸಂತೋಷವನ್ನು ನೀಡುತ್ತದೆ ಎಂದು ತಿಳಿಸಿದರು.

ಅಕಾಡೆಮಿ ಅಧ್ಯಕ್ಷ ಸ್ಥಾನ ಸಿಗಲಿ: ಯಾವುದೇ ಲಾಭದ ನಿರೀಕ್ಷೆಗಳಿಲ್ಲದೆ ದಾಖಲೆಯ 81 ಪುಸ್ತಕಗಳನ್ನು ಹೊರ ತರುವ ಮೂಲಕ ಸಾಹಿತ್ಯಾಭಿಮಾನವನ್ನು ಮೆರೆಯುತ್ತಿರುವ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರಿಗೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನ ಸಿಗಲಿ ಎಂದು ಡಾಟಿ ಪೂವಯ್ಯ ಹೇಳಿದರು.

ಬರೆಯುವ ಹವ್ಯಾಸ ಹೊಂದಿರುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಪುಸ್ತಕಗಳನ್ನು ಹೊರ ತಂದು ಸಾಹಿತ್ಯ ಕ್ಷೇತ್ರದ ಬೆಳವಣಿಗೆಗೂ ಅಯ್ಯಪ್ಪ ಕಾರಣಕರ್ತರಾಗುತ್ತಿದ್ದಾರೆ. ಸಾಹಿತ್ಯಕ್ಕಾಗಿ ದುಡಿಯುವವರಿಗೆ ಅಕಾಡೆಮಿಯಲ್ಲಿ ಸ್ಥಾನಮಾನ ಸಿಗಬೇಕು ಎಂದರು. ಲೇಖಕಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಮಾತನಾಡಿ, ಬರಹಗಾರರನ್ನು ಪ್ರೋತ್ಸಾಹಿಸಿ, ಮುಖ್ಯವಾಹಿನಿಗೆ ತಂದಾಗ ಪ್ರತಿಭೆಗಳು ಅನಾವರಣಗೊಳ್ಳುತ್ತವೆ. ಇದು ಸಾಹಿತ್ಯದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಪುಸ್ತಕ ಬಿಡುಗಡೆಗೆ ಸಹಕಾರ ನೀಡಿದ ಕೊಡವ ಮಕ್ಕಡ ಕೂಟ ಹಾಗೂ ಪ್ರೋತ್ಸಾಹಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು. ಸಾಹಿತಿ ಐಚಂಡ ರಶ್ಮಿ ಮೇದಪ್ಪ ಮಾತನಾಡಿದರು. ವ್ಯಾಲಿ ಡ್ಯೂ ಕೊಡವ ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಹಂಚೆಟ್ಟಿರ ಮನು ಮುದ್ದಪ್ಪ ಉಪಸ್ಥಿತರಿದ್ದರು.

> ಸಾಮಾಜಿಕ ಕಳಕಳಿ, ಕೊಡಗಿನ ಅಭ್ಯುದಯದ ಕಾಳಜಿ, ಸಂಸ್ಕೃತಿ, ಸಾಹಿತ್ಯ ಬೆಳವಣಿಗೆಯ ಮೇಲಿನ ಆಸಕ್ತಿಯಿಂದ ನಿರಂತರ ಕಾರ್ಯನಿರ್ವಹಣೆಯಲ್ಲಿ ತೊಡಗಿರುವ ಕೊಡವ ಮಕ್ಕಡ ಕೂಟ ಜಿಲ್ಲೆಯ ಹಲವು ಬರಹಗಾರರು, ಸಾಹಿತಿಗಳು ಬರೆದ ಕೊಡವ, ಕನ್ನಡ, ಇಂಗ್ಲಿಷ್, ಹಿಂದಿ ಸೇರಿದಂತೆ ಒಟ್ಟು 80 ಕೃತಿಗಳನ್ನು ಬಿಡುಗಡೆ ಮಾಡಿದೆ. ಇದೀಗ 81ನೇ ಪುಸ್ತಕ, ಲೇಖಕಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಅವರು ಬರೆದಿರುವ 'ಪೂ ಬಳ್ಳಿ' ಕೊಡವ ಪುಸ್ತಕ ಬಿಡುಗಡೆಗೊಂಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಬರಹಗಾರರನ್ನು ಗುರುತಿಸಿ, ಪ್ರೋತ್ಸಾಹಿಸಲಾಗುವುದು.
>
> -ಬೊಳ್ಳಜಿರ ಬಿ.ಅಯ್ಯಪ್ಪ, ಕೊಡವ ಮಕ್ಕಡ ಕೂಟದ ಅಧ್ಯಕ್ಷ,

ಮುಸ್ಲಿಂ ಕಪ್ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ



ವಾಲಿಬಾಲ್ ಆಟಗಾರರಿಗೆ ಶುಭ ಕೋರಲಾಯಿತು.

ಪೊನ್ನಂಪೇಟೆ, ಜ.19–ಕೊಡಗು ಜಿಲ್ಲಾ ಮುಸ್ಲಿಂ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಅಸೋಸಿಯೇಷನ್ ವತಿಯಿಂದ ವಿರಾಜಪೇಟೆಯ ತಾಲೂಕು ಮೈದಾನದಲ್ಲಿ 15ನೇ ವರ್ಷದ ಜಿಲ್ಲಾ ಮಟ್ಟದ ಜಮಾಅತ್ ವಾರು ಹೊನಲು ಬೆಳಕಿನ ಮುಸ್ಲಿಂ ಕಪ್ ವಾಲಿಬಾಲ್ ಪಂದ್ಯಾವಳಿಗೆ ಶುಕ್ರವಾರ ಚಾಲನೆ ನೀಡಲಾಯಿತು.

ಕೊಡಗು ಜಿಲ್ಲಾ ಮುಸ್ಲಿಂ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಎಂ.ಎಚ್.ಅಬ್ದುಲ್ ರಹಿಮಾನ್ ಮತ್ತು ಕೊಡವ ಮುಸ್ಲಿಂ ಅಸೋಸಿಯೇಷನ್ (ಕೆಎಂಎ) ಅಧ್ಯಕ್ಷ ದುದ್ದಿಯಂಡ ಹೆಚ್.ಸೂಫಿ ಹಾಜಿ ಪಂದ್ಯಾವಳಿಗೆ ಚಾಲನೆ ನೀಡಿದರು.

ಪಂದ್ಯಾವಳಿಯ ಉದ್ಘಾಟನೆ ಅಂಗವಾಗಿ ಕೆಡಿಎಂಎಸ್‌ಸಿಎ ಪದಾಧಿಕಾರಿಗಳನ್ನೊಳಗೊಂಡ ಆಯೋಜನೆ ಸಮಿತಿಯ ಸ್ನೇಹಿತರ ತಂಡ ಮತ್ತು ಮೂರ್ನಾಡಿನ ಗೌತಮ್ ಫ್ರೆಂಡ್ಸ್ ತಂಡಗಳ ನಡುವೆ ನಡೆದ ಸ್ನೇಹ ಸೌಹಾರ್ದ ಪಂದ್ಯದಲ್ಲಿ ಗೌತಮ್ ಫ್ರೆಂಡ್ಸ್ ತಂಡ ಎದುರಾಳಿ ತಂಡವನ್ನು ನೇರ ಎರಡು ಸೆಟ್ಟುಗಳಿಂದ ಮಣಿಸಿ ವಿಜಯ ಸಾಧಿಸಿತು. ಸಮುದಾಯದ ಹಿರಿಯ ಮುಖಂಡರಾದ ಆಲೀರ ಎ.ಎಂ.ಹಾಜಿ ಧ್ವಜಾರೋಹಣ ನೆರವೇರಿಸಿ, ಆಟಗಾರರಿಗೆ ಶುಭ ಹಾರೈಸಿದರು. ಮುಸ್ಲಿಂ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಪಿ.ಎ.ಹನೀಫ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲೆಯ ಉತ್ತಮ ವಾಲಿಬಾಲ್ ಆಟಗಾರ ಬಲಚಂಡ ಗೌತಮ್, ಕಾಂಗ್ರೆಸ್ ಪ್ರಮುಖರಾದ ಜಾನ್ಸನ್, ರಜಾಕ್, ಕೆ.ಎಂ.ಸಯ್ಯದ್ ಬಾವ, ಮೊಹಮ್ಮದ್, ಸಹಾಯಕ ಪೊಲೀಸ್ ಉಪನಿರೀಕ್ಷಕ ಸಿ.ಯು. ಸಾದುಲಿ, ಪಂದ್ಯಾವಳಿಯ ತೀರ್ಪುಗಾರರ ತಂಡದ ಮುಖ್ಯಸ್ಥ ಸುರೇಶ್, ಕೆಡಿಎಂಎಸ್‌ಸಿಎ ಪ್ರಧಾನ ಕಾರ್ಯದರ್ಶಿ ಎಂ.ಎಂ.ಇಸ್ಮಾಯಿಲ್, ಉಪಾಧ್ಯಕ್ಷ ಕರೀಂ ಕಡಂಗ, ಪ್ರಮುಖ ಪದಾಧಿಕಾರಿಗಳಾದ ಮನ್ಸೂರ್ ಅಲಿ, ಕೋಳುಮಂಡ ರಫೀಕ್, ಮೊಹಮ್ಮದ್ ರಾಫಿ, ಅಬ್ದುಲ್ ಜಲೀಲ್, ಸುಬೇರ್ ಕಡಂಗ, ಕೆಡಿಎಂಎಸ್‌ಸಿಎ ಪ್ರಮುಖರಾದ ಅಬ್ದುಲ್ ರೆಹಮಾನ್ (ಅಂದಾಯಿ), ಆಸಿಫ್, ಪ್ರಧಾನ ಕಾರ್ಯದರ್ಶಿ ಎಂ.ಎಂ.ಇಸ್ಮಾಯಿಲ್ ಉಪಸ್ಥಿತರಿದ್ದರು.

ರಸ್ತೆ ಬದಿ ವ್ಯಾಪಾರಿಗಳ ಪ್ರತಿಭಟನೆ

ರಾಜಾಸೀಟ್ ಆಜುಬಾಜು ವ್ಯಾಪಾರಕ್ಕೆ ಅವಕಾಶ ನೀಡುವಂತೆ ಆಗ್ರಹ



ಮಡಿಕೇರಿಯ ರಾಜಾಸೀಟ್ ಮುಖ್ಯರಸ್ತೆ ಬದಿಯಲ್ಲೇ ವ್ಯಾಪಾರಕ್ಕೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ರಸ್ತೆ ಬದಿ ವ್ಯಾಪಾರಿಗಳು ಶುಕ್ರವಾರ ನಗರಸಭೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜ.19–ನಮ್ಮನ್ನು ತೆರವುಗೊಳಿಸಿರುವ ನಗರದ ರಾಜಾಸೀಟ್‌ನ ಮುಖ್ಯರಸ್ತೆ ಬದಿಯಲ್ಲೇ ವ್ಯಾಪಾರಕ್ಕೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ರಸ್ತೆಬದಿ ವ್ಯಾಪಾರಿಗಳು ಶುಕ್ರವಾರ ನಗರಸಭೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಪ್ರವಾಸಿ ತಾಣ ರಾಜಾಸೀಟ್ ಬಳಿ ವ್ಯಾಪಾರ ನಡೆಸಿ ಜೀವನ ನಡೆಸುತ್ತಿದ್ದ ನಮ್ಮನ್ನು ನಗರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಗುರುವಾರ ಏಕಾಏಕಿ ಅಲ್ಲಿಂದ ತೆರಳಿಸಿದ್ದಾರೆ. ಇದರಿಂದ ನಮ್ಮ ಕುಟುಂಬಗಳ ಜೀವನ ನಿರ್ವಹಣೆ ಕಷ್ಟಕರವಾಗಲಿದೆ. ಆದ್ದರಿಂದ ರಾಜಾಸೀಟ್ ಬಳಿಯೇ ನಮಗೆ ವ್ಯಾಪರ ನಡೆಸಲು ಅವಕಾಶ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪರಿಹಾರದ ಭರವಸೆ: ಪ್ರತಿಭಟನಾ ಸ್ಥಳಕ್ಕಾಗಮಿಸಿದ ಶಾಸಕ ಡಾ.ಮಂಥರ್‌ಗೌಡ, ಬೀದಿಬದಿ ವ್ಯಾಪಾರಿಗಳ ಸಮಸ್ಯೆ ಆಲಿಸಿದರು. ಈಗಿರುವ ಸ್ಥಳವನ್ನು ಹೊರತುಪಡಿಸಿ ಬೇರೆಡೆ ವ್ಯಾಪಾರ ನಡೆಸಲು ನಗರಸಭೆ ಸೂಚನೆ ನೀಡಿದೆ. ಆ ಸ್ಥಳಗಳಲ್ಲಿ ವ್ಯಾಪಾರ ಕಷ್ಟ ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮೊದಲಿದ್ದ ಸ್ಥಳದಲ್ಲೇ ವ್ಯಾಪಾರ ನಡೆಸಲು ಅನುವು ಮಾಡಿಕೊಡುವಂತೆ ರಸ್ತೆಬದಿ ವ್ಯಾಪಾರಿಗಳು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ನಗರಸಭೆ ಅಧಿಕಾರಿಗಳು ಮತ್ತು ಆಡಳಿತ ಮಂಡಳಿಯೊಂದಿಗೆ ಚರ್ಚೆ ನಡೆಸಿ ಸಮಸ್ಯೆ ಪರಿಹರಿಸುವುದಾಗಿ ಭರವಸೆ ನೀಡಿದರು. ಪರ್ಯಾಯ ಸ್ಥಳಗಳಲ್ಲಿ ಅಗತ್ಯ ಮೂಲಸೌಕರ್ಯ ಕಲ್ಪಿಸುವಂತೆ ಪೌರಾಯುಕ್ತರಿಗೆ ಇದೇ ವೇಳೆ ಸೂಚನೆ ನೀಡಿದರು. ನಂತರ ಶಾಸಕರ ಭರವಸೆಯಂತೆ ಪ್ರತಿಭಟನೆ ಕೈಬಿಡಲಾಯಿತು.

> ರಸ್ತೆಬದಿ ವ್ಯಾಪಾರಿಗಳಿಗೆ ನಗರಸಭೆ ಕಚೇರಿ ಬಳಿಯ ಪವರ್‌ಹೌಸ್‌ಗೆ ತೆರಳುವ ಹಾದಿಯ ಪಾರ್ಶ್ವ, ಹಳೇ ಖಾಸಗಿ ಬಸ್ ನಿಲ್ದಾಣದಿಂದ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣಕ್ಕೆ ತೆರಳುವ ಹಾದಿಯ ಬಲ ಪಾರ್ಶ್ವ, ನಾರ್ತ್‌ಕೂರ್ಗ್ ಕ್ಲಬ್ ಬಳಿಯ ರಸ್ತೆಯ ಬಲ ಪಾರ್ಶ್ವದಲ್ಲಿ ಜಾಗ ಗುರುತಿಸಿ ಸೂಚಿಸ ಲಾಗಿದೆ. ಅಲ್ಲಿ ಅಗತ್ಯ ಸೌಲಭ್ಯ ಒದಗಿಸಲಾಗುವುದೆಂದು ತಿಳಿಸಲಾಗಿದೆ. ಹೀಗಿದ್ದೂ ರಸ್ತೆಬದಿ ವ್ಯಾಪಾರಿಗಳು ಪ್ರತಿಭಟನೆಗೆ ಇಳಿದಿದ್ದಾರೆ. ಅವರೊಂದಿಗೆ ಮಾತುಕತೆ ನಡೆಸುವ ಮೂಲಕ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುವುದು.
>
> –ಅನಿತಾಪೂವಯ್ಯ, ನಗರಸಭೆ ಅಧ್ಯಕ್ಷೆ



ವಿರಾಜಪೇಟೆ ನಗರ ಪೊಲೀಸ್ ಠಾಣೆ ಹಾಗೂ ಎಸ್‌ಎಂಎಸ್ ಅಕಾಡೆಮಿ, ಅರಮೇರಿ ಶಾಲೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಎನ್‌ಸಿಸಿ ವಿದ್ಯಾರ್ಥಿಗಳಿಂದ ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ನಗರದ ಮುಖ್ಯ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಸಲಾಯಿತು. ತಾಲೂಕು ಮೈದಾನದಿಂದ ವಿದ್ಯಾರ್ಥಿಗಳು ಜಾಥಾ ಹೊರಟು ಗಡಿಯಾರ ಕಂಬದ ಬಳಿಯ ಮುಖ್ಯ ರಸ್ತೆ, ಖಾಸಗಿ ಮತ್ತು ಸಾರಿಗೆ ಬಸ್ ನಿಲ್ದಾಣ, ದೊಡ್ಡಟ್ಟಿ ಚೌಕಿ ಮಾರ್ಗವಾಗಿ ರಸ್ತೆ ಸುರಕ್ಷತಾ ನಿಯಯ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ನಗರ ಪೊಲೀಸ್ ಠಾಣಾಧಿಕಾರಿ ರವೀಂದ್ರ, ಟ್ರಾಫಿಕ್ ಪೊಲೀಸ್ ಸಿಬ್ಬಂದಿ, ಎನ್‌ಸಿಸಿ ಅಧಿಕಾರಿಗಳು, ಶಿಕ್ಷಕರು ಇದ್ದರು.

ವಿದ್ಯಾರ್ಥಿ ರಘುವಂಶಿ ಗಣರಾಜ್ಯೋತ್ಸವ ಶಿಬಿರಕ್ಕೆ ಆಯ್ಕೆ



ಮಡಿಕೇರಿ, ಜ.19– ನಗರದ ಕೊಡಗು ವಿದ್ಯಾಲಯದ 9ನೇ ತರಗತಿ ವಿದ್ಯಾರ್ಥಿ ಸಿ.ಎಸ್.ರಘುವಂಶಿ ಜ.26ರಂದು ದೆಹಲಿಯಲ್ಲಿ ನಡೆಯುತ್ತಿರುವ ಗಣರಾಜ್ಯೋತ್ಸವ ಶಿಬಿರಕ್ಕೆ ಆಯ್ಕೆಯಾಗಿದ್ದಾನೆ.

ಎನ್‌ಸಿಸಿ ಕೆಡೆಟ್ ಸಾರ್ಜೆಂಟ್ ಸಿ.ಎಸ್. ರಘುವಂಶಿ ಕರ್ನಾಟಕ, ಗೋವಾ ಡೈರೆಕ್ಟರೇಟ್‌ನ ಜೂನಿಯರ್ ವಿಭಾಗದ ಬೆಸ್ಟ್ ಕೆಡೆಟ್ ಆಗಿದ್ದಾನೆ. ಈತ ಗಣರಾಜ್ಯೋತ್ಸವ ಶಿಬಿರಕ್ಕೆ ಆಯ್ಕೆಯಾಗಿರುವ ಕೊಡಗು ಜಿಲ್ಲೆಯ ಏಕೈಕ ವಿದ್ಯಾರ್ಥಿ. 19ನೇ ಕರ್ನಾಟಕ ಬೆಟಾಲಿಯನ್‌ನ ಎನ್‌ಸಿಸಿ ಕೆಡೆಟ್ ಆಗಿರುವ ರಘುವಂಶಿ, ಮಡಿಕೇರಿಯ ಸಿವಿಲ್ ಇಂಜಿನಿಯರ್ ಸಿ.ಆರ್.ಶಿವಕುಮಾರ್ ಹಾಗೂ ಪಿ.ಸಂಧ್ಯಾ ದಂಪತಿಯ ಪುತ್ರ.

ರೈತರು ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿ, ಹೆಚ್ಚಿನ ಲಾಭ ಗಳಿಸಿ

- ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ ಸಲಹೆ
- ಬೇಗೂರಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಬೇಗೂರು (ಗುಂಡ್ಲುಪೇಟೆ), ಜ.19– ಹೆಚ್ಚಿನ ಲಾಭ ತರಲಿರುವ ವೈಜ್ಞಾನಿಕ ಕೃಷಿ ಪದ್ಧತಿಯನ್ನು ರೈತರು ಅಳವಡಿಸಿಕೊಳ್ಳಲು ಮುಂದಾಗಬೇಕಿದೆ ಎಂದು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ ಸಲಹೆ ನೀಡಿದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಉಪಮಾರುಕಟ್ಟೆ ಪ್ರಾಂಗಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಸಚಿವ ಶಿವಾನಂದ ಎಸ್.ಪಾಟೀಲ ಚಾಲನೆ ನೀಡಿದರು.

ಗುಂಡ್ಲುಪೇಟೆ ತಾಲೂಕಿನ ಬೇಗೂರು ಉಪಮಾರುಕಟ್ಟೆ ಪ್ರಾಂಗಣದಲ್ಲಿ ಶುಕ್ರವಾರ ಹತ್ತಿ ಹರಾಜು ಕಟ್ಟೆ, ಸಿಸಿ, ಆಸ್ಫಾಲ್ಟ್ ರಸ್ತೆ, ಸಿಸಿ ಚರಂಡಿ, ಆಡಳಿತ ಕಚೇರಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ವೈಜ್ಞಾನಿಕ ಕೃಷಿ ಪದ್ಧತಿ ಅನುಸರಿಸಿದಾಗ ರೈತರಿಗೆ ಸಾಕಷ್ಟು ಸಹಾಯವಾಗಲಿದೆ. ಒಂದೇ ಬೆಳೆಗೆ ಅವಲಂಬಿತರಾಗದೇ ಮೂರರಿಂದ ನಾಲ್ಕು ಬೆಳೆಗಳನ್ನು ಬೆಳೆದಾಗ ಆದಾಯ ಹೆಚ್ಚಲಿದೆ. ಪಾರಂಪರಿಕ ಕೃಷಿಗಿಂತ ಬದಲಾವಣೆಗಳನ್ನು ತರುವ ಕೃಷಿ ಪದ್ಧತಿ ಅಳವಡಿಸಿಕೊಳ್ಳುವತ್ತ ರೈತರು ಒಲವು ತೋರಬೇಕು ಎಂದು ತಿಳಿಸಿದರು.

ರೈತರು ಬೆಳೆದ ಬೆಳೆಗೆ ಸ್ಥಿರವಾದ ಬೆಲೆ ಸಿಗಬೇಕು. ರೈತರ ಏಳಿಗೆಯ ದೂರದೃಷ್ಟಿ ಇಟ್ಟುಕೊಂಡು ಕೃಷಿ ಉತ್ಪನ್ನಗಳಿಗೆ ಯೋಗ್ಯ ಧಾರಣೆ ಕೊಡಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ನೀರು, ವಿದ್ಯುತ್ ಗಿಂತಲೂ ಸ್ಥಿರ ಧಾರಣೆಯಿಂದ ರೈತರಿಗೆ ದೊಡ್ಡ ಸಹಾಯವಾಗಲಿದೆ. ರಾಜ್ಯದಲ್ಲಿ 170 ಎಪಿಎಂಸಿಗಳಿದ್ದು, ಇವುಗಳ ಅಭಿವೃದ್ಧಿಗೆ ನೆರವು ನೀಡಲಿದ್ದೇವೆ. ನನ್ನ ಇಲಾಖೆಗೆ 390 ಕೋಟಿ ರೂ. ಅನುದಾನ ಬಂದಿದೆ. ಬೇಗೂರಿನಲ್ಲಿ ಭೂಮಿಪೂಜೆ ನೆರವೇರಿಸಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಅಭಿವೃದ್ಧಿಗೆ 6 ಕೋಟಿ ರೂ. ನೀಡಲಾಗುತ್ತಿದೆ. ಇನ್ನೂ ಹೆಚ್ಚಿನ ಹಣ ಅಗತ್ಯವಿದ್ದಲ್ಲಿ ನೀಡಲಾಗುವುದು. ಸುಸಜ್ಜಿತ ಮಾರುಕಟ್ಟೆ ಪ್ರಾಂಗಣ ಗುಣಮಟ್ಟದಿಂದ ಕಾಲಮಿತಿಯೊಳಗೆ ನಿರ್ಮಾಣವಾಗಬೇಕು ಎಂದು ಸಚಿವರು ತಿಳಿಸಿದರು.

ಜಿಲ್ಲೆಯ ಕಬ್ಬು ಬೆಳೆಗಾರರು, ರೈತ ಮುಖಂಡರು ಪ್ರಸ್ತಾಪಿಸಿರುವ ಬೇಡಿಕೆಗಳನ್ನು ಆಲಿಸಿದ್ದೇನೆ. ಇಲ್ಲಿನ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಯಿಂದ ನೀಡಬೇಕಿರುವ ಲಾಭಾಂಶ ಕೊಡಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ಎಪಿಎಂಸಿಯಲ್ಲಿ ಹೆಚ್ಚಿನ ಕಮಿಷನ್ ವಸೂಲಿ ಮಾಡುವವರ ವಿರುದ್ಧ ಕ್ರಮ ಜರುಗಿಸಲು ಸೂಚಿಸಲಾಗಿದ್ದು, ಈಗಾಗಲೇ ಕೆಲವರಿಗೆ ನೋಟಿಸ್ ನೀಡುತ್ತಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಕಮಿಷನ್ ವಸೂಲಿ ಮಾಡುವವರ ಲೈಸೆನ್ಸ್ ಅನ್ನು ಅಮಾನತ್ತು ಮಾಡಲು ಸೂಚಿಸಲಾಗಿದೆ. ಎಪಿಎಂಸಿಗಳ ಸುಧಾರಣೆಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲಿದ್ದೇವೆ ಎಂದು ಹೇಳಿದರು.

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಕೃಷಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಬೇಗೂರು ಉಪ ಮಾರುಕಟ್ಟೆ ಅಭಿವೃದ್ಧಿ ಕೆಲಸಗಳಿಗೆ ತ್ವರಿತವಾಗಿ ಅನುಮೋದನೆ ನೀಡಿದೆ. ಎಪಿಎಂಸಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಗಮನ ಸೆಳೆಯಲಾಗಿದೆ. ರಸ್ತೆ, ಕೋಲ್ಡ್ ಸ್ಟೋರೇಜ್ ಇನ್ನಿತರ ಉಪಯೋಗಿ ಕೆಲಸಗಳು ಆಗಬೇಕಿದೆ ಎಂದರು.

ಗುಂಡ್ಲುಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಕೆ.ಎಸ್.ಶಿವಪ್ರಕಾಶ್, ಬೇಗೂರು ಗ್ರಾಪಂ ಅಧ್ಯಕ್ಷೆ ಜಯಮ್ಮ, ಕೃಷಿ ಮಾರಾಟ ಇಲಾಖೆಯ ನಿರ್ದೇಶಕ ಜಿ.ಎಂ.ಗಂಗಾಧರಸ್ವಾಮಿ, ಅಧೀಕ್ಷಕ ಅಭಿಯಂತರ ಸಿ.ಜಿ.ರಘುನಂದನ್, ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕ ಟಿ.ವಿ.ಪ್ರಕಾಶ್‌ಕುಮಾರ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಉಪಾಧ್ಯಕ್ಷ ವೆಂಕಟನಾಯಕ, ಆರ್.ಎಸ್.ನಾಗರಾಜು, ಭಾಗ್ಯ, ಎಂ.ವಿರೂಪಾಕ್ಷ, ಹೆಚ್.ಬಿ.ನಾಗರಾಜು, ಅರಸ ಶೆಟ್ಟಿ, ಬಸವರಾಜಪ್ಪ, ಪಿ.ಮಹದೇವಪ್ಪ, ಎಂ.ಜಿ.ನಾಗರತ್ನ, ರಾಜು, ಎಸ್.ಮಹದೇವಪ್ಪ, ಎಸ್.ನಾಗಪ್ಪ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಎಸ್.ಶ್ರೀಧರ್, ಇಲಾಖೆಯ ಕಾರ್ಯಪಾಲಕ ಅಭಿಯಂತರ ಎಸ್.ಎಸ್. ಖಾದರಿ, ಸಹಾಯಕ ಕಾರ್ಯಪಾಲಕ ಅಭಿಯಂತರ ಗೌರೀಶ್ ಹೆಚ್.ಗೌಡ, ಸಹಾಯಕ ಅಭಿಯಂತರ ಹಸೀಬ್ ಅಹಮದ್ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮೊದಲು ಸಚಿವರು ಗುಂಡ್ಲುಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಮಿತಿಯ ಸದಸ್ಯರೊಂದಿಗೆ ಆಡಳಿತ ಕಚೇರಿಯಲ್ಲಿ ಚರ್ಚೆ ನಡೆಸಿದರು. ಪ್ರವಾಸಿ ಮಂದಿರದಲ್ಲಿ ಕಬ್ಬು ಬೆಳೆಗಾರರು, ರೈತ ಮುಖಂಡರೊಂದಿಗೆ ಚರ್ಚಿಸಿ ಅಹವಾಲು ಆಲಿಸಿದರು.

> ಹೊಸ ಎಪಿಎಂಸಿ ಕಾಯ್ದೆಯಿಂದ ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಕೇಂದ್ರ ಸರ್ಕಾರ ನೀಡಿದ್ದ ಭರವಸೆ ಹುಸಿಯಾಗಿದೆ. ಬಿಜೆಪಿ ಜಾರಿಗೆ ತಂದಿದ್ದ ನೂತನ ಎಪಿಎಂಸಿ ಕಾಯ್ದೆಯಿಂದ ರೈತರ ಎಲ್ಲಾ ಉತ್ಪನ್ನಗಳಿಗೂ ಬೆಲೆ ಕಡಿಮೆಯಾಗಿದೆ. ರೈತರ ಉತ್ಪನ್ನಗಳ ರಫ್ತು ನಿರ್ಬಂಧದಿಂದ ಹಲವಾರು ಬೆಳೆಗಳಿಗೆ ಯೋಗ್ಯ ಬೆಲೆ ದೊರಕದಂತಾಗಿದೆ. ರಾಜ್ಯ ಸರ್ಕಾರ ಮುಂಬರುವ ದಿನಗಳಲ್ಲಿ ರೈತರಿಗೆ ಸ್ಪರ್ಧಾತ್ಮಕ ಬೆಲೆ ದೊರಕುವಂತೆ ಮಾಡಲು ಹೊಸ ಕಾಯ್ದೆ ರೂಪಿಸಲಾ ಗುವುದು. ರಾಜ್ಯದ 170 ಎಪಿಎಂಸಿಗಳ ಉಳಿವಿಗೆ ಅನುದಾನ ನೀಡಲಾಗುತ್ತಿದೆ. ಈ ಭಾಗದಲ್ಲಿ ಕೇವಲ ಮಾರುಕಟ್ಟೆ ಬದಲು ಹತ್ತಿ ಸಂಸ್ಕರಣೆಗೆ ಸಂಬಂಧಿಸಿದ ಕೈಗಾರಿಕೆಗಳನ್ನು ಆರಂಭಿಸಲು ಕ್ರಮಕೈಗೊಳ್ಳುವಂತೆ ಹಾಗೂ ರೈತರ ಉತ್ಪನ್ನಗಳ ಸಂಗ್ರಹಕ್ಕೆ ಶೀತಲಾಗಾರ (ಕೋಲ್ಡ್ ಸ್ಟೋರೇಜ್) ನಿರ್ಮಿಸಲಾಗುವುದು.
>
> -ಶಿವಾನಂದ ಎಸ್.ಪಾಟೀಲ, ಕೃಷಿ ಮಾರುಕಟ್ಟೆ ಸಚಿವ

ನನ್ನ ಹೇಳಿಕೆಯನ್ನು ಮಾಧ್ಯಮದವರು ತಿರುಚಿದ್ದಾರೆ

ರೈತರು ಬರಗಾಲ ಬರಲೆಂದು ಬಯಸುತ್ತಾರೆ ಎಂದು ನಾನು ಹೇಳಿಲ್ಲ. ನನ್ನ ಹೇಳಿಕೆಯನ್ನು ಮಾಧ್ಯಮದವರು ತಿರುಚಿದ್ದಾರೆ ಎಂದು ಸಚಿವ ಶಿವಾನಂದ ಎಸ್.ಪಾಟೀಲ ಹೇಳಿದರು.



ಬೇಗೂರಿನಲ್ಲಿ ಸಚಿವ ಶಿವಾನಂದ ಎಸ್.ಪಾಟೀಲ ಅವರಿಗೆ ರೈತ ಮುಖಂಡರು ಮನವಿ ಸಲ್ಲಿಸಿದರು.

ಗುಂಡ್ಲುಪೇಟೆಯ ಪ್ರವಾಸಿ ಮಂದಿರದಲ್ಲಿ ಮಾತನಾಡಿದ ಅವರು, ನಾನು ರೈತ ವಿರೋಧಿ ಹೇಳಿಕೆ ಕೊಟ್ಟಿಲ್ಲ. ಬರಗಾಲ ಸಂದರ್ಭದಲ್ಲಿ ರೈತರು ಎದೆಗುಂದದೆ ಧೈರ್ಯವಾಗಿ ಎದುರಿಸಬೇಕು ಎಂದು ಹೇಳಿದ್ದರೂ ಮಾಧ್ಯಮವರು ತಮ್ಮ ಹೇಳಿಕೆಯ ಕೆಲವೇ ಭಾಗ ಮಾತ್ರ ಪ್ರಕಟಿಸಿದ್ದಾರೆ. ಇದರಿಂದ ರಾಜ್ಯದ ರೈತರಿಗೆ ನೋವುಂಟಾಗಿದ್ದರೆ ಕ್ಷಮೆ ಕೇಳುತ್ತೇನೆ ಎಂದರು.

ಈ ವೇಳೆ ರೈತ ಸಂಘ ರಾಜ್ಯ ಸಮಿತಿಯ ಡಾ.ಗುರುಪ್ರಸಾದ್, ಜಿಲ್ಲಾಧ್ಯಕ್ಷ ಮಾಡ್ರಹಳ್ಳಿ ಮಹದೇವಪ್ಪ, ಕುಂದಕೆರೆ ಸಂಪತ್ತು, ತಾಲೂಕು ಅಧ್ಯಕ್ಷ ಹೊಸೂರು ಮಹೇಶ್ ಮಾತನಾಡಿ, ಬೇಗೂರಿನಲ್ಲಿ ಹತ್ತಿ ಮಾರುಕಟ್ಟೆ ಸ್ಥಾಪನೆಯಿಂದ ರೈತರಿಗೆ ಯಾವುದೇ ಉಪಯೋಗವಾಗುತ್ತಿಲ್ಲ. ಈಗಾಗಲೇ ಪಟ್ಟಣ ಹಾಗೂ ತೆರಕಣಾಂಬಿಯ ಮಾರುಕಟ್ಟೆಯಲ್ಲಿ ರೈತರಿಗೆ ಕನಿಷ್ಠ ಮೂಲಸೌಕರ್ಯವೂ ಇಲ್ಲ. ರೈತರಿಗೆ ಸ್ವಲ್ಪವೂ ಬೆಲೆ ಕೊಡುತ್ತಿಲ್ಲ. ಬಿಳಿಚೀಟಿಯನ್ನು ಕೊಡುತ್ತಾ ರಾಜಾರೋಷವಾಗಿ ಶೇ.10ರಷ್ಟು ಕಮೀಷನ್ ತೆಗೆದುಕೊಳ್ಳುವ ದಂಧೆ ನಿರಾತಂಕವಾಗಿ ನಡೆಯುತ್ತಿದೆ. ಈ ಬಗ್ಗೆ ಹಲವಾರು ಬಾರಿ ಶಾಸಕರ ಗಮನಕ್ಕೆ ತಂದಿದ್ದರೂ ಯಾವುದೇ ಉಪಯೋಗವಾಗಿಲ್ಲ. ಕಳೆದ ವರ್ಷ ಗಣಿ ದುರಂತ ಸಂಭವಿಸಿದ ಗುಮ್ಮಕಲ್ಲುಗುಡ್ಡದ ಪ್ರಕರಣ ಮುಚ್ಚಿಹಾಕಿ ಮತ್ತೆ ಗಣಿಗಾರಿಕೆ ಆರಂಭಿಸುವ ಯತ್ನ ನಡೆಸಲಾಗುತ್ತಿದ್ದು, ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಕ್ರಮಕೈಗೊಳ್ಳಿ ಎಂದು ಒತ್ತಾಯಿಸಿದರು.

ರೈತ ಮುಖಂಡರಾದ ಹಳ್ಳಿಕೆರೆಹುಂಡಿ ಭಾಗ್ಯರಾಜ್, ನಾಗರಾಜ್, ದೇವನೂರು ನಾಗೇಂದ್ರ, ಮಹೇಂದ್ರ, ಸಿದ್ದರಾಜು, ಕೆರೆಹುಂಡಿ ರಾಜಣ್ಣ, ಹಾಡ್ಯ ರವಿ, ಕಸುವಿನಹಳ್ಳಿ ಮಂಜೇಶ್, ಅರಳಿಕಟ್ಟೆ ಕುಮಾರ್ ಇದ್ದರು.

ಮರಿಯಾಲದ ಶ್ರೀಗಳಿಗೆ ಪಿತೃವಿಯೋಗ



ಚಾಮರಾಜನಗರ, ಜ.19– ತಾಲೂಕಿನ ಮರಿಯಾಲ ಶ್ರೀಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಅವರ ತಂದೆ ಭಜನೆ ಮಹಾದೇವಪ್ಪ (83) ಶುಕ್ರವಾರ ನಿಧನರಾದರು.

ತಾಲೂಕಿನ ಕುದೇರು ಗ್ರಾಮದಲ್ಲಿ ವಾಸವಾಗಿದ್ದ ಮಹಾದೇವಪ್ಪ, ಚಿಕ್ಕಂದಿನಿಂದಲೂ ಧಾರ್ಮಿಕ, ಶ್ರೀಮಠ, ದೇವಸ್ಥಾನ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳಲ್ಲೂ ಮುಂದಾಳತ್ವ ವಹಿಸುತ್ತಿದ್ದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಕಿರಿಯ ಪುತ್ರರಾದ ಪೂರ್ವಾಶ್ರಮದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಅವರನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ ಸ್ವಗ್ರಾಮ ಕುದೇರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಯು.ಎಂ.ಮಹದೇವಯ್ಯ



ಚಾಮರಾಜನಗರ, ಜ.19– ತಾಲೂಕಿನ ಹುರುಳಿನಂಜನಪುರ ನಿವಾಸಿ, ನಿವೃತ್ತ ಹೆಡ್ ಕಾನ್‌ಸ್ಟೆಬಲ್ ಯು.ಎಂ.ಮಹದೇವಯ್ಯ (90) ಶುಕ್ರವಾರ ನಿಧನರಾದರು. ಮೃತರು ಪತ್ರಕರ್ತ ಉ.ಮ.ಮಹೇಶ್ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ವಿದ್ಯುತ್ ತಗುಲಿ ಮುಸುಕಿನ ಜೋಳ ಭಸ್ಮ



ಕೊಳ್ಳೇಗಾಲ ತಾಲೂಕಿನ ಜಕ್ಕಳ್ಳಿ ಗ್ರಾಮದಲ್ಲಿ ಶೇಖರಿಸಿದ್ದ ಜೋಳದ ಕಡ್ಡಿಯ ರಾಶಿ ಆಕಸ್ಮಿಕ ವಿದ್ಯುತ್ ತಗುಲಿ ಭಸ್ಮವಾಗಿರುವುದು.

ಕೊಳ್ಳೇಗಾಲ, ಜ.19– ತಾಲೂಕಿನ ಜಕ್ಕಳ್ಳಿ ಗ್ರಾಮದಲ್ಲಿ ರೈತ ಮಹಿಳೆ ಜೀವನೋಪಾಯ ಮತ್ತು ಹಸಗಳ ಮೇವಿಗಾಗಿ ಶೇಖರಿಸಿದ್ದ ಜೋಳದ ಕಡ್ಡಿ ಮತ್ತು ಐದು ಚೀಲ ಮುಸಿಕನ ಜೋಳ ಆಕಸ್ಮಿಕವಾಗಿ ವಿದ್ಯುತ್ ತಗುಲಿ ಭಸ್ಮವಾಗಿದೆ. ಜಕ್ಕಳ್ಳಿ ಗ್ರಾಮದ ಇನಾಸಿಯಮ್ಮ ಎಂಬ ಮಹಿಳೆ ವ್ಯವಸಾಯದ ಜೊತೆ ಉಪಕಸುಬಾಗಿ ಹೈನುಗಾರಿಕೆ ಮಾಡುತ್ತಿದ್ದು, ಹಸುಗಳ ಮೇವಿಗಾಗಿ ಇಡಲಾಗಿದ್ದ 7 ಟ್ರ್ಯಾಕ್ಟರ್‌ಗಳಷ್ಟು ಜೋಳದ ಕಡ್ಡಿಯ ರಾಶಿ, 5 ಚೀಲ ಮುಸುಕಿನ ಜೋಳ, 4 ಚಾರ್‌ಪಾಲ್ ಸೇರಿದಂತೆ ಇನ್ನಿತರೆ ವಸ್ತುಗಳು ವಿದ್ಯುತ್ ತಂತಿಯಿಂದ ಬೆಂಕಿ ಕಾಣಿಸಿಕೊಂಡ ಪರಿಣಾಮ ಕ್ಷಣಾರ್ಧದಲ್ಲಿ ಭಸ್ಮವಾಗಿದೆ. ಈಗ ಅವರ ಹತ್ತು ಹಸುಗಳಿಗೆ ಮೇವಿಲ್ಲದಂತಾಗಿದ್ದು, ಅವರಿಗೆ ಮೇವು ಹಾಗೂ ಪರಿಹಾರವನ್ನು ಜಿಲ್ಲಾಡಳಿತ ಒದಗಿಸಿಕೊಡಬೇಕು ಎಂದು ರೈತ ಸಂಘದ ಮುಖಂಡರು ಒತ್ತಾಯಿಸಿದ್ದಾರೆ.

ಮಗುಚಿ ಬಿದ್ದ ಲಾರಿ: ಸಂಚಾರಕ್ಕೆ ಅಡಚಣೆ

ಗುಂಡ್ಲುಪೇಟೆ, ಜ.19– ಬಂಡೀಪುರಕ್ಕೆ ಹೋಗುವ ಎರಡನೇ ತಿರುವಿನ ರಸ್ತೆಯಲ್ಲಿ ಲಾರಿ ಮಗುಚಿ ಬಿದ್ದು, 24 ಗಂಟೆಗಳಾದರೂ ತೆರವುಗೊಳಿಸಿಲ್ಲ ಎಂದು ವಾಹನ ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಅರಣ್ಯದ ಬೈಪಾಸ್ ತಿರುವಿನಲ್ಲಿ ದೊಡ್ಡ ಲಾರಿ ಮಗುಚಿಬಿದ್ದಿರುವುದು.

ಗುರುವಾರ ಸಂಜೆ 6 ಗಂಟೆಯಲ್ಲಿ ಬಂಡೀಪುರದ ಮಾರ್ಗವಾಗಿ ತಮಿಳುನಾಡಿದತ್ತ ಹೋಗುತ್ತಿದ್ದ 12 ಚಕ್ರದ ಸರಕು ಸಾಗಾಣೆ ಲಾರಿ ಬೈಪಾಸ್ ತಿರುವಿನಲ್ಲಿ ಮಗುಚಿ ಬಿದ್ದಿದೆ. ಇದರಿಂದ ಸಂಚಾರಕ್ಕೆ ಅಡಚಣೆಯಾಗಿರುವ ಬಗ್ಗೆ ಪ್ರವಾಸಿಗರು ತಿಳಿದರೂ ಅರಣ್ಯ ಸಿಬ್ಬಂದಿ ಹಾಗೂ ಬಂಡೀಪುರ ಉಪಠಾಣೆ ಪೊಲೀಸ್ ಸಿಬ್ಬಂದಿ ಬೈಪಾಸ್ ರಸ್ತೆಯ ಪ್ರವೇಶದಲ್ಲಿ ಬ್ಯಾರಿಕೇಡ್ ಅಳವಡಿಸಲು ಮುಂದಾಗಿಲ್ಲ. ಈ ರಸ್ತೆಯಲ್ಲಿ ಸಂಚಾರಿಸುತ್ತಿದ್ದ ಎಲ್ಲಾ ವಾಹನಗಳೂ ಒಂದರ ಹಿಂದೆ ಒಂದು ನಿಂತು ಸುಮಾರು ಒಂದು ಕಿ.ಮೀ. ಉದ್ದಕ್ಕೂ ಟ್ರಾಫಿಕ್ ಜಾಂ ಆಗಿದೆ ಎಂದು ಆರೋಪಿಸಿದ್ದಾರೆ.

ಮಗುಚಿ ಬಿದ್ದ ಲಾರಿಯ ಟ್ಯಾಂಕಿನಿಂದ ಹೊರಚೆಲ್ಲಿದ ಡೀಸೆಲ್ ಅರಣ್ಯದತ್ತ ಹರಿದು ಹೋಗಿದೆ. ಆಕಸ್ಮಾತ್ ಬೆಂಕಿ ಬಿದ್ದರೆ ಕಾಡು ಹೊತ್ತಿಕೊಳ್ಳುವ ಅಪಾಯವಿದ್ದರೂ ಅರಣ್ಯ ಸಿಬ್ಬಂದಿ ಹಾಗೂ ಪೊಲೀಸರು ಲಾರಿಯನ್ನು ತೆರವುಗೊಳಿಸಲು ಮುಂದಾಗಿಲ್ಲ ಎಂದು ಪರಿಸರ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

> ಈ ಬಗ್ಗೆ ಗುರುವಾರ ಸಂಜೆಯೇ ವಿಷಯ ತಿಳಿದಿದೆ. ಪೊಲೀಸರ ಗಮನಕ್ಕೆ ತರಲಾಗಿದೆ. ಅವರು ಸಚಿವರ ಉಸ್ತುವಾರಿಗೆ ನಿಯೋಜನೆಯಾಗಿದ್ದರಿಂದ ತೆರವು ಕಾರ್ಯಾಚರಣೆ ವಿಳಂಬವಾಗಿದೆ. ತಕ್ಷಣ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
>
> -ಮಂಜುನಾಥ್, ಗೋಪಾಲಸ್ವಾಮಿ ಬೆಟ್ಟ ಅರಣ್ಯವಲಯದ ಆರ್‌ಎಫ್‌ಓ

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೋಲಾರ್ ವಾಟರ್ ಹೀಟರ್ Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker 9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072

ಸೈಟು ಮಾರಾಟಕ್ಕಿದೆ
1) 1010, ಚ.ಅಡಿಗಳು
2) 1160, ಚ.ಅಡಿಗಳು
ಉತ್ತರ ದಿಕ್ಕಿನ ನಿವೇಶನ 60 ಅಡಿ ರಸ್ತೆ, ವಿಜಯನಗರ SVEI ಸ್ಕೂಲ್ ಹತ್ತಿರ ಸಂಪರ್ಕಿಸಿ:
9741561111

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ರಸ್ಟೋರೆಂಟ್ ಒಂದಕ್ಕೆ ಕೌಂಟರ್ ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು. ಸಂಪರ್ಕಿಸಿ
9900661620

ಮನೆ ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ 3, ಬೆಡ್ ರೂಂವುಳ್ಳ ಮನೆ ದಟ್ಟಗಳ್ಳಿ, ಸೈಟ್ & ಹಳೆ ಮನೆ ಮತ್ತು ಹೊಸ ಮನೆ ಮಾರುವವರು ಕೊಳ್ಳುವವರು ಸಂಪರ್ಕಿಸಿ:
8618495118

40×60 SITE for SALE
MUDA - NORTH Facing
Rajeev Nagar 1st Stage
Near Gupta Store, MYSORE
Rs. 1 Crore
Call : 9845286583
Immediate Settlement

ಸೈಟು ಮಾರುವವರು ಮಾಲೀಕರು ಸಂಪರ್ಕಿಸಿ
ಲಾಲ್‌ಬಹದ್ದೂರ್ ಶಾಸ್ತ್ರಿ ನಗರ ಶಾಂತವೇರಿ ಗೋಪಾಲಗೌಡ ನಗರ, ವಸಂತ ನಗರ ಸಪ್ತಮಾತೃಕ ಲೇಔಟ್
Any Demension
9986420232
9945845302

ಸೈಟ್ ಮಾರಾಟಕ್ಕಿದೆ
30x40 N/F 60 ಅಡಿ ರಸ್ತೆ
SBM & Others ಲೇಔಟ್
ಯುನಿವರ್ಸಿಟಿ ಲೇಔಟ್ ಪಕ್ಕ
(ಶ್ರೀರಾಂಪುರ ರಿಂಗ್ ರೋಡಿನ ಒಳಗೆ ಇದೆ)
Ph: 8553955641

NEW HOUSE FOR SALE
30x40, Corner, 21 Squares Duplex, main door E/F, Newly built house for sale at D.No. 23, Srinagara Layout, Next to V.B. City, KRS Road, Mysuru. Contact:
9538072720/9108926072

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

MUDA App Sites JP Nagar Ring Road
30 x 40 Sites,
Price - 65 Lakhs
Bank Loan upto 75%,
Ready for Registration
300 mtrs from JP Nagar Ring Road
8660105902

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
9591012944

RS CONSTRUCTION
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ ಇಂದೇ ಸಂಪರ್ಕಿಸಿ
9538575009
7019151884

MUDA & RERA APPROVED SITE FOR SALE
30x40, West Facing @ Rs. 2300/- Sqft., with fencing done. Near KIT Engineering College. Next to Lalbahadur Shastri Nagar, Off T-Narasipura Main Road. Immediate Registration & Bank Loan Available.
Contact: 73377 86007

ಅಡುಗೆ ಭಟ್ಟರು ಬೇಕಾಗಿದ್ದಾರೆ
ಹಾಸ್ಟೆಲ್‌ಗಾಗಿ ಸೌತ್ ಇಂಡಿಯನ್ ಸಸ್ಯಹಾರಿ ಅಡುಗೆ ಭಟ್ಟರು (ಗಂಡಸರು) ಬೇಕಾಗಿದ್ದಾರೆ, ಸ್ಥಳ: ಮೈಸೂರು, ವಸತಿ ಉಚಿತ, ಸಂಬಳ: ರೂ. 25,000/–
ಮೊ: 9964242430/8660834599

ಮನೆ ಬಾಡಿಗೆಗೆ
ವಿಜಯನಗರ 2ನೇ ಹಂತ, ಕೆ.ಡಿ. ಸರ್ಕಲ್ ಹತ್ತಿರ, ಮೈಸೂರು. ಉತ್ತರ ಬಾಗಿಲು 25X30 ಅಳತೆ, 1 ಹಾಲ್, 2 ಬೆಡ್‌ರೂಂ, ಅಡುಗೆಮನೆ, ಬಾತ್‌ರೂಮ್ ಅಟ್ಯಾಚ್ಡ್ ಸೋಲಾರ್, ಇಂಡಿಪೆಂಡೆಂಟ್. 1 ಇಂಡಿಯನ್ ಟಾಯ್ಲೆಟ್
ಅಡ್ವಾನ್ಸ್: 85,000/– ಬಾಡಿಗೆ: 8,500/–
9449782376/9880359541

ಟೈಲರ್ ಬೇಕಾಗಿದ್ದಾರೆ
(ಎಲ್ಲಾ ತರಹದ ಬ್ಲೌಸ್ ಹೊಲಿಯುವ ಅನುಭವ ಇರುವವರಿಗೆ ಮೊದಲ ಆದ್ಯತೆ) ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಮೈಸೂರು ಕ್ವೀನ್ ಬೋಟಿಕ್ ಜೆ.ಪಿ.ನಗರ
8970607835
9108203132

Sudarshan Saur SOLAR WATER HEATER


SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
Captain, Cashier, KT/Asst., Supervisor, Waiters, Receptionist
Attractive Salary, PF & ESI with food and accommodation
ಸಂಪರ್ಕಿಸಿ ಪಾರ್ಕ್‌ಲೇನ್ ಹೋಟೆಲ್ 2720, ಹರ್ಷ ರಸ್ತೆ, ಮೈಸೂರು

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಮುಡಾ ಖಾತೆ ಸೈಟ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, 1124 ಚದುರಡಿ, ಜ್ಞಾನಭಾರತಿ ಲೇಔಟ್ ಏರ್ ಪೋರ್ಟ್ ಹಿಂಭಾಗದ ರಸ್ತೆ, ಬೆಲೆ ರೂ. 34 ಲಕ್ಷ, ಡೈರೆಕ್ಟ್ ಓನರ್
93421 23373

ಬೇಕಾಗಿದ್ದಾರೆ
ಮೈಸೂರಿನ ಹೋಟೆಲ್‌ನಲ್ಲಿ ಕೆಲಸ ಮಾಡಲು ನುರಿತ Front Office Receptionist ಮತ್ತು Security Guard, House Keeping ಹಾಗೂ ಕಡಕೊಳ ಕೈಗಾರಿಕೆಗಳಲ್ಲಿ ಕೆಲಸ ಮಾಡಲು Helpers ಬೇಕಾಗಿದ್ದಾರೆ (ಹುಡುಗರು/ಹುಡುಗಿಯರು) ಸಂಪರ್ಕಿಸಿ:
9620481414/9482350308

ಕಾರ್ಯದರ್ಶಿ ಬೇಕಾಗಿದ್ದಾರೆ
ಸಹಕಾರ ಸಂಘದಲ್ಲಿ ಸೇವಾನುಭವ ಇರುವ, ಕಂಪ್ಯೂಟರ್ ನಿರ್ವಹಣಾ ಜ್ಞಾನ, ಲೆಕ್ಕ ಪತ್ರ ನಿರ್ವಹಣೆ ಅನುಭವ ಇರುವವರು ಅಗತ್ಯ ದಾಖಲೆಯೊಂದಿಗೆ 21–1–24ರಂದು ಬೆಳಗ್ಗೆ 10.30ಕ್ಕೆ ಕೆಳಕಂಡ ವಿಳಾಸಕ್ಕೆ ನೇರ ಸಂದರ್ಶನಕ್ಕೆ ಹಾಜರಾಗಬಹುದು.
ಪುಷ್ಟಿ ಗೃಹ ನಿರ್ಮಾಣ ಸಹಕಾರ ಸಂಘ (ರಿ.) ಕೇಶವ ಮ್ಯಾನ್ಷನ್ ನಂ. 2839, 2ನೇ ಮಹಡಿ, 1ನೇ ಕ್ರಾಸ್, ಚಾಮುಂಡಿಪುರಂ, ಮೈಸೂರು

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ ವಸಂತನಗರ, ಶಾತಂವೇರಿ ಗೋಪಾಲಗೌಡ ನಗರ, ಸಪ್ತ ಮಾತೃಕ ಲೇಔಟ್, ಪೊಲೀಸ್ ಲೇಔಟ್, ಜೆ.ಎಸ್.ಎಸ್.ಲೇಔಟ್
9844436672

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಣಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ನಿವೇಶನ ಮಾರಾಟಕ್ಕಿದೆ
ಮೈಸೂರು ನಗರದ ದೇವನೂರು 3ನೇ ಹಂತ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 3042/B 80 ಅಡಿ ರಸ್ತೆ, ಪಶ್ಚಿಮ ದಿಕ್ಕಿನ ನಿವೇಶನ ಮಾರಾಟಕ್ಕಿದೆ.
Mob: 99809 88679

ಮಾರಾಟಕ್ಕಿದೆ
ಟಿ.ನರಸೀಪುರ ಮುಖ್ಯ ರಸ್ತೆ, ವರಕೋಡು ಹತ್ತಿರ, ಪೂರ್ವ ದಿಕ್ಕಿನ ಬಾಗಿಲು, ಎಸ್.ಬಿ.ಎಂ ಎನ್‌ಕ್ಲೇವ್ (ಲೇಔಟ್) 30x37.50
ರೂ.1600000.00
7676077678

ಹೊಸ ಮನೆ ಮಾರಾಟಕ್ಕಿದೆ
ಇಲವಾಲ ಬೈಪಾಸ್‌ರಸ್ತೆ ಸೆಂಟ್ ಜೋಸೆಫ್ ಸ್ಕೂಲ್, N.J. Hospital ಆಚಾರ್ಯ ವಿದ್ಯಾಕುಲ ಹತಿರ 30x40 ಅಳತೆಯ ಉತ್ತರ ದಿಕ್ಕಿನ 2BHK ಅಟ್ಯಾಚಡ್ ಬಾತ್ ರೂಂ ಫುಲ್ ಪರ್ನಿಷಡ್ ಮತ್ತು ಬೋರ್‌ವೆಲ್ ಇರುವಂತಹ Muda Approved. ನಂಜುಂಡಸ್ವಾಮಿ Ex-army
9483862050
7795316995

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

SHRIRAM LAND SITES
"Oxygen-2"
Rs.14.99L @ Lakhs Onwards
HD Kote Road, (Jayapura)
(90% Home Loan Available)
9686188919
7676644999

30' x 40' SITE FOR SALE
